1990ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು, ಸಂಸದೀಯ ವ್ಯವಹಾರ, ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ''.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಇದು ಸರಳವಾದ ತಿದ್ದುಪಡಿ. ತಮ್ಮ ಗಮನಕ್ಕೆ ಬಂದಂತೆ ಇವತ್ತು ನಾವು ಏನು ಕಾರ್ಪೊರೇಷನ್ ಆಕ್ಟ್‌ಗೆ ತಿದ್ದುಪಡಿಯನ್ನು ತಂದಿದ್ದೇವೆ. ಅಂತಹ ಒಂದು ಅವಕಾಶ ಮುನಿಸಿಪಲ್ ಆಕ್ಟ್‌ನಲ್ಲಿ ಏಕೆಂದರೆ ಕೆಲವು ಸಂದರ್ಭಗಳು ಬಂದಾಗ, ಆಕಸ್ಮಿಕವಾದ ಪ್ರಸಂಗಗಳು ಬಂದಾಗ ಅಥವಾ ಯಾವುದೇ ಒಂದು ಚುನಾವಣೆಯನ್ನು ನಡೆಸಲಿಕ್ಕೆ ಕಷ್ಟ ಆದಾಗ ಅದನ್ನು ಮುಂದುವರಿಸತಕ್ಕಂಥ ಅಧಿಕಾರ ಕಾರ್ಪೊರೇಷನ್ ಆಕ್ಟ್‌ನಲ್ಲಿಲ್ಲ. ಆದರೆ ಮುನಿಸಿಪಲ್ ಆಕ್ಟ್‌ನಲ್ಲಿ ಇಂತಹ ಒಂದು ಅವಕಾಶವಿದೆ. ಆದುದರಿಂದ ಮುನಿಸಿಪಲ್ ಆಕ್ಟ್‌ನಲ್ಲಿ ಯಾವ ಒಂದು ಪ್ರೊವಿಜನ್ ಇದೆ ಅದನ್ನು ಕಾರ್ಪೊರೇಷನ್ ಆಕ್ಟ್‌ನಲ್ಲಿ ಕೂಡ ನಾವು ಹಾಕಬೇಕೆಂಬ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ. ಮುನಿಸಿಪಲ್ ಆಕ್ಟ್‌ನಲ್ಲಿ ಏನಿದೆ ಅಂದರೆ ಚುನಾವಣೆಯನ್ನು ರದ್ದು ಮಾಡತಕ್ಕಂಥ ಅಧಿಕಾರ ಕೂಡ ಇದೆ. ಆದರೆ ಕಾರ್ಪೊರೇಷನ್ ಆಕ್ಟ್‌ನಲ್ಲಿ ಚುನಾವಣೆಯನ್ನು ರದ್ದು ಮಾಡತಕ್ಕ ಅಧಿಕಾರ ನಾವು ಕೊಡಲಿಲ್ಲ, ಬರೀ ಪೋಸ್ಟ್ ಪೋನ್ ಮಾಡತಕ್ಕ ಒಂದು ಅಧಿಕಾರವನ್ನು ಮಾತ್ರ ಸೀಮಿತವಾಗಿ ನಾವು ಇದರಲ್ಲಿ ಅಳವಡಿಸಿದ್ದೇವೆ. ಆದುದರಿಂದ ಇದು ಬಹಳ ಸರಳವಾದ ತಿದ್ದುಪಡಿ ಈವೊಂದು ತಿದ್ದುಪಡಿಯ ಆಧಾರದ ಮೇಲೆ ನಾವು ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಗಳನ್ನು ಮುಂದುವರಿಸಿದ್ದೇವೆ. ಚುನಾವಣೆಗಳನ್ನು ಮುಂದುವರಿಸಿದ ಮೇಲೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಈ ಅಸ್ತ್ರವನ್ನು ಉಪಯೋಗ ಮಾಡಿದ ಮೇಲೆ, ಅದರ ಪ್ರಯೋಜನ ಪಡೆದ ಮೇಲೆ ನಾವು ಬರೇ ಆರ್ಡಿನೆನ್ಸ್‌ನ್ನು ಲ್ಯಾಪ್ಸ್ ಮಾಡಲಿಕ್ಕೆ ಬಿಡತಕ್ಕಂಥಾದ್ದು ಸರಿಯಲ್ಲ, ಅದನ್ನು ಈ ಸದನದಲ್ಲಿ ತರಬೇಕು, ಸದನದಲ್ಲಿ ಮಂಜೂರಾತಿಯನ್ನು ಪಡೆಯಬೇಕೆನ್ನುವ ಭಾವನೆಯನ್ನು ಇಟ್ಟುಕೊಂಡು ಈ ತಿದ್ದುಪಡಿಯನ್ನು ಇವತ್ತು ತಂದಿದ್ದೇವೆ. ಏಕೆಂದರೆ. ಮುಂದೆ ಇಂತಹ ಸಂದರ್ಭ ಬಂದಾಗ ನಾವು ಆರ್ಡಿನೆನ್ಸ್‌ಗೆ ಮೊರೆ ಹೋಗುವ ಬದಲು ಕಾನೂನಿನಲ್ಲಿ ಸ್ಥಿರವಾದಂಥ ಒಂದು ಪ್ರಸ್ತಾವನೆ ಇದ್ದರೆ. ಇದನ್ನು ಅನುಸರಿಸಿ ಮುಂದೆ ಬರತಕ್ಕ ಯಾವುದೇ ಪ್ರಸಂಗಗಳನ್ನು ಎದುರಿಸಲಿಕ್ಕೆ ಅನುಕೂಲವಾಗುತ್ತದೆನ್ನುವ ದೃಷ್ಟಿಯಿಂದ ಈ ಮಸೂದೆಯನ್ನು ಇವತ್ತು ಮಂಡಿಸಿದ್ದೇವೆ.

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದಹಾಗೆ, ಇದು ಒಂದು ಅತಿ ಸರಳವಾದ ತಿದ್ದುಪಡಿಯಲ್ಲ. ಇಲ್ಲಿ ಸರ್ಕಾರ ಅನ್‌ಲಿಮಿಟೆಡ್ ಪವರ ತೆಗೆದುಕೊಳ್ಳುತ್ತಿದೆ. ಮನಸ್ಸಿಗೆ ಬಂದಹಾಗೆ ಚುನಾವಣೆ ಮಾಡುವುದು. ಮನಸ್ಸಿಗೆ ಬಂದಹಾಗೆ ಚುನಾವಣೆಯನ್ನು ಪೋಸ್ಟ್‌ಪೋನ್ ಮಾಡುವುದು ಈ ತರಹ ಬ್ಲಾಂಕೆಟ್ ಪವರ್ ತೆಗೆದುಕೊಳ್ಳುವುದು ಯಾವಾಗಲೂ ಸರಿಯಲ್ಲ. ಚುನಾವಣೆ ಸರಿಯಾಗಿ ಮತ್ತು ಫೇರಾಗಿ ನಡೆಯಬೇಕಾದರೆ ಅದರಲ್ಲಿ ಸರ್ಕಾರದ ಯಾವುದೇ ತರಹದ ಹಸ್ತಕ್ಷೇಪ ಇರಬಾರದು. ಈವೊಂದು ಬ್ಲಾಂಕೆಟ್ ಪ್ರೊವಿಜನ್‌ನಿಂದ ಇವತ್ತು ಈ ಅಧಿಕಾರವನ್ನು ನಾವು ಸರ್ಕಾರಕ್ಕೆ ಕೊಟ್ಟರೆ, ಅವರು ಚುನಾವಣೆಯನ್ನು ಮಾಡುವುದಿಲ್ಲ. ಏಕೆಂದರೆ. ನಾವು ನೋಡಬಹುದು. ೨೫ನೇ ಫೆಬ್ರವರಿಯಲ್ಲಿ ಚುನಾವಣೆ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿತ್ತು. ಸರ್ಕಾರಿ ನೌಕರರು ಸ್ಟ್ರೈಕ್‌ನಲ್ಲಿ ಹೋಗುತ್ತಾರೆನ್ನುವುದು ಅವರಿಗೆ ಮುಂಚಿತವಾಗಿ ಗೊತ್ತಿತ್ತು ಇಂತಹ ಸಮಯದಲ್ಲಿ ಅವರು ಚುನಾವಣೆ ಮಾಡುತ್ತೇವೆಂದು ಘೋಷಣೆ ಮಾಡಬಾರದಾಗಿತ್ತು ಅಥವಾ ಇವರಿಗೆ ಪ್ರಿಕಾಷನರಿ ಮೆಜರ್ ತೆಗೆದುಕೊಳ್ಳಲಿಕ್ಕೆ ಸಾಧ್ಯವಿತ್ತು. ಇವತ್ತು ಫೆಬ್ರವರಿ ೯ನೇ ತಾರೀಖಿಗೆ ಚುನಾವಣೆಯನ್ನು ಮುಂದೂಡುವ ಬಗ್ಗೆ ಇವರು ಆರ್ಡಿನೆನ್ಸ್ ಇಶ್ಯು ಮಾಡುತ್ತಾರೆ ಆದರೆ ಇವರು ಚುನಾವಣೆ ಪೋಸ್ಟ್ ಪೋನ್ ಮಾಡಬೇಕೆಂದು ೧೫ನೇ

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಾರೀಖಿಗೇ ನಿರ್ಣಯ ತೆಗೆದುಕೊಂಡಿದ್ದಾರೆ. ಸರ್ಕಾರವು ಚುನಾವಣೆಯನ್ನು ಮುಂದಕ್ಕೆ ಹಾಕಿದೆಯೆಂದು ೧೬ನೇ ತಾರೀಖು ಪತ್ರಿಕೆಯಲ್ಲಿ ಬಂದಿದೆ. ಹಾಗಾದರೆ ಮಾನ್ಯ ಸಚಿವರು ಹೇಳಿದಹಾಗೆ ಅವರಿಗೆ ಅಧಿಕಾರ ಇಲ್ಲದೇ ಇದ್ದಾಗ ಯಾವ ಪ್ರಕಾರ ಫೆಬ್ರುವರಿ ೧೫ನೇ ತಾರೀಖಿಗೆ ಅಧಿಕಾರವನ್ನು ಚಲಾಯಿಸಿದರು? ಚುನಾವಣೆಯನ್ನು ಮುಂದೆ ಹಾಕುವುದಕ್ಕೆ ೧೫ನೇ ತಾರೀಖಿಗೆ ನಿರ್ಣಯ ತೆಗೆದುಕೊಂಡಿದ್ದಾರೆ. ತಾವು ಅಧಿಕಾರ ಇಲ್ಲದೆಯೇ ನಿರ್ಣಯ ತೆಗೆದುಕೊಂಡಿದ್ದೀರಿ. ಮತ್ತೆ ಯಾವ ನೋಟಿಫಿಕೇಶನ್ ಅನ್ನೂ ನಾವು ನೋಡಿಲ್ಲ. ಎರಡು ಬಾರಿ ಚುನಾವಣೆ ಮುಂದೆ ಹೋಗಿದೆ. ೨೫ನೇ ಫೆಬ್ರುವರಿಗೆ ಇದ್ದ ಚುನಾವಣೆಯನ್ನು ೨೨ನೇ ಏಪ್ರಿಲ್‌ಗೆ ಇಟ್ಟರು ೨೭ಕ್ಕೆ ಇದ್ದ ಚುನಾವಣೆಯನ್ನು ಪುನಃ ೨೮ಕ್ಕೆ ಇಟ್ಟರು ಹೀಗೆ ೨ ಬಾರಿ ಚುನಾವಣೆ ಮುಂದಕ್ಕೆ ಹೋಗಿದೆ. ಹಾಗಾದರೆ ಆ ನೋಟಿಫಿಕೇಶನ್‌ಗಳು ಎಲ್ಲಿವೆ? ಯಾವ ಕಾನೂನಿನ ಅಧಿಕಾರದಿಂದ ಈ ಚುನಾವಣೆಯನ್ನು ಮುಂದೆ ಹಾಕಿದಿರಿ? ಸೆಕ್ಷನ್ ೫೩ರಲ್ಲಿ ಈಗ ಏನಿದೆ ಅಂದರೆ "Power to make rules regulating the election of Councillors" ಎಂದು ಇದೆ In the heading 'Control of election and powers to make amendment' ಎಂದು ಇದೆ ಇವರಿಗೆ ಇದರಲ್ಲಿ ಅಮೆಂಡ್‌ಮೆಂಟ್ ಬೇಕಾಗಿದೆ. ಈಗಾಗಲೇ ಕಂಟ್ರೋಲ್ ಇದೆ, ಇವತ್ತು ಇಡೀ ಎಲೆಕ್ಷನ್ ಯಾವ ಪ್ರಕಾರ ನಡೆಯ ಬೇಕು ಎಂದು ಇದರ ಬಗ್ಗೆ ರೂಲ್ ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಇವತ್ತು ಸೆಕ್ಷನ್ ೫೫ ಪ್ರಕಾರ ಅಮೆಂಡ್‌ಮೆಂಟ್‌ನ್ನು ಕೇಳುತ್ತಿದ್ದಾರೆ. ಸೆಕ್ಷನ್ ೫೫ ಪ್ರಕಾರ, in Page 45 of the Act :

> "The suspension of poll in cases of any interruption by riot, violence or any other sufficient cause and holding of the fresh poll."

ಈಗಾಗಲೇ ಸರ್ಕಾರಕ್ಕೆ ಅಧಿಕಾರ ಇದೆ. Suppose sufficient cause of a strike by the government employees were to be there, the government could have invoked Section 55 Clause (10).

ಕ್ಲಾಸ್ ೧೦ರ ಪ್ರಕಾರ ಸರ್ಕಾರಕ್ಕೆ ಚುನಾವಣೆಯನ್ನು ಮುಂದೆ ಹಾಕುವುದಕ್ಕೆ ಸಾಧ್ಯ ಇತ್ತು. ಈಗ ರೂಲ್ ೨೬ನ್ನು ನಾನು ಓದುತ್ತೇನೆ.

(ಉಪಾಧ್ಯಕ್ಷಣಿಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಆಸೀನರಾದರು)

> 'Adjournment of a poll in emergencies : If at any election the proceedings at any polling station or interruption or obstruction by riot or by violenc and if under the section, it is not possible to take the poll at any polling station on account of the natural calamity or any other sufficient cause, the Presiding Officer of such polling station shall announce the adjournment of poll."

Supposing the strike of the government employees was the reason very, well as per section 55 rule 26, the government could have postponed the elections ಆದರೆ ಇವತ್ತು ಏನು ಆಗುತ್ತಿದೆ ಎಂದರೆ, Government wants to take unlimited power in the hands ಅಂದರೆ ಚುನಾವಣೆಯನ್ನು ಮನಸ್ಸಿಗೆ ಬಂದಹಾಗೆ ಮಾಡಬಹುದು ಯಾವಾಗ ಈ ಟರ್ಮ್ ೪ ವರ್ಷ ಇದ್ದದ್ದು ೫ ವರ್ಷ ಮಾಡಬೇಕೆಂದು ಬಿಲ್ ಮೂವ್ ಮಾಡಿದಾಗ ನಾವು ವೆಲಕಮ್ ಮಾಡಿದ್ದೆವು. ಆ ಟೈಮ್‌ನಲ್ಲಿ ಒಂದು ಸಲಹೆ ಮಾಡಿದೆವು. ಡಿಲಿಮಿಟೇಷನ್ ಮಾಡಿ ಈ ಚುನಾವಣೆ ಮಾಡಿರಿ ಎಂದು ಹೇಳಿದ್ದೆವು. ಎಷ್ಟೋ ಕಡೆ ಸಮಸ್ಯೆ ಇದೆ. ಇವತ್ತು unwieldy wards ಆಗಿವೆ, divisions ಆಗಿದೆ. ಆಗ ಪರಿಶೀಲನೆ ಮಾಡುತ್ತೇವೆ ಎಂದು ಭರವಸೆಯನ್ನು ಕೊಟ್ಟರು. ಆಗ ಆ ಕಡೆಯ ಮಾನ್ಯ ಸದಸ್ಯರು ಡಿಲಿಮಿಟೇಷನ್ ಮಾಡಬೇಕು ಅಂತ ಒತ್ತಾಯ ಮಾಡಿದ್ದರು. ಆದರೆ ಇವತ್ತು ಏನು ಮಾಡಿದರು ಅಂದರೆ, ಮತ್ತೊಂದು ಅಧಿಕಾರವನ್ನು ಅದೇ ಬಿಲ್‌ನಲ್ಲಿ ತೆಗೆದುಕೊಂಡರು. ಅಸೆಂಬ್ಲಿ ಚುನಾವಣೆಯ ವೋಟರ್ಸ್ ಲಿಸ್ಟ್ ಪ್ರಕಾರ ಚುನಾವಣೆ ಮಾಡುತ್ತೇವೆ ಎಂದು ಮತ್ತೊಂದು ಅಧಿಕಾರ ತೆಗೆದುಕೊಂಡರು. ೧-೪-೮೯ರ ಪ್ರಕಾರ ಏನು

ವೋಟರ್ ಲಿಸ್ಟ್ ಇದೆ ಅದರ ಪ್ರಕಾರ ಚುನಾವಣೆ ಮಾಡುವಂಥಾದ್ದು. ಅದಕ್ಕೆ ಮನ್ನಣೆ ಕೊಡದೆ ಇದ್ದಿದ್ದರೆ ವೋಟರ್ಸ್ ಲಿಸ್ಟ್ ರಿವಿಜನ್ ೧–೧–೯೦ಕ್ಕೆ ಆಗಬೇಕಿತ್ತು. ಇವತ್ತು ನೀವು ಚುನಾವಣೆಯನ್ನು ಮಾಡಲಿಲ್ಲ ಮತ್ತು ೧–೧–೯೦ಕ್ಕೆ ಯಾರು ಎಲಿಜಿಬಲ್ ವೋಟರ್ಸ್ ಇದ್ದಾರೆ. ಅವರಿಗೂ ನೀವು voting right defry ಮಾಡಿದ್ದೀರಿ. ಇದರಿಂದ, ಸರ್ಕಾರ ಯಾವ ಪ್ರಕಾರ ನಡೆಯುತ್ತಾ ಇದೆ ಎಂಬುದನ್ನು ನಾವು ನೋಡಬೇಕಾಗಿದೆ. ಸರ್ಕಾರದಲ್ಲಿ ಯಾವುದೇ ಒಂದು ಧ್ಯೇಯ ಇಲ್ಲ, ಧೋರಣೆ ಇಲ್ಲ, ಯಾವುದೇ ಒಂದು ನಿರ್ದಿಷ್ಟವಾದ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳುತ್ತಾ ಇಲ್ಲ. ಹೀಗಾಗಿ ಇವತ್ತು ಈ ಒಂದು ಅಮೆಂಡ್‌ಮೆಂಟನ್ನು ಏನು ಮಾಡಲಿಕ್ಕೆ ಹೊರಟಿದ್ದಾರೆ ? ನನ್ನ ದೃಷ್ಟಿಯಿಂದ ಇದು ಸರಿಯಲ್ಲ. ಇಂತಹ ಅಧಿಕಾರವನ್ನು ನಿಮ್ಮ ಕೈಗೆ ಕೊಟ್ಟರೆ, ಚುನಾವಣೆಯನ್ನು ನೀವು ಮಾಡುವುದಿಲ್ಲ, ಇವತ್ತು ನನಗೆ ಡೌಟ್ ಇದೆ, ೨೫ನೇ ತಾರೀಖು ಚುನಾವಣೆ ಮಾಡುತ್ತೀರೋ ಇಲ್ಲವೋ ಗ್ಯಾರಂಟಿ ಇಲ್ಲ. ದಿನಾಂಕ ೨೫ರ ಚುನಾವಣೆಯನ್ನು ಮುಂದೆ ಹಾಕಬೇಕೆಂದು ಸರ್ಕಾರ ವಿಚಾರ ಮಾಡುತ್ತಿದೆ ಎಂಬುದನ್ನು ಕೇಳುತ್ತಿದ್ದೇವೆ. ಹೀಗಾಗಿ ಇಂತಹ ಬ್ಲಾಂಕೆಟ್ ಪವರನ್ನು ನಾವು ಕೊಟ್ಟರೆ ಇದರಿಂದ ಸರ್ಕಾರಕ್ಕೆ ಸರ್ವಾಧಿಕಾರ ಸಿಕ್ಕಿ ಚುನಾವಣೆ ಮಾಡದೇ ಇರತಕ್ಕ ಪರಿಸ್ಥಿತಿ ಬರಬಹುದು ಅದರ ಸಲುವಾಗಿ, ನಾನು ಒಂದು ಸಲಹೆ ಮಾಡುತ್ತೇನೆ. ಇಂತಹ ಒಂದು ಅಧಿಕಾರ ಬೇಕಾದರೆ, period specify ಮಾಡಿ ಸರ್ಕಾರ ಚುನಾವಣೆಯನ್ನು ಹೆಚ್ಚು ಅಂದರೆ ೨ ತಿಂಗಳು, ೩ ತಿಂಗಳು ಪೋಸ್ಟ್‌ಪೋನ್ ಮಾಡಬಹುದು. ಇಂತಹ ಒಂದು ಲಿಮಿಟೇಷನ್ ಹಾಕಿ ಅದು ಇವತ್ತು ಇಲ್ಲ. ಹೀಗಾಗಿ ಇವತ್ತು ಇಂಡಿಪೆಂಡೆಂಟ್ ಪವರ್ಸ್ ನಿಮ್ಮ ಕೈಗೆ ಕೊಟ್ಟರೆ ನೇರವಾಗಿ ಚುನಾವಣೆ ನಡೆಯಬೇಕು, ಸರ್ಕಾರದ ಹಸ್ತಕ್ಷೇಪ ಇರಬಾರದು ಎಂದು ಏನು ಹೇಳುತ್ತೇನೆ ಅದಕ್ಕೆ ಇದು ವಿರುದ್ಧವಾಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಆ ಮೇಲೆ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ನೋಡಿದರೆ, ಅದರಲ್ಲಿ ಏನೇನೂ ಇಲ್ಲ.

It says :

"It became necessary to postpone the poll to the City Corporation in the State, scheduled to be held on 25th February, 1990, on account of the reasons beyond the control of the Government."

This is the statement of objects and reasons. ಇದೇ ಒಂದು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ನಿಮಗೆ ಇದ್ದರೆ, You could have invokedr ule 26 and asked the Returning Offi ers to postpone the election. ಇದರ ಬಗ್ಗೆ ಬಿಲ್ ತರತಕ್ಕಂಥ ಅವಶ್ಯಕತೆ ಏನಿತ್ತು, ಅಮೆಂಡ್‌ಮೆಂಟ್ ಮಾಡುವ ಅವಶ್ಯಕತೆ ಏನಿತ್ತು ? ಯಾವುದೇ ಅವಶ್ಯಕತೆ ಇಲ್ಲ. ಸಿಟಿ ಕಾರ್ಪೊರೇಷನ್ ಚುನಾವಣೆಗಳನ್ನು ಏಪ್ರಿಲ್ ೨೫ಕ್ಕೆ ನಿಗದಿ ಮಾಡಿದ್ದೀರಿ. ಯಾವುದೇ ಕಾರಣದಿಂದ ಚುನಾವಣೆಯನ್ನು ಮಾಡುವುದಕ್ಕಾಗುವುದಿಲ್ಲ. On 25-2-1990 you could have taken t e benefit of Section 55 and Rule 26 and asked the Returning Officers to postpone the election. ಆದ್ದರಿಂದ ಈ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ಏನಿದೆ ಅದು ಸ್ಯಾಟಿಸ್‌ಫ್ಯಾಕ್ಟರಿ ಇಲ್ಲ. ಅದಕ್ಕಾಗಿ ಈ ಬಿಲ್ಲನ್ನು ನಾನು ವಿರೋಧ ಮಾಡುತ್ತಿದ್ದೇನೆ. This is a black Bill and we oppose it.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಅಧ್ಯಕ್ಷರೇ, ನಾನು ಈ ವಿಧೇಯಕವನ್ನು ವಿರೋಧಿಸುತ್ತಾ, ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಪ್ರಾರಂಭದಲ್ಲಿ ಚುನಾವಣೆಯನ್ನು ನಡೆಸುವ ಬಗ್ಗೆ ಒಂದು ತೀರ್ಮಾನ ಈ ಸಭೆಯಲ್ಲಿ ಬಂದಾಗ, ಮಾನ್ಯ ಸಂಸದೀಯ ಸಚಿವರ ಗಮನಕ್ಕೆ, ಬೆಳಗಾವಿ ನಗರಸಭೆಯ ವಿಭಾಗಗಳ ಬಗ್ಗೆ ಅನೇಕ ಗೊಂದಲ ಇದೆ, ಮತದಾರರ ಸಂಖ್ಯೆಯಲ್ಲಿ ಒಂದು ವಿಭಾಗಕ್ಕೂ, ಮತ್ತೊಂದು ವಿಭಾಗಕ್ಕೂ ಬಹಳ ಅಂತರ ಇದೆ, ಆದ್ದರಿಂದ ಅಲ್ಲಿಯ ವಿಭಾಗಗಳನ್ನು ಪರಿಣಾಮಕಾರಿಯಾಗಿ ವಿಂಗಡಣೆ ಮಾಡಿ ಚುನಾವಣೆಯನ್ನು ನಡೆಸಿದರೆ, ಅಲ್ಲಿಯ ಕನ್ನಡಿಗರಿಗೆ ಪರಿಣಾಮಕಾರಿಯಾದ ನ್ಯಾಯ ದೊರಕಿ, ಅಲ್ಲಿನ ಮಹಾನಗರ ಪಾಲಿಕೆಯಲ್ಲಿ ಕನ್ನಡದವರೆ ಮೇಯರ್ ಆಗಿ ಬರುವುದಕ್ಕೆ ಸಾಧ್ಯತೆ ಇದೆ ಎಂಬ ವಿಷಯವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆ. ಮಾನ್ಯ ಸಚಿವರು ತರಾತುರಿಯಿಂದ ಇದೇ ಸಭೆಯಲ್ಲಿ ಉತ್ತರ ಕೊಡುತ್ತಾ ಹೇಳಿದರು. ಇನ್ನು ಚುನಾವಣೆಗಳನ್ನು ಮುಂದಕ್ಕೆ ಹಾಕಬಾರದು, ಈಗಾಗಲೇ

ಚುನಾವಣೆಗಳು ಮುಂದಕ್ಕೆ ಹೋಗುತ್ತಿದೆ ಎಂದು ಜನಗಳಿಂದ ಬಹಳ ಟೀಕೆಗಳು ಬರುತ್ತಿವೆ ಮತ್ತು ನ್ಯಾಯಾಲಯಗಳಿಗೂ ಅರ್ಜಿಯನ್ನು ಸಲ್ಲಿಸುತ್ತಿದ್ದಾರೆ, ಆದ್ದರಿಂದ ಯಾವ ಕಾರಣಕ್ಕೂ ಚುನಾವಣೆಗಳನ್ನು ಮುಂದೂಡುವುದಿಲ್ಲ ಎಂದು ಹೇಳಿದರು. ಇವತ್ತು ಈ ಚುನಾವಣೆಯ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಳ್ಳದೇ, ಸ್ವೇಚ್ಛಾಚಾರವಾಗಿ ಚುನಾವಣೆಯನ್ನು ಮುಂದೂಡುತ್ತಾ ಇರತಕ್ಕಂಥಾದ್ದು ಸರ್ವಾಧಿಕಾರ ಮನೋಭಾವನೆಯಾಗುತ್ತಾ ಇದೆ ಅದರಲ್ಲೂ ಪ್ರಜಾಪ್ರಭುತ್ವದ ಸಂಪೂರ್ಣ ಕೊಲೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾವು ಹೇಳಬೇಕಾಗುತ್ತದೆ. ನಿಮಗೆ ಬಹುಮತ ಇದೆ ಎಂದು ಇಚ್ಛೆ ಬಂದಂತೆ, ಸ್ವೇಚ್ಛಾನುಸಾರವಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡತಕ್ಕಂಥಾದ್ದು ಸರಿಯಾದ ಕ್ರಮವಲ್ಲ. ೧೯ನೇ ತಾರೀಖು ಇದ್ದಕ್ಕಿದ್ದ ಹಾಗೆ ಸಚಿವಸಂಪುಟದ ಸಭೆ ನಡೆದು ಚುನಾವಣೆಗಳು ಸಮಗ್ರವಾಗಿ ರದ್ದು ಎಂದು ಹೇಳಿದರು. ಇಡೀ ರಾಜ್ಯದಲ್ಲಿ ಚುನಾವಣೆ ರದ್ದು, ಎಂದು ಪತ್ರಿಕೆಗಳಲ್ಲಿ ಬಂತು. ಪುನಃ ಈ ಚುನಾವಣೆಗಳನ್ನು ಮುಂದೂಡಿದ್ದೇವೆ ಎಂದು ಇನ್ನೊಂದು ದಿನಾಂಕವನ್ನು ಕೊಟ್ಟರು. ಮತ್ತೆ ಚುನಾವಣೆ ಮುಂದಿನ ಏಪ್ರಿಲ್ ೨೯ನೇ ತಾರೀಖು ಎಂದು ಹೇಳಿದರು. ಈ ರೀತಿ ಸುಮಾರು ೭೫–೮೦ ದಿವಸಗಳ ಕಾಲ ಈ

೧–೩೦ ಪಿ ಎಂ

ಚುನಾವಣೆಗಳನ್ನು ಮುಂದೂಡಿ, ಹಿಂದೆ ನಾಮಪತ್ರಗಳನ್ನು ಸಲ್ಲಿಸಿರತಕ್ಕಂಥ ಅಭ್ಯರ್ಥಿಗಳೇ ಉಳಿದಿರತಕ್ಕಂಥಾದ್ದು ಬಹುಶ ಈ ದೇಶದಲ್ಲಿ ಎಲ್ಲೂ ನಡೆದಿಲ್ಲ. ಇಂತಹ ಒಂದು ಅತ್ಯಂತ ಘೋರ ದುರಂತ ಎಂದೂ ನಡೆದಿಲ್ಲ. ಇವತ್ತು ಬೆಳಗಾವಿ ನಗರಸಭೆ ಬಗ್ಗೆ ಹೇಳುವುದಾದರೆ, ಅಲ್ಲಿ ವಿಭಾಗಗಳ ವಿಂಗಡಣೆ ಸಂಪೂರ್ಣವಾಗಿ, ಸರಿಯಾಗಿ ನಡೆದಿಲ್ಲ. ಅಲ್ಲಿ ಪ್ರತಿ ವಿಭಾಗದಲ್ಲೂ ಅನ್ಯಾಯ ನಡೆದಿವೆ. ಕೆಲವು ಕಡೆ ಕಡಿಮೆ ಮತದಾರರು ಇದ್ದಾರೆ, ಕೆಲವು ಕಡೆ ಹೆಚ್ಚು ಮತದಾರರು ಇದ್ದಾರೆ. ಅದೇ ಪ್ರಕಾರ ಬೆಂಗಳೂರು ನಗರದಲ್ಲೂ ಒಂದು ಕಡೆ ೪೫ ಸಾವಿರ ಮತದಾರರು ಇದ್ದಾರೆ, ಮತ್ತೊಂದು ಕಡೆ ೧೦ ಸಾವಿರ ಮತದಾರರು ಇದ್ದಾರೆ. ಮೈಸೂರು ನಗರದಲ್ಲಿ ಒಂದು ವಿಭಾಗದಲ್ಲಿ ಕೇವಲ ೬೦೦ ಮತದಾರರು ಇದ್ದರೆ. ಮತ್ತೊಂದು ಕಡೆ ೨೫ ಸಾವಿರ ಮತದಾರರಿಗೆ ಒಂದು ವಿಭಾಗ ಇದೆ. ಈ ರೀತಿಯಾಗಿ ಕರ್ನಾಟಕದಲ್ಲಿ ಅನೇಕ ನಗರಪಾಲಿಕೆಗಳು, ಸ್ಥಳೀಯ ಸಂಸ್ಥೆಗಳು ಈ ವಿಭಾಗಗಳ ವಿಚಾರದಲ್ಲಿ ಬಹಳ ಗೊಂದಲದಲ್ಲಿವೆ. ವಿಭಾಗಗಳು ವಿಂಗಡಣೆ ಸಂಪೂರ್ಣವಾಗಿ ಸಮಗ್ರವಾಗಿ ನಡೆದಿಲ್ಲ. ಇದನ್ನು ಸರಕಾರ ಮನಸದಟ್ಟು ಮಾಡಿಕೊಳ್ಳ ಬಹುದಾಗಿತ್ತು ಚುನಾವಣೆಗಳನ್ನು ಏಪ್ರಿಲ್ ೨೯ಕ್ಕೆ ಮುಂದೂಡಿರುವುದರಿಂದ ಈ ಒಂದು ವೇಳೆಯಲ್ಲಾದರೂ ಈ ವಿಭಾಗಗಳನ್ನು ಸರಿಪಡಿಸಿ ಕ್ರಮಬದ್ಧ ಮಾಡಿ ಚುನಾವಣೆ ನಡೆಸಬಹುದಾಗಿತ್ತು. ಆದರೆ ಸರಕಾರ ಆ ಒಂದು ನೀತಿಗೆ ಏನು ಕೈಹಾಕಿದೆ ಇದು ಅತ್ಯಂತ ಶೋಚನೀಯವಾಗಿದೆ. ಈ ವಿಭಾಗಗಳಲ್ಲಿ ಬಹಳ ಅನ್ಯಾಯವಾಗಿದೆ ಎಂಬ ಮಾತನ್ನು ಸರಕಾರದ ಗಮನಕ್ಕೆ ತರುತ್ತೇನೆ. ಇವತ್ತೂ ಸಹ ನಾನು ಒಂದು ಮಾತು ಹೇಳುತ್ತೇನೆ. ಬೆಳಗಾವಿ ಬಗ್ಗೆ ಸರಕಾರಕ್ಕೆ ನನ್ನದೊಂದು ಮನವಿ ಇದೆ ಬೆಳಗಾವಿ ಮಹಾನಗರ ಪಾಲಿಕೆಯ ಚುನಾವಣೆಯನ್ನು ಸರಕಾರ ದಯವಿಟ್ಟು ಮುಂದೂಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಮಿಕ್ಕ ಚುನಾವಣೆಗಳನ್ನು ನೀವು ಯಾವತ್ತು ನಡೆಸುತ್ತೀರೋ ನಡೆಸಿ. ಆದರೆ ಬೆಳಗಾವಿ ನಗರಸಭೆಯ ಚುನಾವಣೆಯನ್ನು ತಾವು ಮುಂದೂಡತಕ್ಕಂಥ ತೀರ್ಮಾನವನ್ನು ಕೈಗೊಳ್ಳಿ. ಈ ರೀತಿ ತೀರ್ಮಾನ ಕೈಗೊಳ್ಳುವುದರಿಂದ ಅಲ್ಲಿ ಅನೇಕ ಸಮಸ್ಯೆಗಳು ಬಗೆಹರಿಯುತ್ತವೆ. ಬೆಳಗಾವಿಯಲ್ಲಿ ಈಗಿರುವ ವಿಭಾಗಗಳ ಪ್ರಕಾರ ಚುನಾವಣೆ ಮಾಡಿದರೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರಿಗೆ ಅನುಕೂಲವಾಗುತ್ತದೆ...

SRI D. B CHANDREGOWDA.—I am on a Point of Order. The House is not in order. Conference within the House is prohibited. This is not permissible. ಅಲ್ಲೊಂದು ಕಾನ್‌ಫರೆನ್ಸ್ ಇಲ್ಲೊಂದು ಕಾನ್‌ಫರೆನ್ಸ್ ನಡೆಯುತ್ತಿದೆ. ಹಾಗಾದರೆ, ಇಲ್ಲಿ ಏನು ಮಾತನಾಡುವುದು ನಾವು ಏನು ಮಾಡಬೇಕು.

ಉಪಾಧ್ಯಕ್ಷರು.— ದಯವಿಟ್ಟು ಎಲ್ಲರೂ ಅವರವರ ಜಾಗಕ್ಕೆ ಹೋಗಿ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.— ಬೆಳಗಾವಿ ನಗರಸಭೆಯಲ್ಲಿ ಅನೇಕ ಸಮಸ್ಯೆಗಳು ಉದ್ಭವವಾಗಿದೆ. ಈಗಿರುವ ಪ್ರಕಾರ ಬೆಳಗಾವಿ ನಗರಸಭೆ ಚುನಾವಣೆ ನಡೆಯುವುದಾದರೆ, ಈಗ ಇರತಕ್ಕಂಥ ವಿಭಾಗಗಳಿಂದ ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಸಮಗ್ರವಾಗಿ ಬಹಳ ಅನುಕೂಲವಾಗಿದೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಪದೇ ಪದೇ ಒಂದಲ್ಲ ಒಂದು ರೀತಿಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಅಧಿಕಾರಕ್ಕೆ ಬಂದು ಅಲ್ಲಿ ಕರ್ನಾಟಕದ ಹಿತಕ್ಕೆ ಧಕ್ಕೆ ತರತಕ್ಕಂಥ ನಿರ್ಣಯಗಳನ್ನು ಮಾಡು

ತ್ತಿದ್ದಾರೆ. ಸುಮಾರು ಎರಡು-ಮೂರು ವರ್ಷಗಳ ಹಿಂದೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ಒಡೆತನದಲ್ಲಿ ಇದ್ದಂಥ ಬೆಳಗಾವಿ ಮಹಾನಗರಪಾಲಿಕೆಯಲ್ಲಿ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕೆಂಬ ನಿರ್ಣಯ ಮಾಡಿದರು. ಇದು ಅತ್ಯಂತ ಘೋರವಾದ ನಿರ್ಣಯ ಆಗ ಆ ಮಹಾನಗರ ಪಾಲಿಕೆಯನ್ನು ಸಮಗ್ರವಾಗಿ ರದ್ದುಪಡಿಸಬೇಕೆಂದು ಸರಕಾರಕ್ಕೆ ಒಂದಲ್ಲ ಅನೇಕಸಾರಿ ಮನವಿ ಸಲ್ಲಿಸಿದ್ದು ಆಯಿತು. ಆಗ ಈ ಪ್ರಶ್ನೆ ಸರಕಾರದ ಗಮನಕ್ಕೆ ಬರಲಿಲ್ಲ. ಇವತ್ತು ಚುನಾವಣೆ ನಡೆದರೆ ಇದೇ ಪರಿಸ್ಥಿತಿ ಆ ಮಹಾನಗರ ಪಾಲಿಕೆಯಲ್ಲಿ ಉದ್ಭವವಾಗುತ್ತದೆ. ಅಲ್ಲಿನ ಕನ್ನಡಿಗರಿಗೆ ಬಹಳ ಅನ್ಯಾಯವಾಗುತ್ತದೆ. ಈಗ ಚುನಾವಣೆ ನಡೆದರೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಲ್ಲಿ ಪ್ರಬಲವಾಗಿ ಮತ್ತೆ ಅಧಿಕಾರಕ್ಕೆ ಬರುತ್ತಾರೆ. ಆದ್ದರಿಂದ ಇವತ್ತು ಅಲ್ಲಿ ವಿಭಾಗಗಳನ್ನು ವಿಂಗಡಣೆ ಮಾಡಲೇಬೇಕು. ಕನಿಷ್ಟ, ಕೊನೆಗೆ ಬೆಳಗಾವಿ ನಗರಕ್ಕಾದರೂ ಇದನ್ನು ಮಾಡಲೇಬೇಕು ಎಂದು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಇಲ್ಲವೇ ಬೆಳಗಾವಿ ನಗರಸಭೆ ಚುನಾವಣೆಯನ್ನು ಸಮಗ್ರವಾಗಿ ಮುಂದೂಡಲೇ ಬೇಕೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಅಲ್ಲಿ ನಗರಪಾಲಿಕೆಯವರು ಎರಡು ವರ್ಷಗಳ ಮುಂಚೆ ರೆಸಲ್ಯೂಷನ್ ಮಾಡಿದರು ಎಂದು ಹೇಳಿದರಲ್ಲ, ಆ ರೆಸಲ್ಯೂಷನ್‌ಗೆ ಏನು ಆಯಿತು. ಆಗ ಇದ್ದ ಸರಕಾರ ಇದರ ಬಗ್ಗೆ ಏನು ಮಾಡಿತು.

ಶ್ರೀ ವಾಟಾಳ್ ನಾಗರಾಜ್.— ಆಗ ಸರಕಾರ ಇದರ ಬಗ್ಗೆ ಗಮನಹರಿಸಲಿಲ್ಲ. ಗಡಿ ಸಮಸ್ಯೆ ಬಂದಾಗ ಮಹಾರಾಷ್ಟ್ರ ಏಕೀಕರಣ ಸಮಿತಿಯವರಿಗೂ, ಹಿಂದಿನ ಸರಕಾರದವರಿಗೂ ಒಂದು ರೀತಿ ನೆಂಟಸ್ತನ ಇತ್ತು. ಇದು ಒಪ್ಪಿಕೊಳ್ಳತಕ್ಕಂಥ ಮಾತು. ಈ ಮಾತನ್ನು ಅವರೂ ಒಪ್ಪುತ್ತಾರೆ. ಈಗ ಹಣಕಾಸಿ ಸಚಿವರಾಗಿರತಕ್ಕಂಥ ಶ್ರೀ ಮಧುದಂಡವತೆಯವರಿಗೂ, ಮಹಾರಾಷ್ಟ್ರ ಏಕೀಕರಣ ಸಮಿತಿಯವರಿಗೂ ಬಹಳ ಬಹಳ ನೆಂಟು. ಅವರು ಹೇಳಿದ ರೀತಿ ಇವರು ನಡೆದುಕೊಳ್ಳುತ್ತಿದ್ದರು. ಆದುದರಿಂದ ಮಹಾರಾಷ್ಟ್ರ ಏಕೀಕರಣ ಸಮಿತಿಯವರನ್ನು ಹಿಂದಿನ ಆಳುವ ಸರಕಾರ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದಕ್ಕೋಸ್ಕರವಾಗಿ ಕನ್ನಡವನ್ನು ಬೆಳಗಾವಿಯಲ್ಲಿ ಸಮಗ್ರವಾಗಿ ಬಲಿ ಕೊಟ್ಟಿದ್ದಾರೆ. ಅದರಲ್ಲೇನೂ ಭಿನ್ನಾಭಿಪ್ರಾಯ ಇಲ್ಲ. ಇವತ್ತು ಈ ಪ್ರಶ್ನೆ ಬಗೆಹರಿಯದಿದ್ದರೆ, ಅಲ್ಲಿ ವಿಭಾಗಗಳನ್ನು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಮಾಡಲಿಲ್ಲವೆಂದರೆ, ಮತ್ತೆ ಎಂ. ಇ. ಎಸ್. ನವರು ಅಧಿಕಾರಕ್ಕೆ ಬರುತ್ತಾರೆ, ಅದೇ ದಾಂಧಲೆ ಮಾಡುತ್ತಾರೆ, ಮತ್ತೆ ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕೆಂಬ ನಿರ್ಣಯವನ್ನು ಮಾಡುತ್ತಾರೆ. ಮತ್ತು ಮುನಿಸಿಪಾಲಿಟಿಗಳ ಬಗ್ಗೆ, ಸ್ಥಳೀಯ ಸಂಸ್ಥೆಗಳ ಬಗ್ಗೆ, ಮಹಾನಗರ ಪಾಲಿಕೆಗಳ ಬಗ್ಗೆ ಇದೇ ಸದನದಲ್ಲಿ ವಿಧೇಯಕ ಬಂದಾಗ ನಾನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ ಏನೆಂದರೆ. ಬೆಳಗಾಂ ಮಹಾನಗರ ಪಾಲಿಕೆಯ ಮೇಲೆ ಮರಾಠಿ ಧ್ವಜ ಇವತ್ತಿಗೂ ಹಾರಾಡುತ್ತಿದೆ. ಈ ಬಗ್ಗೆ ನಾನು ಒಂದಲ್ಲ, ಒಂದು ಸಾವಿರ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಇದೇ ಸಭೆಯಲ್ಲಿ ಮಾನ್ಯ ಮಂತ್ರಿಗಳು ಮುಂದಿನ ಸಭೆ ಸೇರುವುದರೊಳಗಾಗಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಕಛೇರಿಗಳ ಮೇಲೆ ಯಾವ ಯಾವ ಧ್ವಜ ಹಾಕಬೇಕೆನ್ನುವ ಬಗ್ಗೆ ಒಂದು ಸಮಗ್ರವಾದ ತೀರ್ಮಾನಕ್ಕೆ ನಾವು ಬರುತ್ತೇವೆಂದು ಹೇಳಿದರು. ಇವತ್ತಿನವರೆಗೂ ಸರ್ಕಾರ ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಇವತ್ತು ಅಲ್ಲಿ ರಾಷ್ಟ್ರಧ್ವಜ ಒಂದು ಕಡೆ ಇದೆ, ಮತ್ತೊಂದು ಕಡೆ ಮರಾಠಿ ಧ್ವಜ ಹಾರಾಡುತ್ತಿದೆ. ರಾಷ್ಟ್ರಧ್ವಜಕ್ಕೆ ಅಗೌರವವಾಗುತ್ತದೆ ಎನ್ನತಕ್ಕಂಥ ಮನವಿಯನ್ನೂ ಸಹ ಒಂದಲ್ಲ ಅನೇಕ ಬಾರಿ ಮಾಡಿದ್ದಾಯಿತು. ಇನ್ನೂ ಸಹ ಅದನ್ನು ತೆಗೆಯುವುದರಲ್ಲಿ ಯಾವುದೇ ಮನಸ್ಸನ್ನು ಮಾಡಿಲ್ಲ. ಸರ್ಕಾರ ಆ ತೀರ್ಮಾನಕ್ಕೆ ಬಂದಿಲ್ಲ. ಇಲ್ಲದಿದ್ದರೆ ಮತ್ತೆ ದುರಂತವಾಗುತ್ತದೆ. ಆದ್ದರಿಂದ ಬೆಳಗಾವಿ ಮಹಾನಗರ ಪಾಲಿಕೆ ಬಗ್ಗೆ ಸರ್ಕಾರ ವಿಶೇಷ ಗಮನಹರಿಸಬೇಕೆಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಕರ್ನಾಟಕ ರಾಜ್ಯಕ್ಕೆ ತುಂಬಾ ತೊಂದರೆಯಾಗುತ್ತದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಹಾಜನ್ ವರದಿ ಕಾರ್ಯಗತ ಆಗಲೇಬೇಕೆಂದು ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತಿದ್ದೇವೆ. ನಾವು ಮನವಿಯನ್ನು ಸಲ್ಲಿಸುತ್ತಾ ಇದ್ದೇವೆ. ಅದಕ್ಕೆ ಎಂ. ಇ. ಎಸ್. ನವರು ವಿರುದ್ಧವಾಗಿದ್ದಾರೆ. ಇವತ್ತು ಬೆಳಗಾವಿ ಮಹಾನಗರ ಪಾಲಿಕೆಯ ವಿಭಾಗಗಳನ್ನು ಕ್ರಮಬದ್ಧವಾಗಿ ವಿಂಗಡಿಸಿ ಚುನಾವಣೆಗಳನ್ನು ನಡೆಸುವುದಾದರೆ ಸಮಗ್ರವಾಗಿ ಅಲ್ಲಿ ಕನ್ನಡದವರು ಗೆದ್ದು ಬರುತ್ತಾರೆ. ಕನ್ನಡಿಗರು ಗೆದ್ದು ಅಧಿಕಾರಕ್ಕೆ ಬಂದ ತಕ್ಷಣ ಮಹಾಜನ್ ವರದಿ ಅಂತಿಮ ಎನ್ನುವ ತೀರ್ಮಾನವಾಗುತ್ತದೆ. ಮತ್ತೆ ಮಹಾರಾಷ್ಟ್ರದ ಏಕೀಕರಣ ಸಮಿತಿಯವರು ಅಲ್ಲಿ ಸ್ವರ, ಧ್ವನಿಯನ್ನು ಎತ್ತುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರ ರಾಜ್ಯದ ಹಿತದೃಷ್ಟಿಯಿಂದ ಕನ್ನಡದ ಹಿತದೃಷ್ಟಿಯಿಂದ ಬೆಳಗಾಂ ಮಹಾನಗರ ಪಾಲಿಕೆಯ ಚುನಾವಣೆಯನ್ನು ಮುಂದೂಡಿ, ಅಲ್ಲಿ ವಿಭಾಗಗಳ ವಿಂಗಡನೆಯನ್ನು ಬಹಳ ಪರಿಣಾಮಕಾರಿ

ಯಾಗಿ ಮಾಡಬೇಕು. ಈ ಸಂದರ್ಭದಲ್ಲಿ ಮಾನ್ಯ ಸಚಿವರು ತಿದ್ದುಪಡಿ ತರಬೇಕು. ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳಮೇಲೆ ರಾಷ್ಟ್ರ ಧ್ವಜ ಮಾತ್ರ ಇರಬೇಕು. ಮರಾಠಿ ಧ್ವಜ ಮಾತ್ರ ಇರಕೂಡದು ಎಂದು ಮಾನ್ಯ ಸಚಿವರು ತೀರ್ಮಾನಕ್ಕೆ ಬಂದು ಹೇಳಬೇಕು. ತಾವು ಇದರಿಂದ ಹಿಂದಕ್ಕೆ ಸರಿಯುವುದಕ್ಕೆ ಸಾಧ್ಯವಿಲ್ಲ. ತಾವೇ ಗುರಂತರವಾಗಿ ಮರಾಠಿ ಧ್ವಜ ಇರಬಾರದು ಎನ್ನುವುದನ್ನು ಒಪ್ಪಿದ್ದೀರಿ. ನಿಮ್ಮ ಒಪ್ಪಿಗೆಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತಂದಿಲ್ಲ, ಇದಕ್ಕೆ ಕಾರಣವೇನೆಂದು ತಾವು ಹೇಳಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿ ನಾನು ಈ ಒಂದು ವಿಧೇಯಕವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† SRI. QAMURUL ISLAM (Gulbarga).—Madam Deputy Speaker, the Karnataka Municipal Corporations (Amendment) Bill is here for discussion. I oppose this Bill. because if this bill is passed, it will create a very bad precident in furture. As you know the elections are the basic needs of the democracy and also the elections are the backbones of the democracy. What has happened here is, that all the Corporations Municipalities, and Town Municipalities were under the Administrators' rule since 1½ years. Then the the matter came for discussion when the Bill came to increase the terms of the municipalities from 4 to 5 years. At this juncture this matter was also discussed regarding the elections and the elections were declared on 25th January. 1st February was the last date for filing nominations, 6th February was the last date for withdrawal. When the campaign was in full swing, there was a strike by the employees of the Government of Karnataka and the Government on the very day took a decision and we read in the newspapers that the elections to all the municipalities and corporations were cancelled. The first statement has come in the press. Afterwards clarification came that it was not cancelled, but it was postponed. I wanted to know immediately why the government took this decision. Whether the government was for that because they knew that indefinite strike notice had already been given. They were just waiting for the declaration of the strike and elections were postponed. What is the reason behind it? Why they were afraid of conducting elections at that juncture? Why did they not wait for some more time as the strike was only for two or three days? Elections could have been held as scheduled. The sky will not fall. Why they have shown this reason? This reason is not sufficient to get these powers and the powers which they have got, in a day or whenever they like they can conduct elections. This Bill is against the spirit of the Constitution. The peoples Representation Act is within the spirit of the Constitution They say the maximum period is forty days. But here in this bill how much period they want? Is this bill within the spirit of the Constitution? No. because here the period is unlimited. In a day they can conduct elections. They took thirteen days to say that elections will be conducted on 22nd April. Our Hon'ble Minister told that because of Good Friday, Easter Sunday and Ugadi festival, elections cannot be conducted before 22nd April. But when I gave the statement why Ramzan was not being considered, which was a genuine request, immediately reaction

came from the government saying that we have postponed the elections from 22nd to 29th and then. later on people celebrating Basava jayanti and Shankara jayanthi started saying that 29th date is not feasible for us. There should be no discrimination. When they have considered Ugadi, Ramzan, why not Basava Jayanthi? This was the situation. Why all these things have happened? If the ordinance was not there the Government would have taken another 10 or 15 days. Now they have no fixed period. They have unlimited powers and in future any Government can play with this democracy. By this provision in the Bill in one statement they can take a decision to change the date of the election. That is why the bill should be definite if you want to have powers.......

SRI M. VEERAPPA MOILY.—Let us not be hypocrites. Let us be true to the facts. ಈಸ್ಟರ್ ಡೇ ಆಗಲೀ ಹೋಳಿ ಹಬ್ಬವಾಗಲೀ, ಯುಗಾದಿ ಹಬ್ಬವಾಗಲೀ, ರಂಜಾನ್ ಹಬ್ಬವಾಗಲೀ ಇವತ್ತು ಲಕ್ಷಕ್ಕೆ ತೆಗೆದುಕೊಳ್ಳದೆ ಡೇಟ್ ಫಿಕ್ಸ್ ಮಾಡಬೇಕೆಂದು ತಮ್ಮ ಅಭಿಪ್ರಾಯವಿದ್ದರೆ ಹೇಳಿ. Government will go by that.

ಶ್ರೀ ವಾಟಾಳ್ ನಾಗರಾಜ್ — ಹಬ್ಬಗಳನ್ನು ನೋಡುವುದಾದರೆ ಪ್ರತಿ ದಿವಸವೂ ಅಂದರೆ ವರ್ಷದಲ್ಲಿ ೩೬೦ ದಿವಸವೂ ಹಬ್ಬಗಳು ಇರುತ್ತವೆ. ಶನಿವಾರದ ಹಬ್ಬ, ಶಿವದಾರದ ಹಬ್ಬ ಸಾಬರಹಬ್ಬ ಹೀಗೆ ಬೇಕಾದಷ್ಟು ಇವೆ. ನೀವು ಚುನಾವಣೆಗಳನ್ನು ಮಾಡುವುದಕ್ಕೆ ಆಗುವುದೇ ಇಲ್ಲ. ಈಗ ಅವರನ್ನು ಕೇಳಿಕೊಂಡು ಚುನಾವಣೆ ಮುಂದಕ್ಕೆ ಹಾಕಬೇಕೆಂಬ ಆಲೋಚನೆ ತಮಗೆ ಇದೆಯೇ.

SRI QUMARUL ISLAM.—Here the powers they get is unlimited. There should be a limit. If elections are to be postponed by the Government, then there should be a limit of 10 days or 15 days or 20 days in unavoidable situation. But here the Bill is not fixing that limit. That is why I am opposing this Bill.

Secondly, in my personal opinion. the reason which has been given is not sufficient for introduction of this Bill. Suppose, this Bill is passed we are going to create a very bad precedent which is not good for democracy. hat is why I oppose this Bill.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ಸ್ ಅಮೆಂಡ್‌ಮೆಂಟ್ ಬಿಲ್‌ನ್ನು ಏನು ತರುತ್ತಾ ಇದ್ದೀರಿ, ಅದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ಇದ್ದೇನೆ ಇದೊಂದು ಕರಾಳ ತಿದ್ದುಪಡಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನುಕೂಲ ಸಿಂಧುತ್ವಕೋಸ್ಕರವಾಗಿ ಮನಸೊ ಇಚ್ಛೆ, ಮನ ಬಂದಂತೆ ಈ ತಿದ್ದುಪಡಿಯನ್ನು ಸರಕಾರವು ತನ್ನ ಅನುಕೂಲಕ್ಕೆ ತಕ್ಕಂಥ ಮಾಡಿಕೊಳ್ಳುವ ಪ್ರಯತ್ನವನ್ನು ಇವತ್ತು ಮಾಡುತ್ತಾ ಇದೆ. ಸರಕಾರಕ್ಕೆ ಬಹುಮತ ಇರುವಂಥ ಸಂದರ್ಭದಲ್ಲಿ ಯಾವುದೇ ತಿದ್ದುಪಡಿಯನ್ನು ತಂದು ಬಿಲ್‌ನ್ನು ಪಾಸ್ ಮಾಡಿಕೊಂಡು, ತಮಗೆ ಅನುಕೂಲವಾಗುವ ಹಾಗೆ ಆಡಳಿತ ನಡೆಸುವುದಕ್ಕೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶಗಳು ಇದ್ದರೂ ಸಹ ಈ ಒಂದು ತಿದ್ದುಪಡಿಯನ್ನು ತರುವಂಥ ಅವಶ್ಯಕತೆ ಇತ್ತೆ. ಅಗತ್ಯ ಇತ್ತೆ ? ಒಂದು ಸಲ ಚುನಾವಣೆಯ ದಿನಾಂಕವನ್ನು ನಿಶ್ಚಯ ಮಾಡುವಂಥ ಸಂದರ್ಭದಲ್ಲಿ ಈ ಚುನಾವಣೆಗಳನ್ನು ನಡೆಸುವಂಥ ಸಂದರ್ಭವು ಸರ್ಕಾರಕ್ಕೆ ಅನುಕೂಲಕರವಾಗಿದೆಯೆ ಎಂಬುದನ್ನು ತಾವುಗಳು ಯೋಚನೆ ಮಾಡಿದ್ದರೆ ಈ ರೀತಿ ತಿದ್ದುಪಡಿಯನ್ನು ಮಾಡುವಂಥ ಸಂದರ್ಭ ಬರುತ್ತಾ ಇರಲಿಲ್ಲ. ಸರಕಾರಿ ನೌಕರರು ಅನಿರ್ದಿಷ್ಟ ಕಾಲದ ಸತ್ಯಾಗ್ರಹ ಮಾಡುತ್ತಾ ಇದ್ದರು ನೋಟೀಸ್ ಕೊಟ್ಟಿದ್ದರು, ತಮಗೆ ಗೊತ್ತಿರುವ ಹಾಗೆ ಯಾವ ಸಂದರ್ಭದಲ್ಲಿ ಈ ಚುನಾವಣೆಯನ್ನು ಮುಂದೂಡಿದರೊ ಅದಕ್ಕೆ ಮುಂಚೆಯೇ ಸರಕಾರಿ ನೌಕರರು ಸತ್ಯಾಗ್ರಹವನ್ನು ನಿಲ್ಲಿಸಿದ್ದರು, ಮಾತುಕತೆಗೆ ಬರುವುದಕ್ಕೆ ಸಿದ್ಧರಾಗಿದ್ದರು. ಅವರ ಸತ್ಯಾಗ್ರಹ ಪ್ರಾರಂಭವಾಗುತ್ತಿದ್ದ ಹಾಗೆಯೇ ಅವರನ್ನು ಕರೆದು ಮಾತುಕತೆ ಆಡಿ ಚುನಾವಣೆಗೆ ತೊಂದರೆ ಆಗದಂತೆ ಮುಂದಿನ ಕ್ರಮವನ್ನು ರೂಪಿಸಿ ಎಂದು ನಾವು ಕೂಡ ಹೇಳುವಂಥ ಪ್ರಯತ್ನವನ್ನು

ಮಾಡಿದ್ದೆವು. ಚುನಾವಣೆ ನಿಶ್ಚಯ ಮಾಡುವಂಥ ಸಂದರ್ಭದಲ್ಲಿ ಸರಕಾರದವರು ಈ ಮನೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ವಿಶೇಷವಾದಂಥ ಸಂದರ್ಭ ಬಂದು ಸರಕಾರಿ ನೌಕರರು ಮೊದಲು ಈ ರೀತಿ ಒಂದು ಅನಿರ್ದಿಷ್ಟ ಕಾಲ ಧರಣಿ ಸತ್ಯಾಗ್ರಹವನ್ನು ಮಾಡುವಂಥ ಸಂದರ್ಭ ಬಂದಾಗ ಈ ಸಂದರ್ಭದಲ್ಲಿ ಏನು ಮಾಡಬೇಕೆಂದು ವಿರೋಧ ಪಕ್ಷದವರನ್ನು ಕರೆದು ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಆ ಸತ್ಯಾಗ್ರಹವನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ನಿಮ್ಮ ಕಡೆಯಿಂದ ಏನೂ ಆಗಲಿಲ್ಲ. ಈ ಚುನಾವಣೆಯನ್ನು ಕಾನೂನು ಬಾಹಿರವಾಗಿ ಮುಂದೂಡಿ ಈಗ ನೀವು ಕಾನೂನಿನ ರಕ್ಷಣೆಯನ್ನು ತೆಗೆದುಕೊಳ್ಳುವಂಥ ಒಂದು ಪ್ರಯತ್ನವನ್ನು ಮಾಡುತ್ತಾ ಇದ್ದೀರಿ. ಹೀಗೆ ಒಂದು ಸಾರಿ ಈ ರೀತಿಯಾದ ಪದ್ಧತಿಯು ಪ್ರಾರಂಭವಾದರೆ ಕಾನೂನು ಬಾಹಿರವಾಗಿ ಮುಂದೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ಯಾವುದೇ ಒಂದು ಕಾರ್ಯಕ್ರಮವನ್ನು ತೆಗೆದುಕೊಂಡು ರಾಜ್ಯಪಾಲರಿಂದ ತಿದ್ದುಪಡಿಯನ್ನು ಅನುಮೋದನೆ ಮಾಡಿಕೊಂಡು ನಾಳೆ ಈ ಮನೆಯಲ್ಲಿ ಅದನ್ನು ತರಬಹುದಾಗುತ್ತದೆ, ಇದೊಂದು ಹೊಸ ಪದ್ಧತಿಯನ್ನು ಹಾಕಿಕೊಂಡ ಹಾಗೆ ಆಗುತ್ತದೆ. ಅವೊತ್ತು ಚುನಾವಣೆಯನ್ನು ಮುಂದೂಡುವಂಥ ಸಂದರ್ಭ ಬಂದಾಗ ತಾವು ಏಪ್ರಿಲ್ ೨೨ಕ್ಕೆ ಮುಂದೂಡಿದಿರಿ ಅವತ್ತು ರಮ್‌ಜಾನ್ ಹಬ್ಬ ಎಂದು ಕಾರಣ ಇತ್ತು, ನಿಮ್ಮ ಸಚಿವ ಸಂಪುಟದಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯವರೊಬ್ಬರು ಆ ಸಮಾಜಕ್ಕೆ ಸೇರಿದವರು ಇದ್ದರೂ, ಸರಕಾರ ಒಂದು ಚುನಾವಣೆಯನ್ನು ಘೋಷಣೆ ಮಾಡತಕ್ಕಂಥ ಸಂದರ್ಭದಲ್ಲಿ ಆ ದಿವಸ ಈ ರಾಜ್ಯದಲ್ಲಿರುವ ಮತದಾರರಿಗೆ ಅನುಕೂಲ ಇದೆಯೋ ಇಲ್ಲವೊ ಎಂಬ ಬಗ್ಗೆ ಯೋಚನೆ ಮಾಡುವುದಕ್ಕೆ ತಮಗೆ ಪುರುಸೊತ್ತು ಇರಲಿಲ್ಲವೇನು ? ಹಾಗಾದರೆ ರಮ್‌ಜಾನ್ ಹಬ್ಬ ಇದೆ ಎಂಬ ಒಂದೇ ಒಂದು ಕಾರಣಕ್ಕಾಗಿ ದಿಢೀರ ಎಂದು ಏಪ್ರಿಲ್ ೨೯ಕ್ಕೆ ಮುಂದೂಡುವಂಥ ಸಂದರ್ಭದಲ್ಲಿ ನೀವು ಏಪ್ರಿಲ್ ೨೯ರಂದು ಇನ್ನು ಯಾವುದಾದರೂ ಹಬ್ಬ ಹರಿದಿನಗಳು ಇವೆಯೋ ಎಂಬುದನ್ನು ತಿಳಿದುಕೊಳ್ಳುವಷ್ಟು ವ್ಯವಹಾರವನ್ನು ಹೊಂದಿರಲಿಲ್ಲವೆ ? ಏಪ್ರಿಲ್ ೨೯ರಂದು ಶಂಕರ ಜಯಂತಿ, ಬಸವ ಜಯಂತಿ ಇದೆ ಎಂದು ತಿಳಿದುಕೊಂಡಿರಲಿಲ್ಲವೆ ? ಈಗ ವೀರಶೈವ ಸಮಾಜದ ಮುಖಂಡರು ಬಸವ ಜಯಂತಿ ಇದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಒಂದು ಸಾರಿ ಒಂದು ಸಮಾಜದ ಹಬ್ಬ ಇದೆ ಎಂದು ದಿನಾಂಕವನ್ನು ಮುಂದೂಡಿದಾಗ ಮತ್ತೊಮ್ಮೆ ಫಿಕ್ಸ್ ಮಾಡಿದ ದಿನಾಂಕದಂದು ಹಿಂದೂ ಸಮಾಜದ ದೊಡ್ಡ ಸಮಾಜದ ಹಬ್ಬವೂ ಇರುವುದರಿಂದ ಅವರಿಗೆ, ಅವರ ಭಾವನೆಗಳಿಗೆ ಧಕ್ಕೆ ತರಬಾರದು ಎಂಬ ಬಗ್ಗೆ ತಿಳುವಳಿಕೆ ಇರಲಿಲ್ಲವೆ? ಈಗ ಈ ಸರ್ಕಾರ ಮುಸ್ಲಿಮ್ ಸಮಾಜವನ್ನು ತೃಪ್ತಿ ಪಡಿಸುವುದಕ್ಕೋಸ್ಕರವಾಗಿ ಚುನಾವಣಾ ದಿನಾಂಕವನ್ನು ಮುಂದೂಡಿತು ಎಂಬ ಕೂಗು ಎದ್ದಿದೆ. ಹಿಂದೂ ಸಮಾಜದ ಬಗ್ಗೆ ಈ ಕುರಿತು ಸರ್ಕಾರ ಗಮನ ಕೊಡಲಿಲ್ಲವಲ್ಲ ಎಂಬ ಪ್ರಶ್ನೆಗೆ ನಾವೆಲ್ಲರೂ ಉತ್ತರ ಕೊಡುವುದು ಕಷ್ಟವಾಗಿ ಪರಿಣಮಿಸುತ್ತದೆ ಯಾವಾಗ ಒಂದು ಸಮಾಜಕ್ಕೆ ಅನುಕೂಲ ಮಾಡಿಕೊಟ್ಟ ಮೇಲೆ ಇನ್ನೊಂದು ದೊಡ್ಡ ಸಮಾಜಕ್ಕೆ ಅನುಕೂಲ ಮಾಡಿಕೊಡುವುದು ನಿಮ್ಮ ಕರ್ತವ್ಯವಲ್ಲವೆ ? ಇದನ್ನೆಲ್ಲಾ ನೋಡಿದರೆ ನಿಮಗೆ ಚುನಾವಣೆಗಳನ್ನು ನಡೆಸುವಲ್ಲಿ ಅಷ್ಟು ಕಾಳಜಿ ಇಲ್ಲ ಎಂಬ ಪ್ರಶ್ನೆಯು ಉದ್ಭವವಾಗುತ್ತದೆ. ಹೀಗೆ ಮನಸ್ಸಿಗೆ ಬಂದಂತೆ ದಿನಾಂಕಗಳ ಬದಲಾವಣೆಯನ್ನು ಮಾಡುವುದು ಯಾರಿಗೂ ಗೌರವ ತರತಕ್ಕಂಥಾದ್ದಲ್ಲ. ಇದು ಒಂದು ಕರಾಳ ಶಾಸನವಾಗುತ್ತದೆ. ಮುಂದೆ ಬರುವಂಥ ಸರಕಾರಗಳೂ ಕೂಡ ತಮ್ಮ ಈ ಪದ್ಧತಿಯನ್ನು ಅನುಸರಿಸಿ, ತಮ್ಮ ಸರದಿ ಬಂದಾಗ ಸದನದಲ್ಲಿ ಯಾರಾದರೂ ಕೇಳಿದರೆ ಈ ಸರಕಾರದ ಉದಾಹರಣೆಗಳನ್ನು ಕೊಡುವಂತೆ ಆಗಬಹುದು. ಕಾರ್ಪೊರೇಷನ್ ಚುನಾವಣೆಗಳನ್ನು ಮುಂದೂಡುವಂಥ ತಿದ್ದುಪಡಿಯನ್ನು ತಂದು ಇತರರಿಗೆ ಈ ತಪ್ಪು ಕ್ರಮವನ್ನು ಅನುಸರಿಸಲು ದಾರಿ ಮಾಡಿಕೊಟ್ಟ ಹಾಗೆ ಮಾಡಿಕೊಡುತ್ತಿದ್ದೀರಿ. ಮಾನ್ಯ ಉಪಾಧ್ಯಕ್ಷಿಣಿಯವರೆ, ಹಿಂದೆ ತಾವುಗಳು ಇಲ್ಲಿ ವಿರೋಧ ಪಕ್ಷದಲ್ಲಿ ಇದ್ದಾಗ ಡಿಲಿಮಿಟೇಶನ್ ಮಾಡಿ ಚುನಾವಣೆಯನ್ನು ಮಾಡಬೇಕು ಎಂಬ ಉದ್ದೇಶದಿಂದ ಸರ್ಕಾರ ಚುನಾವಣೆಯನ್ನು ಮುಂದೂಡುವಂಥ ಪ್ರಯತ್ನ ಮಾಡಿತು. ಆ ಸಂದರ್ಭದಲ್ಲಿ ಸನ್ಮಾನ್ಯ ಮೊಯಿಲಿಯವರು ಈ ಕಡೆ ಕುಳಿತಿದ್ದಾಗ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ, ತಾವು ಸಲಹೆಗಳನ್ನು ಕೊಟ್ಟಿದ್ದೀರಿ- ಆದರೆ ಇವೊತ್ತು ಚುನಾವಣೆಯಲ್ಲಿ ಬಹುಮತದಿಂದ ಗೆದ್ದಿದ್ದೇವೆ, ಆ ಗಾಳಿಯಲ್ಲಿ ಈ ಚುನಾವಣೆಯಲ್ಲಿ ಗೆಲ್ಲಬಹುದು ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರವಾಗಿ ಚುನಾವಣೆ ನಡೆಸಲು ಘೋಷಣೆ ಮಾಡಿದ್ದೀರಿ. ಈಗ ತಾನೆ ಅನೇಕ ಸದಸ್ಯರು ಹೇಳಿದ ಹಾಗೆ ಗುಲ್ಬರ್ಗ ಇರಬಹುದು, ರಾಯಚೂರು ಇರಬಹುದು, ಬೆಳಗಾಂ ಇರಬಹುದು, ಆ ಕಾರ್ಪೊರೇಶನ್ ಏರಿಯಾದಲ್ಲಿ ಸಾಕಷ್ಟು ವ್ಯತ್ಯಾಸ ಇದೆ, ಕ್ಷೇತ್ರ ವಿಂಗಡಣೆ ಮಾಡಿದ್ದು ಸರಿಯಾಗಿಲ್ಲ. ಇಷ್ಟೊಂದು ಅವಸರವಾಗಿ ಚುನಾವಣೆ ಘೋಷಣೆ ಮಾಡುವಂಥ ಅವಶ್ಯಕತೆ ಏನು ಇತ್ತು ? ಒಂದು ಸಾರಿ ಚುನಾವಣೆಯನ್ನು ಮುಂದೂಡಿದ ಮೇಲೆ ಎರಡನೇ ಸಾರಿ ಘೋಷಣೆ ಮಾಡುವ ಮೊದಲು ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಈ ರೀತಿಯಾಗಿ ಮನಸಾ ಬಂದಂತೆ ಪುರಸಭೆ, ಮಹಾನಗರ ಸಭೆ ಚುನಾವಣೆಗಳನ್ನು ಮುಂದೂಡುವಲ್ಲಿ ನೀವು ತೆಗೆದುಕೊಂಡ ನಿಲುವು ಮತ್ತು

ಬದಲಾವಣೆಗಳು ಮತ್ತು ಅದಕ್ಕೆ ಬೇಕಾದಂಥ ಯಾವುದೇ ಸರಕಾರಿ ಆಜ್ಞೆ ಮಾಡದೇನೆ ಚುನಾವಣೆ ಮುಂದೂಡಿದ್ದು ನಮಗೆ ಪತ್ರಿಕೆಗಳಲ್ಲಿ ನೋಡಿದಾಗಲೇ ತಿಳಿದು ಬಂದುದು. ತಮಗೆ ಅನುಕೂಲ ವಾಗುವುದಿಲ್ಲವೆಂದು ಮತ್ತು ಅದನ್ನು ಕೇಳಿದರೆ ಕೋರ್ಟಿಗೆ ಹೋಗುತ್ತಾರೆಂದು ಸರ್ಕಾರ ಇನ್ನೂ ಆಜ್ಞೆ ಮಾಡಿಲ್ಲವೆಂದು ಅಧಿಕಾರಿಗಳಿಂದ ಉತ್ತರ ಬಂತು. ಈ ರೀತಿ ನಮ್ಮನ್ನು ಚುನಾಯಿತ ಪ್ರತಿನಿಧಿಗಳನ್ನು ಕತ್ತಲಲ್ಲಿಟ್ಟು ಚುನಾವಣೆಯನ್ನು ಮುಂದೂಡಿದ್ದು ಜನರಿಂದ ಚುನಾಯಿತ ಸರ್ಕಾರಕ್ಕೆ ಗೌರವ ತರುವ ವಿಷಯವಲ್ಲ. ಈಗ ಈ ತಿದ್ದುಪಡಿ ಅಗತ್ಯವಿಲ್ಲ ಇದನ್ನು ಹಿಂದಕ್ಕೆ ತೆಗೆದುಕೊಂಡು ಯಾವುದಾದರೂ ಕಾರಣಕ್ಕೆ ಎಂದು ನಿರ್ದಿಷ್ಟ ಸಮಯಕ್ಕೆ ಮಾತ್ರ ಈ ರೀತಿ ತಿದ್ದುಪಡಿ ತಂದು ಈಗ ತಪ್ಪು ಏನಾಗಿದೆ ಅದನ್ನು ತಿದ್ದಿಕೊಂಡು ಚುನಾವಣೆ ಮಾಡಬೇಕು. ಆ ರೀತಿ ಮಾಡದೆ ಚುನಾವಣೆ ಮುಂದೂಡಲು ಶಾಸನವನ್ನೇ ತರುವುದು ಸರಿಯಲ್ಲ. ಕೊನೆಯದಾಗಿ ರಾಜ್ಯದಲ್ಲಿರುವ ಹಿಂದು ಮುಸ್ಲಿಂರಲ್ಲಿ ವಿಷಬೀಜ ಬಿತ್ತಿ ಅವರು ಪರಸ್ಪರ ಬಡಿದಾಡುವಂಥ ಸ್ಥಿತಿಗೆ ಬರಲು ನೀವೇ ಕಾರಣವಾಗುತ್ತೀರಿ. ರಮ್‌ಜಾನ್ ಕಾರಣವೆಂದು ಚುನಾವಣೆ ಮುಂದೂಡಿದ ನೀವು ಶಂಕರ ಮತ್ತು ಬಸವಜಯಂತಿಗಳೆಂದು ಚುನಾವಣೆ ಇಟ್ಟುಕೊಂಡಿರುವಿರಲ್ಲ ಮೊದಲೇ ಇದನ್ನೆಲ್ಲ ಏಕೆ ಯೋಚಿಸಿರಲಿಲ್ಲ. ಆದ್ದರಿಂದ ಇಡೀ ಕನ್ನಡನಾಡಿನ ಜನರೆಲ್ಲ ಒಂದಾಗಿ ಬಾಳಬೇಕು, ಬದುಕಬೇಕೆಂಬ ಕಳಕಳಿ ಕಾಳಜಿ ನಿಮಗಿದ್ದರೆ ಯಾವ ಬಸವ ಜಯಂತಿ, ಶಂಕರ ಜಯಂತಿ ದಿವಸ ಚುನಾವಣೆ ಮಾಡುವುದಕ್ಕೆ ಹೊರಟ್ಟಿದ್ದೀರೊ ಅದನ್ನು ಯಾವ ಕಾರಣಕ್ಕೂ ಮಾಡಬೇಡಿ. ಮತ್ತೆ ಅದಕ್ಕೆ ಕಾಲಾವಕಾಶ ಕೊಡಬೇಕಾಗುತ್ತದೆ. ಈಗಲೇ ಒಂದು ನಿರ್ದಿಷ್ಟವಾದ ತೀರ್ಮಾನ ತೆಗೆದುಕೊಂಡು ಈ ನಾಡಿನಲ್ಲಿ ವಾಸಮಾಡುವ ಎಲ್ಲ ಜನತೆ ಗೌರವದಿಂದ ಸಹಬಾಳ್ವೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಒತ್ತಾಯಿಸುತ್ತಾ, ಈ ಒಂದು ಶಾಸನವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ **ಹರ್ಷಕುಮಾರಗೌಡ (ಚಾಮರಾಜ)**.—ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈ ತಿದ್ದುಪಡಿಯನ್ನು ಸ್ವಾಗತಿಸುತ್ತಾ ಯಾವ ಚುನಾವಣೆಗಳು ಘೋಷಣೆಯಾದ ನಂತರ ಚುನಾವಣಾ ಪ್ರಕ್ರಿಯೆಯನ್ನೇ ಬುಡಮೇಲು ಮಾಡುವಂತಹ ಹುನ್ನಾರ ನಡೆಸುವಂತಹ ನೌಕರರ ಮುಷ್ಕರದ ಯೋಜನೆಗಳು ಏನಿವೆ ಅಂತಹ ಮುಷ್ಕರಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಈ ತಿದ್ದುಪಡಿಗಳು ಅತ್ಯಂತ ಸೂಕ್ತ ಹಾಗೂ ಸಕಾಲಿಕ ಎಂದು ಹೇಳಿ ಇದನ್ನು ಸ್ವಾಗತಮಾಡುತ್ತೇನೆ. ಫೆಬ್ರವರಿ ೨೫ರಂದು ನಡೆಯಬೇಕಾಗಿದ್ದ ಚುನಾವಣೆ ಸಮಯದಲ್ಲಿ ರಾಜ್ಯ ಸರ್ಕಾರಿ ನೌಕರ ಬಾಂಧವರು ತಮ್ಮ ಬೇಡಿಕೆಗಳನ್ನು ರಾಜ್ಯದ ಮುಂದಾಗಲಿ, ಸರ್ಕಾರದ ಮುಂದಾಗಲಿ ಇಟ್ಟಿರಲಿಲ್ಲ. ಇನ್ನು ಒಂದು ವಾರದೊಳಗೆ ಚುನಾವಣೆ ನಡೆಯಲಿದೆ ಎಂದು ಹೇಳಿದಾಗ ಸರ್ಕಾರವನ್ನು ಸಂದಿಗ್ಧ ಪರಿಸ್ಥಿತಿಗೆ ದೂಡುವಂತಹ ಒಂದು ಹುನ್ನಾರವನ್ನು ನಡೆಸುವಂತಹ ಅನಿವಾರ್ಯ ಪರಿಸ್ಥಿತಿ ಸರ್ಕಾರಿ ನೌಕರಬಾಂಧವರು ಹೋದದ್ದು ಕೂಡ ದುರದೃಷ್ಟಕರ. ಇಂತಹ ತಪ್ಪು ತಿಳುವಳಿಕೆಗಳಿಂದ ಮುಷ್ಕರಗಳಿಂದ ತಾವು ದೂರವಿದ್ದೇವೆಂದು ನೌಕರರು ಹೇಳುವುದಾದರೆ, ಫೆಬ್ರವರಿ ೨೫ಕ್ಕೆ ಚುನಾವಣೆ ನಡೆಯುವುದೆಂದು ಸರ್ಕಾರ ಘೋಷಣೆ ಮಾಡಿದ ಮೇಲೆ ಅದರಲ್ಲಿ ಸರಕಾರಿ ನೌಕರರು ಪರಿಣಾಮಕಾರಿಯಾಗಿ ಭಾಗ ವಹಿಸಬೇಕಾಗಿತ್ತು. ಇಡೀ ರಾಜ್ಯದ ಜನತೆ ಯಾವ ಒಂದು ಚುನಾವಣೆಯಲ್ಲಿ ಭಾಗವಹಿಸಬೇಕಾಗಿತ್ತೋ ಅವರು ಯಾವ ಚುನಾವಣೆಯಲ್ಲಿ ಮತದಾನ ಮಾಡಬೇಕಾಗಿತ್ತೋ, ಅದನ್ನು ಸ್ಥಗಿತ ಮಾಡುವಂಥ ಒಂದು ದುರುದ್ದೇಶ ಆ ಒಂದು ಚಳುವಳಿಯಲ್ಲಿ ಇತ್ತು, ಆ ಒಂದು ಮುಷ್ಕರದಲ್ಲಿತ್ತು. ಇಂಥ ಅನಿವಾರ್ಯ ಪರಿಸ್ಥಿತಿಗಳನ್ನು ಅವಗಡಗಳನ್ನು ಎದುರಿಸಬೇಕಾದರೆ ಯಾವುದೇ ಸರ್ಕಾರಗಳು ಇವತ್ತಿನ ದಿವಸ ಇರಬಹುದು ಇವತ್ತು ಆಡಳಿತ ನಡೆಸುತ್ತಿರತಕ್ಕಂಥ ಕಾಂಗ್ರೆಸ್ ಸರ್ಕಾರ ಇರಬಹುದು ಅಥವಾ ಇನ್ನ್ಯಾವ ಸರ್ಕಾರಗಳಿಂಬಹುದು. ಇಂಥ ಅಸ್ತ್ರಗಳು ಸರ್ಕಾರದಲ್ಲಿ ಇಲ್ಲದೇ ಇದ್ದಾಗ ಮುಂದೆ ಚುನಾವಣೆಯು ನಡೆಯುವಾಗ ಯಾವುದೇ ರೀತಿಯ ಚಳುವಳಿಗಳ ಮೂಲಕ ಸರ್ಕಾರವನ್ನು, ಸಮಾಜವನ್ನು ಬ್ಲಾಕ್‌ಮೇಲ್ ಮಾಡುವಂಥ ಒಂದು ಮನೋಭಾವನೆಯನ್ನು ತಡೆಯುವುದಕ್ಕೆ ಇಂಥ ಒಂದು ತಿದ್ದುಪಡಿ ಅನಿವಾರ್ಯ ಅವಶ್ಯಕ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೇಳಿದರು, ಚುನಾವಣಾ ದಿನಾಂಕವನ್ನು ಕೂಡಾ ಮುಂದೂಡಿದ್ದೀರಿ, ಅದು ಹಿಂದೂಗಳಲ್ಲಿಯೂ ಕೂಡ ಒಂದು ತಪ್ಪು ಅಭಿಪ್ರಾಯ ಬರುವುದಕ್ಕೆ ಅವಕಾಶ ಕೊಡುತ್ತದೆ ಎಂದು ಹೇಳಿದ್ದಾರೆ. ನಾನಾದರೂ ಕೂಡಾ ಭಾವಿಸುತ್ತೇನೆ. ಬಸವಣ್ಣನವರು ಒಂದು ಧರ್ಮಕ್ಕೆ ಸೇರಿದಂಥವರಲ್ಲ. ಅವರು ಎಲ್ಲಾ ಧರ್ಮಗಳಲ್ಲಿಯೂ ಕೂಡ ಮಾದರಿಯಾದಂಥ ಅತ್ಯಂತ ಕ್ರಾಂತಿಕಾರಿ ಸಮಾಜವಾದಿ. ಅವರನ್ನು ತಾವು ಈ ಒಂದು ಧರ್ಮದ ನಾಯಕನಾಗಿ ಬಣ್ಣ ಕಟ್ಟುವುದಕ್ಕೆ ಪ್ರಯತ್ನ ಪಡಬೇಡಿ. ಆ ಮೂಲಕ ಸಮಾಜದಲ್ಲಿ ಯಾವ ಒಂದು ಒಳ್ಳೆಯ ಭಾವನೆ ಇದೆ. ಧಾರ್ಮಿಕವಾದಂಥ ಭಾವನೆ ಇದೆ ಎಲ್ಲಾ ಧರ್ಮಗಳನ್ನು ಪ್ರೀತಿ ವಿಶ್ವಾಸದಿಂದ ನೋಡತಕ್ಕಂಥ ಭಾವನೆ ಇದೆ, ಅದನ್ನು ಕೆದಕುವಂಥ ಒಂದು ವ್ಯವಸ್ಥೆಯನ್ನು ಈ ಒಂದು ವಿಧೇಯಕವನ್ನು ವಿರೋಧಿ

ಸುವುದರ ಮೂಲಕ ತಾವು ಮಾಡುವುದಕ್ಕೆ ಅವಕಾಶ ಆಗಬಾರದು ಎಂದು ಹೇಳಿ ಈ ಒಂದು ವಿಧೇಯಕ ವನ್ನು ನಾನು ಸ್ವಾಗತ ಮಾಡುತ್ತೇನೆ, ಕೊನೆಗೆ: ಬೆಳಗಾಂ ಬಗ್ಗೆ ಮಾನ್ಯ ಪಾಟೀಲ್ ನಾಗರಾಜ್‌ರವರು ಹೇಳಿದರು. ಬೆಳಗಾಂನಲ್ಲಿ ಮಾತ್ರ ಈ ರೀತಿಯಾಗುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ. ಬೆಳಗಾಂನಲ್ಲಿ ಅವರು ಸ್ವಂತ ಅವರ ಒಂದು ಭಾಷೆಯ ಒಂದು ಜಾತಿಯ ಬಾವುಟಗಳನ್ನು ಹಾಕಿಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನು ಕೊಡಬಾರದು. ಈ ಒಂದು ರೀತಿಯ ವ್ಯವಸ್ಥೆಯಿಂದ ಕರ್ನಾಟಕ ರಾಜ್ಯದ ಸುಭದ್ರತೆಗೆ ಧಕ್ಕೆ ತರುವಂಥ ಅವಕಾಶವನ್ನು ನಿರ್ಮಾಣ ಮಾಡುವಂಥ ಯಾವುದೇ ಹಿತಾಸಕ್ತಿ ಇದ್ದರೂ ಕೂಡಾ ಅದನ್ನು ವಿರೋಧ ಮಾಡಬೇಕು ಎಂದು ಹೇಳಿ, ಈ ವಿಧೇಯಕವನ್ನು ಸ್ವಾಗತ ಮಾಡುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ. ತಮಗೆ ನನ್ನ ನಮಸ್ಕಾರಗಳು.

† ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರ್).—ಮಾನ್ಯ ಅಧ್ಯಕ್ಷಿಣಿಯವರೇ. ಈ ಒಂದು ವಿಧೇಯಕದಲ್ಲಿ ತಂದಿರತಕ್ಕಂಥ ತಿದ್ದುಪಡಿಯನ್ನು ನೋಡಿದರೆ ರಾಜ್ಯ ಸರ್ಕಾರ ತನ್ನ ಕೈಗೊಂಬೆಯನ್ನಾಗಿ ಮಾಡಿಕೊಳ್ಳುವ ದುರುದ್ದೇಶ ಅಡಗಿದಂತೆ ಕಾಣುತ್ತದೆ. ಏಕೆಂದರೆ, ಇದರಲ್ಲಿ 'Beyond the control of the Government'' ಎಂಬ ಒಂದು ಶಬ್ದವನ್ನು ಹಾಕಿದ್ದಾರೆ. ಮೊನ್ನೆ ಚುನಾವಣೆಯ ದಿನಾಂಕವನ್ನು ನಿಗದಿಪಡಿಸಿ ನಂತರ ಬದಲಾವಣೆ ಮಾಡಲಿಕ್ಕೆ ಇವರು ಕೊಟ್ಟಂಥ ಕಾರಣ ಏನೆಂದರೆ ಸರ್ಕಾರಿ ನೌಕರರು ಸತ್ಯಾಗ್ರಹವನ್ನು ಮಾಡುತ್ತಿದ್ದರು, ಚುನಾವಣೆಯನ್ನು ನಡೆಸುವುದಕ್ಕೆ ಆಗುತ್ತಿರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆ ರೀತಿಯ ಒಂದು ನಿರ್ದಿಷ್ಟವಾದಂಥ ಒಂದು ವ್ಯಾಖ್ಯಾನ ಇಲ್ಲಿಲ್ಲ. ಇಲ್ಲಿ ಇರತಕ್ಕಂಥ ಒಂದು ವ್ಯಾಖ್ಯಾನವನ್ನು ನೋಡಿದರೆ, ಸರ್ಕಾರ ತನ್ನ ಮನಸ್ಸಿಗೆ ಬಂದಂಥ ರೀತಿ ಮತ್ತು ಕಾರ್ಪೊರೇಷನ್ ಆಡಳಿತದಲ್ಲಿ ಇರತಕ್ಕಂಥವರು ಮತ್ತು ಸರ್ಕಾರ ಕೂಡಿಕೊಂಡು ತಮಗೆ ನಿರ್ದಿಷ್ಟ ಅವಧಿಗಿಂತ ಹೆಚ್ಚಿನ ಕಾಲಾವಕಾಶಬೇಕೆಂದು ಅಧಿಕಾರದಲ್ಲಿ ಮುಂದುವರಿಯಲಿಕ್ಕೆ ಒಂದು ಅನುಕೂಲತೆಯನ್ನು ಮಾಡಿಕೊಳ್ಳುವಂಥ ಸಾಧ್ಯತೆಗಳು ಈ ತಿದ್ದುಪಡಿಯಲ್ಲಿವೆ ಈಗಾಗಲೇ ರೂಲ್ ೨೬ರ ಪ್ರಕಾರ ಸರ್ಕಾರ ಅನಿವಾರ್ಯ ಕಾರಣಗಳಿಂದಾಗಿ ಚುನಾವಣೆಯನ್ನು ಮುಂದೆ ಹಾಕಲಿಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಇಲ್ಲಿ ಒಂದು ತೋರಿಸಿರತಕ್ಕಂಥ ಕಾರಣವೂ ಸಹಿತ ಪುರಸ್ಕಾರವೂ ಸಹಿತ ಅನಿವಾರ್ಯ ಕಾರಣಗಳಿಗಾಗಿ ಸರ್ಕಾರ ಚುನಾವಣೆಯನ್ನು ಮುಂದೆ ಹಾಕಲಿಕ್ಕೆ ಇದರಲ್ಲಿ ಅವಕಾಶ ಇದೆ. ಮತ್ತು ಅದೇ ರೀತಿ ಸರ್ಕಾರ ಈಗಾಗಲೇ ಚುನಾವಣೆಗಳನ್ನು ಮುಂದಕ್ಕೆ ಹಾಕಿದೆ. ಹಾಗಾದರೆ ಈ ತಿದ್ದುಪಡಿ ಇಲ್ಲದೆ ಚುನಾವಣೆಯನ್ನು ಸರ್ಕಾರ ಮುಂದಕ್ಕೆ ಹಾಕಿರತಕ್ಕಂಥ ಆಜ್ಞೆ ಅದು ಆಧಾರರಹಿತ, ಕಾನೂನು ಬಾಹಿರ ಆಜ್ಞೆ ಹಾಗಿದ್ದರೆ. ಸರ್ಕಾರ ಆಜ್ಞೆಯನ್ನು ಹೊರಡಿಸಿದ್ದರೆ ಅದು ಕಾನೂನು ಪ್ರಕಾರ ಇದ್ದರೆ ಈ ಒಂದು ತಿದ್ದುಪಡಿಯ ಅವಶ್ಯಕತೆ ಇಲ್ಲ.

೨-೧೦ ಪಿ. ಎಂ.

ಇದು ಕೇವಲ ನಗರ ಪಾಲಿಕೆಗಳ ಆಡಳಿತವನ್ನು ಸರ್ಕಾರ ತನ್ನ ರಾಜಕೀಯ ಲಾಭಕ್ಕಾಗಿ ಬಳಸಿ ಕೊಳ್ಳುವ ದುರುದ್ದೇಶದಿಂದ ತಂದಂತಹ ಒಂದು ತಿದ್ದುಪಡಿಯೆಂದು ನಾನು ಭಾವಿಸುತ್ತೇನೆ. ಆಡಳಿತ ದಲ್ಲಿರತಕ್ಕಂಥ ಸರ್ಕಾರಗಳು ಈ ತಿದ್ದುಪಡಿಯನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವಂಥ ದುರುದ್ದೇಶ ಅಥವಾ ಪ್ರಯತ್ನ ನಡೆಯಬಹುದು. ಅಂತಹ ಪ್ರಯತ್ನಗಳಿಗೆ ಅವಕಾಶ ಕೊಡದಂತೆ ಈಗಿರತಕ್ಕಂಥ ಕಾನೂನಿನಲ್ಲಿ ಇವರು ಚುನಾವಣೆಗಳನ್ನು ಅನಿವಾರ್ಯ ಕಾರಣಕ್ಕಾಗಿ ಮುಂದೆ ಹಾಕಲಿಕ್ಕೆ ಅವಕಾಶ ಇರುವುದರಿಂದ ಸ್ಥಳೀಯ ಸಂಸ್ಥೆಗಳ ಮೇಲೆ ನಾಗರೀಕರಿಗೆ ವಿಶ್ವಾಸ ಏನು ಇದೆ. ಸ್ಥಳೀಯ ಸಂಸ್ಥೆಗಳಿಗೆ ಪ್ರಜಾಪ್ರಭುತ್ವದ ತಳಹದಿಯಮೇಲೆ ಸಕಾಲದಲ್ಲಿ ಚುನಾವಣೆಗಳು ನಡೆಯಬೇಕು ಎಂದು ಇರುವುದನ್ನು ತಪ್ಪಿಸಲಿಕ್ಕೆ ಈ ತಿದ್ದುಪಡಿ ಅವಕಾಶ ಮಾಡಿಕೊಡುತ್ತಾ ಇದೆ ಮತ್ತು ಸ್ಥಳೀಯ ಸಂಸ್ಥೆಗಳು ಜನರ ವಿಶ್ವಾಸ ಕಳೆದುಕೊಳ್ಳುವಂತಹ ಪರಿಸ್ಥಿತಿ ಬರುತ್ತಾ ಇದೆ. ತಮಗೆ ಗೊತ್ತಿರುವ ಹಾಗೆ ಕರ್ನಾಟಕದಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು ಈಗ ೫-೬ ವರ್ಷಗಳ ಹಿಂದೆ ಸುಮಾರು ೮ ವರ್ಷಗಳ ಕಾಲ ಮುಂದೂಡಲಾಯಿತು. ಈಗಲೂ ಸಹ ಇಲ್ಲಿ ಸಕಾಲದಲ್ಲಿ ನಗರ ಸಭೆಗಳ ಚುನಾವಣೆ ಯಾಗಲಿ, ಸಹಕಾರ ಸಂಘಗಳ ಚುನಾವಣೆಯಾಗಲಿ ನಡೆಯುತ್ತಾ ಇಲ್ಲ. ಸ್ಥಳೀಯ ಸಂಸ್ಥೆಗಳನ್ನು ಆಡಳಿತದಲ್ಲಿರತಕ್ಕ ಸರ್ಕಾರಗಳು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಳ್ಳತಕ್ಕಂಥದ್ದು ನಿಲ್ಲಬೇಕು. ಈ ತಿದ್ದುಪಡಿಯಿಂದ ನಾಗರೀಕರ ಹಕ್ಕನ್ನು ಇವೊತ್ತು ಮೊಟಕುಗೊಳಿಸಿದಂತಾಗುತ್ತದೆ ಎಂದು ಹೇಳಿ, ಈ ತಿದ್ದುಪಡಿಯನ್ನು ವಿರೋಧ ಮಾಡಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಸರ್ಕಾರ ತಂದಿರತಕ್ಕಂಥ ಈ ತಿದ್ದುಪಡಿಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಈಗಿನ ಪರಿಸ್ಥಿತಿಯಲ್ಲಿ ಇದು ಅವಶ್ಯಕವಾಗಿ ಮಾಡಬೇಕಾಗಿರತಕ್ಕ ತಿದ್ದುಪಡಿಯೆಂದು ಹೇಳುತ್ತೇನೆ. ಏಕೆಂದರೆ, ವಿರೋಧ ಪಕ್ಷದ ಮಾನ್ಯ ಸ್ನೇಹಿತರು ಹಾಗೂ ಸದಸ್ಯರು ಮಾತನಾಡಿರತಕ್ಕದ್ದನ್ನು ನಾನು ಕೇಳಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳ ನಿಯಮಗಳನ್ನು ಹೊಸದಾಗಿ ಮಾಡಿದಂತಹ ಸನ್ನಿವೇಶದಲ್ಲಿ ಚುನಾವಣೆಗಳನ್ನು ಮುಂದೂಡತಕ್ಕ ಅವಕಾಶ ಅದರಲ್ಲಿ ಇರಲಿಲ್ಲ. ತಮಗೆ ಗೊತ್ತಿರುವ ಹಾಗೆ, ಸರ್ಕಾರಿ ನೌಕರರ ಸಂಪಿನಿಂದ ಈ ಸಂದರ್ಭ ಉದ್ಭವಿಸಿತು. ಈ ಸರ್ಕಾರಿ ನೌಕರರೇ ಈ ಚುನಾವಣೆಯಲ್ಲಿ ಪಾಲುಗೊಳ್ಳತಕ್ಕದ್ದು, ಅಧಿಕಾರಿಗಳೇ ಈ ಚುನಾವಣೆಯನ್ನು ನಡೆಸತಕ್ಕದ್ದು. ಈ ಸಭೆಯಲ್ಲಿ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಈ ಚುನಾವಣೆ ಅವರ ಮೇಲೆ ಅವಲಂಬಿಸಿದಾಗ ಮುಂದೆ ಯಾವ ಕ್ರಮ ಕೈಗೊಳ್ಳುತ್ತಾರೆ ಎಂಬ ಅನಿರ್ದಿಷ್ಟವಾದ ಸನ್ನಿವೇಶ ಬಂದಾಗ ಸರ್ಕಾರ ಸಮಯೋಚಿತವಾಗಿ ಯೋಚನೆ ಮಾಡಿದೆ ಮತ್ತು ಮುಂದೆ ಇಂತಹ ತೊಂದರೆಗಳು ಆಗಬಾರದೆಂಬ ಸದುದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಮಾನ್ಯ ಅಧ್ಯಕ್ಷಿಣಿಯವರೆ, ವಿರೋಧ ಪಕ್ಷದವರು ಹೇಳುತ್ತಿದ್ದರು. ನಿಮಗೆ ಪ್ರಜಾಸತ್ತೆಯಲ್ಲಿ ನಂಬಿಕೆ ಇಲ್ಲ, ಇದರಿಂದ ಉದ್ಭವಿಸಬಹುದಾದ ತೊಂದರೆಯನ್ನು ನೋಡಿದಾಗ ನಂಬಿಕೆ ಇಲ್ಲದೇ ಇರತಕ್ಕಂಥ ಸನ್ನಿವೇಶಗಳನ್ನು ಉಂಟುಮಾಡುತ್ತಿದ್ದಾರೆ ಎಂದು ಹೇಳಿದಾಗ ನನಗೆ ಅನ್ನಿಸುತ್ತದೆ. ಕಾಂಗ್ರೆಸ್–ಐ ಪಕ್ಷ ಅಧಿಕಾರಕ್ಕೆ ಬಂದ ತಕ್ಷಣ ಹಿಂದೆ ಏನು ಸ್ಥಳೀಯ ಸಂಸ್ಥೆಗಳು ಚುನಾವಣೆಗಳನ್ನು ನಿಲ್ಲಿಸಿದ್ದರು, ಆ ಚುನಾವಣೆಗಳು ಬೇಗ ಆಗಬೇಕೆಂಬ ಒಳ್ಳೆಯ ದೃಷ್ಟಿಯಿಂದ ಚುನಾವಣೆಯನ್ನು ಘೋಷಣೆ ಮಾಡಿದರು. ಚುನಾವಣೆ ಘೋಷಣೆ ಮಾಡಿದಂತಹ ಕಾಲದಲ್ಲಿ ದುರ್ದೈವ, ಸರ್ಕಾರಿ ನೌಕರರ ಸಂಪಿನಿಂದ ಚುನಾವಣೆ ನಿಲ್ಲಬೇಕಾದ ಸನ್ನಿವೇಶ ಬಂದಾಗ ಸರ್ಕಾರಕ್ಕೆ ಬೇರೆ ದಾರಿನೇ ಇರಲಿಲ್ಲ, ಬೇರೆ ಮಾರ್ಗವೇ ಇಲ್ಲದೆ ಇರತಕ್ಕಂಥ ಕಾರಣದಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕಬೇಕಾಯಿತು. ಇಂತಹ ಒಂದು ತಿದ್ದುಪಡಿಯನ್ನು ತರತಕ್ಕಂಥ ಸನ್ನಿವೇಶ ಬಂದಿರತಕ್ಕಂಥಾದ್ದು ಮಾನ್ಯ ಸದಸ್ಯರಿಗೆ ಗೊತ್ತಿರತಕ್ಕಂಥ ವಿಚಾರ. ಮಾನ್ಯ ಅಧ್ಯಕ್ಷರೆ ಸರ್ಕಾರದ ಪರವಾಗಿ ನಾನು ವಿರೋಧ ಪಕ್ಷದವರಿಗೆ ಹೇಳುತ್ತಿದ್ದೇನೆ. ಇದರಲ್ಲಿ ನಮ್ಮ ಯಾವುದೇ ತರಹದ ಕೈವಾಡ ಇಲ್ಲ ಮತ್ತು ಅದರಲ್ಲಿ ನಾವು ನಿಂತು ಕೆಲಸ ಮಾಡಬೇಕು ಎನ್ನತಕ್ಕಂಥದ್ದಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ಮಾನ್ಯತೆ ಕೊಡತಕ್ಕಂಥ ಒಂದೇ ಒಂದು ದೃಷ್ಟಿಯಿಂದ ನಾವು ಇವತ್ತು ಕೆಲಸ ಮಾಡುತ್ತಿದ್ದೇವೆ. ಅದರಲ್ಲೂ ಸ್ಥಳೀಯ ಸಂಸ್ಥೆಗಳಲ್ಲಿ ಯಾರೂ ರಾಜಕೀಯ ಕೈವಾಡ ಮಾಡಬಾರದೆಂಬ ದೃಷ್ಟಿಯಿಂದ ಇವತ್ತು ಅವು ಸತ್ ಸಂಪ್ರದಾಯವನ್ನು ಹಾಕಿಕೊಂಡು ಒಳ್ಳೆಯ ಕೆಲಸ ಮಾಡಬೇಕಾಗಿದೆ. ಇವತ್ತು ಸರ್ಕಾರಿ ನೌಕರರ ಸಂಪು ಬಂತು, ನಾಳೆ ಇನ್ನೊಂದು ಬರಬಹುದು, ನಾಳೆ ಮತ್ತೊಮ್ಮೆ ಅದಕ್ಕೆ ಅಧಿಕಾರವನ್ನು ತರತಕ್ಕಂಥಾದ್ದು ಬೇಡ ಎನ್ನತಕ್ಕ ಸದುದ್ದೇಶದಿಂದ ಇದಕ್ಕೆ ಕಾಲವನ್ನು ಮಿತಿ ಹಾಕಿಕೊಳ್ಳದೆ ಸರ್ಕಾರ ಸಂಪೂರ್ಣವಾದಂಥ ಜವಾಬ್ದಾರಿಯಿಂದ, ಎಚ್ಚರಿಕೆಯಿಂದ ಇವತ್ತಿನ ದಿವಸ ಈ ತಿದ್ದುಪಡಿ ತರತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿದೆ. ಇವತ್ತು ಅವರು ನಾಳೆ ಹಿಂದುಗಳ ಹಬ್ಬ ಇದೆ, ಮತ್ತೊಂದು ಹಬ್ಬ ಇದೆ ಎಂದು ಹೇಳುತ್ತಾ ಇದ್ದರು, ನಿಜ. ಪ್ರತಿದಿವಸವೂ ಹಿಂದುಗಳಿಗಾಗಲಿ ಮತ್ತು ಮುಸಲ್ಮಾನರಿಗಾಗಲಿ ಹಬ್ಬ ಇರತಕ್ಕದು ನಿಜ. ಆದರೆ ಯಾವ ಯಾವ ಹಬ್ಬಗಳಿಗೆ ಎಷ್ಟು ಮಹತ್ವವನ್ನು ಕೊಟ್ಟು ಮಾಡಬೇಕು ಎನ್ನತಕ್ಕಂಥ ದೃಷ್ಟಿ ನಮಗೆಲ್ಲಾ ಇದೆ. ನಾವು ಮಾಡತಕ್ಕದ್ದು ಒಂದು ದಿವಸದ ಹಬ್ಬ ಆವತ್ತು ಯಾವ ಹಬ್ಬಾನೂ ಇಲ್ಲ. ಬಸವಣ್ಣನವರ ವಿಚಾರ ಹೇಳುತ್ತಾ ಹೋದರೆ, ಬಹಳಷ್ಟು ಇದೆ. ಬಸವಣ್ಣನವರು ಕಾಯಕಕ್ಕೆ ಮಹತ್ವ ಕೊಟ್ಟಿರತಕ್ಕಂಥಾವರು. ಇಂತಹ ಹಬ್ಬ ಮಾಡಿ ಕಾರ್ಯ ನಿಲ್ಲಿಸು ಎಂದು ಎಲ್ಲೂ ಹೇಳಿಲ್ಲ. ಇನ್ಯಾವುದಾದರೂ ಒಂದು ದೃಷ್ಟಿಯಿಂದ ನಿಲ್ಲಿಸಿದರೆ ಅದು ಬೇರೆ ವಿಚಾರ. ಇವತ್ತು ಅವರು ಕೆಲವು ಕ್ಷೇತ್ರಗಳ ವಿಂಗಡಣೆಗಳು ಆಗಬೇಕು ಎಂದು ಹೇಳಿದರು. ಕೆಲವು ಡಿವಿಜನ್‌ಗಳು, ವಿಂಗಡಣೆ ಆಗಬೇಕಾಗಿದೆ. ಒಂದು ಕಡೆ ೭ ಸಾವಿರ ಓಟರ್ಸ್ ಇದ್ದು ಅಲ್ಲಿ ಇಬ್ಬರು ಅಭ್ಯರ್ಥಿಗಳಿದ್ದರೆ, ಇನ್ನೊಂದು ಕಡೆ ೪ ಸಾವಿರ ಓಟರ್ಸ್ ಇದ್ದರೆ ಅಲ್ಲಿ ೪ ಜನ ಅಭ್ಯರ್ಥಿಗಳು ಇರುತ್ತಾರೆ. ಇಂತಹ ಅನೇಕ ತಾರತಮ್ಯಗಳನ್ನು ಹಿಂದೆ ಮಾಡಿಕೊಂಡು ಬಂದಿದ್ದಾರೆ. ಈ ಸರ್ಕಾರ ಮಾಡಿರತಕ್ಕದ್ದಲ್ಲ. ಇಂತಹವನ್ನು ಸರಿಮಾಡಿ ಚುನಾವಣೆ ಮಾಡಬೇಕು ಎಂಬ ಅಭಿಪ್ರಾಯ ಬಂದಾಗ, ಮತದಾರರು ಕೇಳಿದಾಗ ಚುನಾವಣೆಗಳನ್ನು ಮುಂದು ಹಾಕತಕ್ಕಂಥ ಸನ್ನಿವೇಶಗಳು ಬಂದರೂ ಬರಬಹುದು. ಆ ದೃಷ್ಟಿಯಿಂದ ಕಾಲದ ಮಿತಿಯನ್ನು ಹಾಕದೆ ಇಂತಹ ಒಂದು ಮಸೂದೆಯನ್ನು ತಂದಿದ್ದಾರೆ. ಆದಕ್ಕೆ ನಮ್ಮ ವಿರೋಧಪಕ್ಷದವರು ಒಪ್ಪುತ್ತಾರೆ. ಅದೇನೋ ವಿರೋಧಪಕ್ಷದವರಿಗೆ ನಮ್ಮ ಹಿರಿಯ ನಾಯಕರಿಗೆ ಏನೆಂದರೆ, ಸರ್ಕಾರ ಯಾವುದಾದರೂ ಮಸೂದೆ ತಂದತಕ್ಷಣ ವಿರೋಧಮಾಡುವುದೇ ಆಗಿದೆ, ಕೊನೆಗೆ ಅವರೇ ಹೋಗಿ ಆಚೆ ಕಡೆ

ಹೇಳುತ್ತಾರೆ. ಪ್ರಚೋದನೆ ಮಾಡುತ್ತಾರೆ ಹಿಂದೂಗಳು ನೀವು ಹಾಗೆ ಕೇಳಿ ಹೀಗೆ ಕೇಳಿ ಎಂದು ಹೇಳುತ್ತಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಒಂದು ನಿಮಿಷ.

ಉಪಾಧ್ಯಕ್ಷರು.—ಅವರು ಈಲ್ಡ್ ಆಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಒಂದು ನಿಮಿಷ ಈಲ್ಡ್ ಆಗಿ. ಈಗ ಅವರು ಯಾವುದೇ ಬಿಲ್ ತಂದರೂ ನಾವು ವಿರೋಧ ಮಾಡುತ್ತೇವೆ ಎಂದು ಹೇಳಿದರು. ಅದಲ್ಲ, ಅದು ಸಾಧ್ಯವಿಲ್ಲ, ಅವರಿಗೂ ಗೊತ್ತು. ಮುನಿಸಿಪಾಲಿಟಿ ಟರ್ಮ್, ಮುನಿಸಿಪಾಲಿಟಿ ಅಧ್ಯಕ್ಷರ ಮತ್ತು ಕೌನ್ಸಿಲರ್‌ಗಳ ಟರ್ಮ್ ೪ ವರ್ಷಗಳಿಂದ ೫ ವರ್ಷ ಮಾಡಬೇಕು ಎಂದು ಹೇಳಿದಾಗ ಮತ್ತು ಅಸೆಂಬ್ಲಿದು ಎಲೆಕ್ಟರೋಲ್ ಮಾಡಬೇಕು ಎಂದು ಹೇಳಿದಾಗ ನಾವು ವೆಲ್‌ಕಂ ಮಾಡಿದ್ದೇವೆ, ನಾವು ವಿರೋಧ ಮಾಡಿಲ್ಲ, ನಾವು ಯಾವಾಗಲೂ ವಿರೋಧ ಮಾಡಿಲ್ಲ ಆದರೆ ಇವತ್ತು ಇದು ಘಟನೆಗೆ ವಿರೋಧವಾಗುತ್ತದೆ, ಜನರ ಹಿತಕ್ಕೆ ವಿರೋಧವಾಗುತ್ತದೆ, ಈ ಪ್ರಕಾರ ಅಧಿಕಾರಿಗಳ ಕೈಗೆ ಕೊಟ್ಟರೆ ನಾಳೆ ನಾವು ಅಲ್ಲಿ ಅಧಿಕಾರದಲ್ಲಿ ಬರಬಹುದು, ನಮ್ಮ ಮನಸ್ಸಿಗೆ ಬಂದಹಾಗೆ ಚುನಾವಣೆ ಮಾಡಬಹುದು. ಅದರ ಸಲುವಾಗಿ ಬೇಡ ಎಂದು ಹೇಳುತ್ತಿದ್ದೆವೆಯೇ ಹೊರತು ಬೇರೆ ಇನ್ನಾವುದೂ ಕಾರಣ ಇಲ್ಲ,

ಶ್ರೀ ಟಿ. ಎಂ. ಮಂಜುನಾಥ್.— ದೇಶಪಾಂಡೆಯವರು ಹೇಳತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಅವರಲ್ಲಿ ಆ ಕಳಕಳಿಯಿದ್ದರೆ ನಾವು ತಯಾರಾಗಿದ್ದೇವೆ. ಒಟ್ಟಿನಲ್ಲಿ ನನ್ನ ಅಭಿಪ್ರಾಯ ವೇನೆಂದರೆ, ಇಂತಹ ಪರಿಸ್ಥಿತಿಯಲ್ಲಿ ತಾನು ಜವಾಬ್ದಾರಿ ಹೊತ್ತಂಥ ಪರಿಸ್ಥಿತಿಯಲ್ಲಿ ಕೆಲವು ಅಧಿಕಾರ ಸರ್ಕಾರಕ್ಕೆ ಬೇಕಾಗುತ್ತದೆ. ಆ ಸ್ಥಾನದಲ್ಲಿ ಅವರಿದ್ದರೂ ಅದೇ ಕೆಲಸ ಮಾಡತಕ್ಕದ್ದು. ಅವರು ಚುನಾವಣೆಯನ್ನು ಮಾಡಲಿಲ್ಲ. ಅವರು ೪ ವರ್ಷ ಇರುವುದನ್ನು ೫ ವರ್ಷ ಮಾಡಿ ಕೈಬಿಟ್ಟುಬಿಟ್ಟರು. ಆದರೆ ನಮ್ಮ ಸರ್ಕಾರ ಬಂದ ತಕ್ಷಣ ಯಾವ ರೂಪದಲ್ಲಿತ್ತು ಆ ರೂಪದಲ್ಲೇ ಮಾಡಬೇಕು ಎಂದು ಆತುರದಲ್ಲಿ ಹೊರಟವರು ನಾವು. ಆದರೆ ಅಡ್ಡಿ ಬಂದಿರತಕ್ಕದ್ದು ಗೊತ್ತಿದೆ. – ಈ ಎಲ್ಲ ದೃಷ್ಟಿಯಿಂದ ನಾನು ಹೇಳತಕ್ಕದ್ದು ಏನೆಂದರೆ, ಸರ್ಕಾರಕ್ಕೆ ಮುಂದೆ ಇಂತಹ ಯಾವುದಾದರೂ ಸನ್ನಿವೇಶಗಳು ಸಂದರ್ಭಗಳು ಬಂದಾಗ ಮತ್ತೊಮ್ಮೆ ಈ ಗೊಂದಲಕ್ಕೆ ಅವಕಾಶ ಕೊಡದ ರೀತಿಯಲ್ಲಿ ತಮಗೆ ಅಧಿಕಾರವನ್ನು ತೆಗೆದುಕೊಳ್ಳತಕ್ಕಂಥಾದ್ದು ಪ್ರಜಾಸತ್ತೆಯಲ್ಲಿ ಯುಕ್ತವಾಗಿರತಕ್ಕಂಥ ಮಾರ್ಗ. ಆ ದೃಷ್ಟಿಯಿಂದ ಏನು ತಿದ್ದುಪಡಿಯನ್ನು ತಂದಿದ್ದಾರೆ ಅದು ಜನಹಿತಕಾರಿಯಾಗಿರತಕ್ಕಂಥಾದ್ದು, ಪ್ರಜಾಪ್ರಭುತ್ವದ ಮೌಲ್ಯವನ್ನು ಎತ್ತಿಹಿಡಿಯತಕ್ಕಂಥಾದ್ದೇ ವಿನಃ ಅದಕ್ಕೆ ಯಾವುದೂ ಕುಂದು ಬರತಕ್ಕಂಥಾದ್ದಲ್ಲ. ಚುನಾವಣೆಯನ್ನು ಮಾಡುವುದಿಲ್ಲ ಎಂದು ಹೇಳಿದಾಗ ಮಾತ್ರ ಈ ಪರಿಸ್ಥಿತಿ ಬರುತ್ತದೆಯೇ ವಿನಃ ಬೇರೆ ಇಲ್ಲ. ಸರ್ಕಾರ ಇವತ್ತು ಚುನಾವಣೆ ಮಾಡಬೇಕು ಎನ್ನತಕ್ಕಂಥ ಕಾತುರತೆಯಿಂದ ತಂದಿರತಕ್ಕಂಥ ಈ ಒಂದು ತಿದ್ದುಪಡಿ ಅತ್ಯಮೂಲ್ಯವಾಗಿ ಬೇಕಾಗಿರತಕ್ಕಂಥಾದ್ದು, ಇದಕ್ಕೆ ಬೆಂಬಲವನ್ನು ವ್ಯಕ್ತಪಡಿಸಿ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) — ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ನಾನು ಈ ಮಸೂದೆಯನ್ನು ವಿರೋಧ ಮಾಡುತ್ತೇನೆಂದು ಹೇಳುತ್ತಾ ಇಲ್ಲ. ಆದರೆ ಈ ಮಸೂದೆಗೆ ಒಂದು ತಿದ್ದುಪಡಿ ಅತ್ಯಾವಶ್ಯಕ ಎಂದು ಸೂಚನೆ ಮಾಡುವುದಕ್ಕೆ ಬಯಸುತ್ತೇನೆ. ಏಕೆಂದರೆ, ಇಲ್ಲಿ ಸರ್ಕಾರ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇರುವುದು power to postpone elections which means the power to postpone the democratic process. ಇದು ಬಹಳ ಮುಖ್ಯವಾದಂಥ ವಿಚಾರ. ನಾವು ಯಾವಾಗ ಡೆಮಾಕ್ರಟಿಕ್ ಪ್ರೊಸೆಸನ್ನು ಪೋಸ್ಟ್‌ಪೋನ್ ಮಾಡುವುದಕ್ಕೆ ಅಧಿಕಾರ ಬೇಕು ಎಂದು ಹೇಳುತ್ತೇವೆ, ಅದಕ್ಕೆ ಸಂವಿಧಾನ ರಚನೆಯಲ್ಲಿ ಅಥವಾ ಕಾನೂನು ರಚನೆಯಲ್ಲಿ ಒಂದು ಶಿಸ್ತು ಇದೆ. ನಾವೇ ಸಂಕೋಲೆಗಳನ್ನು ಹಾಕಿಕೊಳ್ಳುವಂಥ ಒಂದು ಅಂಶ ಕಾನೂನು ರಚನೆಯಲ್ಲಿ ಇರಬೇಕು. We should put fetters unto ourselves when we try to postpone the democratic process or when we are trying to arrive on ourselves the power to postpone the democratic process. ಇದು ಸಂವಿಧಾನದಲ್ಲಿದೆ ಎನ್ನುವುದು ನಮ್ಮ ಕಾನೂನು ಮಂತ್ರಿಗಳಿಗೆ ಗೊತ್ತಿದೆ. ರಾಷ್ಟ್ರಪತಿಗಳ ಆಡಳಿತವನ್ನು ತರುವಾಗ ಆಗಲಿ, ತುರ್ತು ಪರಿಸ್ಥಿತಿಯನ್ನು ಜಾರಿಗೆ ತರುವ ಕಾಲದಲ್ಲಿಯಾಗಲಿ ಆ ಅಧಿಕಾರ ಸರ್ಕಾರಕ್ಕೆ ಉಂಟು. ಆದರೆ ಅಲ್ಲಿ ಕಾಲಾವಧಿ ಒಂದನ್ನು ನಿಗದಿ ಮಾಡುತ್ತೇವೆ. ಇದರಲ್ಲಿ ಕಾಲಾವಧಿ ಅಂಶ ಇಲ್ಲ. The

Government is trying to give unto itself unfettered powers of postponement of democratic process. This is purely unconstitutional. ನಿಮಗೆ ಬಹುಮತ ಇದ್ದು ನೀವು ಇದನ್ನು ಪಾಸು ಮಾಡಿಕೊಂಡರೂ, ನ್ಯಾಯಾಲಯದ ಕಟ್ಟೆಯಲ್ಲಿ ಉರುಳಿ ಹೋಗುವಂಥ ಕಾನೂನು ಇದು. ಇಷ್ಟು ವಿಷಯ ಗೊತ್ತಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ಮತ್ತು ಕಾನೂನು ಮಂತ್ರಿಗಳಿಗೆ ಗೊತ್ತಿದೆ. ನಿಮಗೆ ಇದು ಗೊತ್ತಿದ್ದೂ ಇದನ್ನು ತಾವು ಪಾಸು ಮಾಡಿದರೆ, ಅದಕ್ಕೆ ನನ್ನ ವಿರೋಧವಿದೆ. ನಿಮ್ಮ ಉತ್ತರ ಕೇಳಿಕೊಂಡು ನಾನು ಸಭಾತ್ಯಾಗ ಮಾಡುವವನು.

ಶ್ರೀ ಕಾಗೋಡು ತಿಮ್ಮಪ್ಪ.— ತಾವು ತಿದ್ದುಪಡಿ ಕೊಟ್ಟಿದ್ದೀರೇನು.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.— ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ತಿದ್ದುಪಡಿ ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದಾರೆ. ನಾನು ಕೊಟ್ಟಿಲ್ಲ, ತಾವೇ ಮಾಡಿದರೆ ಒಳ್ಳೆಯದು.

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).— ಮಾನ್ಯ ಅಧ್ಯಕ್ಷರೆ, ಈ ತಿದ್ದುಪಡಿಯನ್ನು ನಾನು ಸಮರ್ಥನೆ ಮಾಡಿ, ಕೆಲವು ಮುಖ್ಯ ವಿಷಯಗಳನ್ನು ಸಭೆಗೆ ತಿಳಿಸಲು ಮತ್ತು ನಮ್ಮ ಮಂತ್ರಿಗಳಲ್ಲಿ ಅರಿಕೆ ಮಾಡಲು ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ಪಾಟೀಲ್ ನಾಗರಾಜ್‌ರವರು ತಮ್ಮ ಭಾಷಣದಲ್ಲಿ ಬೆಳಗಾಂ ನಗರಪಾಲಿಕೆಯ ಚುನಾವಣೆಗಳನ್ನು ಯಾವ ಒಂದು ಕಾರಣಕ್ಕಾಗಿ ಮುಂದಕ್ಕೆ ಹಾಕಬೇಕಾಯಿತು ಎನ್ನುವ ವಾದವನ್ನು ಮಂಡಿಸಿದರು. ಅಲ್ಲಿ ಡೀಲಿಮಿಟೇಷನ್ ಸರಿಯಾಗಿರಲಿಲ್ಲ, ಜನಸಂಖ್ಯೆಗೆ ಅನುಗುಣವಾಗಿ ಡೀಲಿಮಿಟೇಷನ್ ಆಗಬೇಕಾಗಿತ್ತು. ಅದು ಆಗಲಿಲ್ಲವೆಂದು ಹೇಳಿದರು. ಇದೇ ಒಂದು ವಾದವನ್ನು ನಾನು ಬೆಂಗಳೂರು ನಗರಕ್ಕೆ ಅನ್ವಯಿಸುವ ರೀತಿಯಲ್ಲಿ ಹೇಳ ಬಯಸುತ್ತಿದ್ದೇನೆ. ಮಾನ್ಯ ಪಾಟೀಲ್‌ನಾಗರಾಜ್‌ರವರು ಬೆಳಗಾಂ ವಿಷಯದಲ್ಲಿ ಮತ್ತೆ ಬೇರೆ ಕಾರಣ ಕೊಟ್ಟರು. ಅದರ ವಿಷಯವಾಗಿ ನಾವು ಇಲ್ಲಿ ಚರ್ಚೆ ಮಾಡುತ್ತಿಲ್ಲ. ಇವತ್ತು ನಾವು ಪ್ರಜಾಪ್ರಭುತ್ವ ವನ್ನು ಒಪ್ಪಿಕೊಂಡಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಸಾಮಾನ್ಯ ಜನತೆ ಬಹು ಮುಖ್ಯವಾದಂಥ ಒಂದು ಪಾತ್ರವನ್ನು ವಹಿಸುತ್ತಾರೆ. ಅದನ್ನು ಗಮನಕ್ಕೆ ತೆಗೆದುಕೊಂಡರೆ, ಬೆಂಗಳೂರು ನಗರದಲ್ಲಿ ೮ ಲಕ್ಷ ಜನಸಂಖ್ಯೆ ಇರುವಾಗ, ೭೫ ಸದಸ್ಯರು ನಗರಪಾಲಿಕೆಯಲ್ಲಿದ್ದರು. ಕಾರಣಾಂತರದಿಂದ ೧೨–೧೩ ಲಕ್ಷ ಜನಸಂಖ್ಯೆ ಆದಾಗ, ಅಂದಿನ ಸರ್ಕಾರ ೬೩ ಸದಸ್ಯರುಗಳಿಗೆ ಇಳಿಸಿದರು. ಯಾವ ಕಾರಣಕ್ಕಾಗಿ ಇಳಿಸಿದರೋ ನನಗೆ ಗೊತ್ತಿಲ್ಲ ಬೆಂಗಳೂರು ನಗರದಲ್ಲಿ ಸುಮಾರು ೪೦ ಲಕ್ಷ ಜನಸಂಖ್ಯೆ ಇರುವಂಥ ಸಮಯದಲ್ಲಿ ೮೭ ಕ್ಷೇತ್ರಗಳಿಗೆ ಹಿಂದಿನ ಸರ್ಕಾರ ಅನುಕೂಲ ಮಾಡಿತು. ಹಿಂದಿನ ಸರ್ಕಾರ ಯಾವ ಕಾರಣಕ್ಕಾಗಿ ೮೭ ಕ್ಷೇತ್ರಗಳನ್ನು ಮಾಡಿತು, ಎನ್ನುವುದು ನನಗೆ ಈಗ ಜ್ಞಾಪಕ ಇಲ್ಲ, ಜಾಸ್ತಿ ಮಾಡಿದ್ದು ಸೂಕ್ತವಾಗಿತ್ತು. ಕ್ಷೇತ್ರಗಳನ್ನು ಮಾಡುವಾಗ ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ರೀತಿಯಲ್ಲಿ ತೀರ್ಮಾನ ಮಾಡಿದರು. ಹಾಗೆ ಕ್ಷೇತ್ರಗಳನ್ನು ವಿಂಗಡಣೆ ಮಾಡುವಾಗ ಮಹಿಳೆಯರ ಕ್ಷೇತ್ರಗಳಲ್ಲಿ ಒಂದು ಕ್ಷೇತ್ರಕ್ಕೂ ಮತ್ತೊಂದು ಕ್ಷೇತ್ರಕ್ಕೂ ಮತದಾರರ ಪಟ್ಟಿಯಲ್ಲಿ ಬಹಳ ವಿಪರ್ಯಾಸ ಹೆಚ್ಚಾಗಿತ್ತು. ಆ ಕ್ಷೇತ್ರಗಳಲ್ಲಿ ಒಂದು ಮತಕ್ಕೆ ಸಂಬಂಧಪಟ್ಟವರನ್ನು ಅಂದರೆ, ಕಾರ್ಮಿಕ ಪ್ರತಿನಿಧಿಗಳಾದಂತಹವರನ್ನು, ಅಲ್ಪಸಂಖ್ಯಾತರನ್ನು ಮತ್ತು ಬೇರೆ ಪ್ರತಿನಿಧಿ ಸ್ಥಾನ ಪಡೆಯಂದ ಜನ ಇದ್ದಾರೆ ಅಂತಹವರಿಗೆ ಪ್ರತಿನಿಧಿ ಸ್ಥಾನ ಕೊಡುವಂಥ ಒಂದು ಕೆಲಸವನ್ನು ಕೂಡ ಆ ಮಹಿಳೆಯರ ಕ್ಷೇತ್ರಗಳಲ್ಲಿ ಕೂಡ ಹೆಚ್ಚಾಗಿ ಮಾಡಲಿಲ್ಲ. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ನಗರದಾದ್ಯಂತ ಮಹಿಳೆಯರಿಗೆ ಎಂದು ಕ್ಷೇತ್ರಗಳನ್ನು ವಿಂಗಡಿಸುವಾಗ ಕೇವಲ ಎರಡೇ ಎರಡು ಕ್ಷೇತ್ರಗಳಲ್ಲಿ ಮಾತ್ರ ಮುಸಲ್ಮಾನ್ ಜನಾಂಗದವರು ಗೆದ್ದು ಬರಲಿಕ್ಕೆ ಅವಕಾಶವಾಗಿತ್ತು.

ಬೆಂಗಳೂರು ಮಹಾ ನಗರ ಪಾಲಿಕೆಯಲ್ಲಿ ಎರಡು ಕ್ಷೇತ್ರದಲ್ಲಿ ಮುಸ್ಲಿಂ ಮಹಿಳೆಯವರು ಆರಿಸಿ ಬರಲು ಮಾತ್ರ ಅವಕಾಶವಿದೆ. ಈಗಿನ ಪರಿಸ್ಥಿತಿಯಲ್ಲಿ ಬಹಳ ಸಂಖ್ಯೆಯಲ್ಲಿ ಅಲ್ಪ ಸಂಖ್ಯಾತರು ಇದ್ದಾರೆ. ಮುಸಲ್ಮಾನರು, ಜೈನರು ಕ್ರಿಶ್ಚಿಯನ್‌ರು ಇದ್ದಾರೆ. ಆದರೆ ಅವರು ಗೆದ್ದು ಬರಲು ಅನುಕೂಲವಾಗಿರಲಿಲ್ಲ. ನಾವು ಎಷ್ಟೇ ಪ್ರಜಾಪ್ರಭುತ್ವ. ಜಾತ್ಯಾತೀತ ಮತೀತ ಎಂದು ಹೇಳಿದರೂ ಕೂಡ, ಮತ ನಡೆಯುತ್ತಿರುವುದು ಜಾತಿಯ ಹೆಸರಿನಲ್ಲಿ ಮತದ ಹೆಸರಿನಲ್ಲಿ ನಡೆದು ಹೋಗುತ್ತಿದೆ, ಅದಕ್ಕೆ ರಾಜಕೀಯ ಪಕ್ಷಗಳು ಅನಾವಶ್ಯಕವಾಗಿ ಕಾರಣಕರ್ತರಾಗಿದ್ದಾರೆ. ಇದು ಬಹಳ ದುಃಖಕರವಾದ ಮಾತು. ಆ ವಿಷಯವನ್ನು ಈಗ ಚರ್ಚೆ ಮಾಡಲಿಕ್ಕೆ ಹೋಗುತ್ತಿಲ್ಲ. ಅದೇ ರೀತಿ ಬೆಂಗಳೂರು ನಗರದಲ್ಲಿ ಬಹು ಸಂಖ್ಯೆಯಲ್ಲಿ ಕಾರ್ಮಿಕರು ಇದ್ದಾರೆ ಮತ್ತು ನಿಮ್ಮ ವರ್ಗದವರು ಸಹ ಬಹಳ ಸಂಖ್ಯೆಯಲ್ಲಿ ಇದ್ದಾರೆ. ಎಲ್ಲರ ಕಣ್ಣಿಗೆ ದೃಷ್ಟಿಗೆ ಕಾಣುವಂತಹ ಈ ಕೊಳಚೆ ಪ್ರದೇಶಗಳಲ್ಲಿ ಜನ ಬಹಳ ಇದ್ದಾರೆ. ಈ ಕೊಳಚೆ ಪ್ರದೇಶಗಳಲ್ಲಿ ಅಲ್ಪಸಂಖ್ಯಾತರು ಮುಸ್ಲೀಮರು, ಕ್ರಿಶ್ಚಿಯನ್ನರು ಸಹ ಸಾಕಷ್ಟು

ಸಂಖ್ಯೆಯಲ್ಲಿ ಬಹಳ ಜನ ವಾಸ ಮಾಡುತ್ತಿದ್ದಾರೆ. ಈ ನಮ್ಮ ಬೆಂಗಳೂರು ಮಹಾ ನಗರಪಾಲಿಕೆಯಲ್ಲಿ ಸರಿಯಾದ ರೀತಿಯಲ್ಲಿ ಒಂದು ರೀತಿಯ ಸರಿಸಮಾನವಾದ ಪ್ರಾತಿನಿಧ್ಯವನ್ನು ಕೊಡುವ ಪ್ರಯತ್ನ ಮಾಡುವುದಾದರೆ ಈ ಎಲ್ಲಾ ಕೋವಿನವರಿಗೆ ಹಾಗೂ ಕೊಳಚೆ ಪ್ರದೇಶಗಳಲ್ಲಿ ಇರತಕ್ಕ ಜನರ ಆರ್ಥಿಕ ಪರಿಸ್ಥಿತಿಯಲ್ಲಿ ಹಾಗೂ ಸಾಮಾಜಿಕ ಪರಿಸ್ಥಿತಿಯಲ್ಲಿ ಅವರಿಗೆ ಬಹಳ ಅನುಕೂಲವಾಗಬೇಕಾಗಿದೆ. ಅಂತಹವರಾಗಿರಲಿ ಅಲ್ಪಸಂಖ್ಯಾತರಾಗಿರಲಿ, ನಿಮ್ನ ವರ್ಗದವರೆ ಆಗಿರಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರೆ, ಆಗಿರಲಿ, ಇವರಿಗೆಲ್ಲ ಸೂಕ್ತ ಪ್ರಮಾಣದಲ್ಲಿ ಪ್ರತಿನಿಧಿ ಸ್ಥಾನವನ್ನು ಕೊಡುವಂತಹ ಒಂದು ವಿಂಗಡಣೆಯು ಕ್ಷೇತ್ರಗಳು ಇನ್ನೂ ವಿಂಗಡಣೆಯಾಗಿಲ್ಲ. ಆದ್ದರಿಂದ ಬಹಳ ಎಲೆಕ್ಟ್ರಿಸಿಟಿ ಪೊಜಿಷನ್ ಆಗಿದೆ. ಇದಕ್ಕಿಂತ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ವಿದ್ಯಾವಂತರು ಅದರಲ್ಲೂ ಎಕನಾಮಿಕ್ ಮತ್ತು ಟೆಕ್ನಾನಾಜಿಕಲ್ ಆಸ್ಪೆಕ್ಟ್‌ನಲ್ಲಿ ಹೆಚ್ಚು ಪ್ರವೀಣತೆ ಪಡೆದಂತಹವರು ಇದ್ದಾರೆ. ಟೌನ್ ಪ್ಲಾನಿಂಗ್ ಅಂಡ್ ಟೌನ್ ಪ್ಲಾನಿಂಗ್ ಆರ್ಕಿಟೆಕ್ಚರ್ ವಿಷಯವಾಗಿರಲಿ, ಬೆಂಗಳೂರು ನಗರವನ್ನು ಯಾವ ರೀತಿ ಪ್ರಗತಿದಾಯಕವಾದ ನಗರವನ್ನು ಮಾಡಬೇಕೆಂದು ಗಮನಕ್ಕೆ ತೆಗೆದುಕೊಂಡರೆ ಮತ್ತು ಅತಿ ವೇಗವಾಗಿ ತಪ್ಪು ಹಾದಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರವನ್ನು ತಡೆ ಹಾಕಿ ಸರಿಯಾದ ಒಂದು ರೀತಿಯಲ್ಲಿ ಈ ಬೆಂಗಳೂರು ನಗರವನ್ನು ಬೆಳೆಸುವ ಯೋಜನೆ ಮಾಡಬೇಕೆಂದು ನಾನು ಕಳಕಳಿಯಿಂದ ಹೇಳಬಯಸುತ್ತೇನೆ, ಬೆಂಗಳೂರು ಮಹಾನಗರಪಾಲಿಕೆಗೆ ಚುನಾವಣೆ ಮಾಡುವುದಕ್ಕೆ ಮೊದಲು ಕ್ಷೇತ್ರಗಳ ಪುನರ್ ವಿಂಗಡಣೆಯನ್ನು ಮಾಡುವುದು ಬಹಳ ಅತ್ಯಾವಶ್ಯಕವಾಗಿದೆ ನಾವು ರಾಜಕೀಯ ಪಕ್ಷಗಳವರಾಗಿ ಒಂದು ಪಕ್ಷ ಮಾಡಿದ್ದನ್ನು ಮತ್ತೊಂದು ಪಕ್ಷ ಕಾರಣಾಂತರದಿಂದ ಒಪ್ಪದೆ ನಮ್ಮ ನಮ್ಮಲ್ಲೇ ಈ ಭಿನ್ನಾಭಿಪ್ರಾಯವನ್ನು ತಂದು ಇಡೀ ರಾಷ್ಟ್ರದಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಂತಹ ಬೆಂಗಳೂರು ನಗರ ಅಂತರ ರಾಷ್ಟ್ರಮಟ್ಟದಲ್ಲಿ ಪ್ರಚಂಡವಾದ ಹೆಸರು ಪಡೆದಂತಹ ನಗರ ಬೆಂಗಳೂರಾಗಿದೆ. ಪ್ರಪಂಚವಾದ್ಯಂತ ಎಲ್ಲಿ ಹೋದರೂ ನಾವು ಬೆಂಗಳೂರಿನಿಂದ ಬಂದಿದ್ದೇವೆಂದು ಹೇಳಿದತಕ್ಷಣ It is one of the most beautifull cities in the world, most well-planned city. ಅನ್ನತಕ್ಕ ಲೆವೆಲ್‌ನಲ್ಲಿ ಅಲ್ಲಿಯ ಜನರು ಹೇಳುತ್ತಾರೆ. ಅಂತಹ ಬೆಂಗಳೂರು ನಗರ ಇವತ್ತು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ ಯಾವ ಕ್ಷಣದಲ್ಲಿ ಯಾವ ರೀತಿ ಎಕ್ಸ್‌ಪ್ಲೋಡ್ ಆಗಿ ಒಂದು ಮೋಸ್ಟ್ ಇಲ್ ಪ್ಲಾನ್ಡ್ ಸಿಟಿ ಎನ್ನುವ ರೀತಿಯಲ್ಲಿ ಆಗಿ ಹೋಗುತ್ತದೋ ಎನ್ನುವ ಒಂದು ಭಯೋತ್ಪಾದನೆಯ ಪರಿಸ್ಥಿತಿ ಬಂದಿದೆ. ಆದ್ದರಿಂದ ಈ ಸಭೆಯಲ್ಲಿರುವ ಪ್ರತಿಯೊಂದು ರಾಜಕೀಯ ಪಕ್ಷಗಳ ಪ್ರತಿ ನಾಯಕರಲ್ಲಿ ಬೆಂಗಳೂರು ನಗರದ ಒಬ್ಬ ನಾಗರೀಕನಾಗಿ ನಗರ ವಿಷಯದ ಅನುಭವವನ್ನು ಪಡೆದಂತಹವನಾಗಿ ತಮ್ಮೆಲ್ಲರನ್ನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಏಪ್ರಿಲ್ ೨೯ನೇ ತಾರೀಖು ಬೆಂಗಳೂರು ಮಹಾ ನಗರಪಾಲಿಕೆಯ ಚುನಾವಣೆಯನ್ನು ಮಾಡಲು ಏನು ತೀರ್ಮಾನ ಮಾಡಿದೆ ಬೆಂಗಳೂರು ನಗರದಾದ್ಯಂತ ಕ್ಷೇತ್ರಗಳ ಪುನರ್‌ವಿಂಗಡಣೆಯನ್ನು ಕ್ಷೇತ್ರಕ್ಷೇತ್ರವನ್ನಾಗಿ ಮಾಡಿ ಎಲ್ಲ ವಿಭಾಗದ ಜನತೆಗೆ ಪ್ರತಿನಿಧಿ ಸ್ಥಾನ ಸಿಗುವಂತಹ ರೀತಿಯಲ್ಲಿ ಅನುಕೂಲ ಮಾಡಿ ಇನ್ನು ೬-೯ ತಿಂಗಳುಗಳಲ್ಲಿ ಈ ಕೆಲಸಗಳನ್ನು ಮಾಡಿ ಚುನಾವಣೆ ಮಾಡುವುದು ಸೂಕ್ತ. ಬೆಂಗಳೂರನ್ನು ಉಳಿಸಿಕೊಳ್ಳೋಣ, ಬೆಂಗಳೂರಿನ ಕೀರ್ತಿಯನ್ನು ಉಳಿಸಿಕೊಳ್ಳೋಣ, ಬೆಂಗಳೂರಿನಲ್ಲಿ ಏನು ಎನ್‌ವೈರನ್‌ಮೆಂಟಲ್ ಲೈಫ್ ಹಳೆ ಕಾಲದಲ್ಲಿ ಇತ್ತು, ಅದನ್ನು ಮತ್ತೆ ವಾಪಸ್ಸು ತೆಗೆದುಕೊಂಡು ಬರುವಂತಹ ಒಂದು ಪ್ರಯತ್ನ ಮಾಡೋಣ. ಅದಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಪಿ. ವೆಂಕಟೇಶ್ (ಹೆಚ್.ಡಿ. ಕೋಟೆ).— ಸನ್ಮಾನ್ಯ ಉಪಧ್ಯಕ್ಷರೆ, ನಾನು ಈ ಒಂದು ತಿದ್ದುಪಡಿಯನ್ನು ವಿರೋಧಿಸಿ ಎರಡು ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಚುನಾವಣೆಗಳನ್ನು ಮುಂದೂಡಿರುವುದರಿಂದ ಇವೊತ್ತು ಸಾರ್ವಜನಿಕರಲ್ಲಿ ಏನು ಅಭಿಪ್ರಾಯ ಇದೆ ಎನ್ನುವುದನ್ನು ನಾವು ಹೇಳಬೇಕಾಗುತ್ತದೆ. ಈಗ ಸರ್ಕಾರದವರು ಹಲವಾರು ಕಾರಣಗಳನ್ನು ಕೊಡುತ್ತಿದ್ದಾರೆ. ಈ ಸರ್ಕಾರ ಬಂದು ನಾಲ್ಕು ತಿಂಗಳುಗಳು ಆಗಿದೆ. ಈ ಸರ್ಕಾರ ಚುನಾವಣೆ ನಡೆಸಬೇಕಾದರೆ ಕಾಂಗ್ರೆಸ್ ಪಕ್ಷಕ್ಕೆ ಅಪಾರವಾದ ಹಣ ಬೇಕಾಗುತ್ತದೆ. ಈ ಪಕ್ಷ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾದುದರಿಂದ ಪಕ್ಷದಲ್ಲಿ ಹಣ ಇಲ್ಲ, ಇವರಿಗೆ ಹೈಕಮಾಂಡ್‌ನವರು ದುಡ್ಡು ಕಳುಹಿಸುವುದಿಲ್ಲ ಈಗ ಸೆಕೆಂಡ್ಸ್ ನಿರ್ಲಕ್ಷಿಸಿದ್ದಾರೆ. ಇವರು ಡೊನೇಷನ್ ಕಲೆಕ್ಟ್ ಮಾಡಿ, ದುಡ್ಡನ್ನು ಕಲೆಕ್ಟ್ ಮಾಡಬೇಕಾದರೆ ಸ್ವಲ್ಪ ನಿಧಾನವಾಗುತ್ತದೆ. ಇವರಿಗೆ ದುಡ್ಡಿನ ತೊಂದರೆಯಾಗಿ ಈ ಚುನಾವಣೆಯನ್ನು ಮುಂದೂಡಿದ್ದಾರೆಂದು ಸಾರ್ವಜನಿಕರ ಅಭಿಪ್ರಾಯ ಇದೆ.

ಉಪಾಧ್ಯಕ್ಷರು. — ಈಗ ತಾವು ವಿಧೇಯಕದ ಮೇಲೆ ಮಾತನಾಡಬೇಕು.

ಶ್ರೀ ಎಂ.ಪಿ. ವೆಂಕಟೇಶ್ — ಅಧ್ಯಕ್ಷರೆ, ಈ ಸರ್ಕಾರದಲ್ಲಿ ಹಣ ಇಲ್ಲ. ಸ್ವಲ್ಪ ತಾಪತ್ರಯ ಇದೆ. ಇವರು ಹಣ ಕಲೆಕ್ಷನ್ ಮಾಡಿಕೊಳ್ಳಲಿಕ್ಕೆ ಸ್ವಲ್ಪ ನಿಧಾನವಾಗುತ್ತಾ ಇದೆ, ಇದು ಬಂದ ಮೇಲೆ ಚುನಾವಣೆ ಮಾಡುತ್ತಾರೆಂಬ ಭಾವನೆ ಎಲ್ಲರಲ್ಲೂ ಉಂಟಾಗಿದೆ. ಏಕೆಂದರೆ, ಸೆಕೆಂಡ್ಸ್ ನಿಲ್ಲಿಸಿದ್ದಾರೆ. ಇವರು ಹಲವಾರು ರೀತಿಯಿಂದ ದುಡ್ಡು ಕಲೆಕ್ಷನ್ ಮಾಡಿಕೊಳ್ಳಬೇಕು. ಈ ತಿಂಗಳು ೨೯ನೇ ತಾರೀಖಿನಿಂದ ಚುನಾವಣೆಯನ್ನು ಮುಂದೂಡುತ್ತಾರೆಂಬ ಭಾವನೆ ಸಾರ್ವಜನಿಕರಲ್ಲಿ ಬಂದಿದೆ. ಜೂನ್ ತಿಂಗಳು ಆದ ಮೇಲೆ ಚುನಾವಣೆ ಮಾಡುತ್ತಾರೊ ಎಕ್ಸೈಜ್ ಮಂತ್ರಿತರ ಬಾಬುಗಳಿಂದ ಹಣ ಬರುತ್ತದೋ ಯಾವುದಾದರೂ ಡೊನೇಷನ್ ಕಲೆಕ್ಷನ್ ಬೇಕಲ್ಲ. ಕ್ಯಾಂಡಿಡೇಟ್‌ಗಳಿಗೆ ಹಣ ಬೇಕಾಗುವುದರಿಂದ ಮತ್ತೆ ಚುನಾವಣೆಯನ್ನು ಮುಂದೂಡುತ್ತಾರೆಂದು ಸಾರ್ವಜನಿಕರಲ್ಲಿ ಭಾವನೆ ಬಂದಿದೆ

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ವೆಂಕಟೇಶ್‌ರವರೆ, ಈ ಆಲೋಚನೆ ಇಷ್ಟರವರೆಗೆ ಯಾರಿಗೂ ಹೊಳೆದಿಲ್ಲ. ಈಗ ತಾವು ಆಲೋಚನೆ ಕೊಟ್ಟಿದ್ದೀರಿ.

ಶ್ರೀ ಎಂ.ಪಿ. ವೆಂಕಟೇಶ್ — ನನಗಲ್ಲ, ತಮ್ಮ ಬಗ್ಗೆ ಸಾರ್ವಜನಿಕರಲ್ಲಿ ಅಭಿಪ್ರಾಯ ಬಂದಿದೆ. ಪಾಪ ಈಗ ಸೆಕೆಂಡ್ಸ್ ನಿಲ್ಲಿಸಿದ್ದಾರೆ ಹೈ ಕಮ್ಯಾಂಡ್‌ನವರು ಇವರಿಗೆ ದುಡ್ಡು ಕೊಡುವುದಿಲ್ಲ, ಇವರಿಗೆ ಕಲೆಕ್ಷನ್ ಮಾಡುವುದಕ್ಕೆ ಕಷ್ಟವಾಗುತ್ತದೆ. ಒಬ್ಬ ಮಂತ್ರಿ ಹೇಳಿದಂಥ ಮಾತನ್ನು ಇನ್ನೊಬ್ಬ ಮಂತ್ರಿಗಳು ಕೇಳುವುದಿಲ್ಲ, ಬಹಳ ತೊಂದರೆಯಿದೆ ಎಂದು ಅನುಕಂಪ ತೋರಿಸುತ್ತಾ ಇದ್ದಾರೆ. ೨೯ನೇ ತಾರೀಖು ಬೇಕಂತಲೇ ಚುನಾವಣೆಯನ್ನು ನಿಗದಿ ಮಾಡಿದ್ದಾರೆ. ಅವರಿಗೆ ಬಸವಜಯಂತಿ ಇದೆ ಎಂದು ಗೊತ್ತಿದೆ. ಪೋಸ್ಟ್‌ಫೋನ್ ಮಾಡಬೇಕೆಂದುಅವರಿಗೆಗೊತ್ತಿದೆ. ಚುನಾವಣೆ ಪೋಸ್ಟ್‌ಫೋನ್ ಮಾಡುವ ಉದ್ದೇಶ ಅವರ ಮನಸ್ಸಿನಲ್ಲಿದೆ, ಅವರು ಒತ್ತಾಯ ಮಾಡುತ್ತಾರೆ, ನಾವು ಮುಂದೂಡಬಹುದು ಎಂದು ಅವರ ಮನಸ್ಸಿನಲ್ಲಿದೆ ಈ ಚುನಾವಣೆಯನ್ನು ಮತ್ತೆ ಮುಂದೂಡಿ, ಪರ್ವಾಗಿಲ್ಲ. ಇನ್ನೊಂದು ತಿಂಗಳು ಟೈಂ ತೆಗೆದುಕೊಂಡು, ಈ ಎಲ್ಲ ವ್ಯವಸ್ಥೆ ಸರಿಹೋದ ಮೇಲೆ ಚುನಾವಣೆ ಮಾಡಿ. ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† SRI D. B. CHANDRE GOWDA (Leader of the Opposition).—Madam Deputy Speaker, I rise to oppose this Bill. At the outset I would endorse the views entirely expressed by hon'ble member Professor Nanjundaswamy. I would only add that it is a draconian Bill which deserves to be opposed. Section 24 of the Act provide power to the Commissioner to fix the date of the election. it is not the Government. It is the Commissioner who fix the date of the election. Now you are taking power by amending Section. 55 the power vested in Section 24. Either it should get dispensated or there cannot be two things. Either Section 24 should be there or the amendment that you have sought for under Section 55. Theree fore the Commissioner of the Corporation is the authority to issue notification under Section 24, if I am correct. Now let me go to th- bill itself. In the statement of objects and reasons it is stated.

> "it became necessary to postpone the poll to the City Corporations in the State, scheduled to be held on 25th February, 1990, on account of the reasons beyond the control of the Government"

ಅದು ಯಾವ ರೀಸನ್ಸ್? ಈ ಸದನಕ್ಕೆ ಹೇಳದೇ ಇರುವಂಥಾದ್ದು sacrosanct ಏನು ಇದೆ. ಏನು ಕಾರಣ ಎಂಬುದನ್ನು ಹೇಳಿ. Take us into confidence. 'beyond the control of the Government'' ಎಂದು ಜನರಲೈಸ್ ಮಾಡಿದರೆ ಸ್ಟೇಟ್‌ಮೆಂಟ್ ಮಾಡಿದರೆ should this House believe it? ಈಗ ಬಹುತೇಕ ಸದಸ್ಯರ ವಾದ ಏನು ಎಂದರೆ, ಸರಕಾರಿ ನೌಕರರು ಮುಷ್ಕರ ಹೂಡಿದ್ದರು. ಆ ಕಾರಣದಿಂದ ಚುನಾವಣೆ ಮುಂದೆ ಹೋಯಿತು ಎಂದು. ಒಂದು ವೇಳೆ ಅದು ಅಲ್ಲವೆಂದಾದರೆ ಅದನ್ನಾದರೂ ನೀವು ಹೇಳಬಹುದಾಗಿತ್ತು. ಅದನ್ನು ಮುಚ್ಚಿಡುವಂತಹ ಪ್ರಮೇಯ ಏನಿತ್ತು, ಅದನ್ನು ಹೇಳಿದ್ದರೆ ನಾವು ಕನ್ವಿನ್ಸಿಂಗ್ ಆಗಿ ಹೌದೋ ಅಲ್ಲವೊ ಎಂದು ವಾದ

ಮಾಡುವುದಕ್ಕೆ ಸಾಧ್ಯವಿತ್ತು. ಇಡೀ ರಾಜ್ಯದ ಮೂರನೇ ಒಂದು ಭಾಗದಷ್ಟು ಜನರು ಏನು ಈ ಚುನಾವಣಾ ಪ್ರಕ್ರಿಯೆಯೊಳಗೆ ಪಾಲುಗೊಳ್ಳುತ್ತಾರೆ. ಅಂತಹ ಚುನಾವಣೆಯನ್ನು ಮುಂದೂಡುವಾಗ, ರದ್ದು ಪಡಿಸುವಾಗ ಏನು ಆಗಿಲ್ಲವೇನೋ ಅನ್ನುವ ಹಾಗೆ beyond the control of the Government ಅನ್ನುವಂತಹ ಪದವನ್ನು ಹೇಳಿ ಕಾರಣವನ್ನು ಮುಚ್ಚಿಡುತ್ತಿದ್ದೀರಿ, ಇದು ಏಕೆ? ಸ್ಟೇಟ್‌ಮೆಂಟ್ ಆಫ್ ಎಕ್ಸ್‌ಪ್ಲನೇಟರಿಯಲ್ಲಿ ಏನು ಇದೆ ಎಂಬುದನ್ನು ಓದುತ್ತೇನೆ.

> "As the Karnataka Legislative Assembly and the Karnataka Legislative Council were not in session and as the matter was urgent, the Karnataka Municipal Corporations (Amendment) Ordinance, 1990 (Karnataka Ordinance 1 of 1990) was promulgated"

On 8th final call was given by the Government employees. On 9th the Government appealed for the withdrawal. On 12th Government nployees announced that they are going ahead with the strike. n 13th Government announced that the strike is illegal and on 14th overnment also said that it is punishable under law. ೧೫ನೇ ತಾರೀಖು ುಷ್ಕರ ಪ್ರಾರಂಭವಾಯಿತು. ಆ ದಿವಸ ಅಂದರೆ ೧೫ನೇ ತಾರೀಖು ಚುನಾವಣೆಯನ್ನು ಮುಂದೂಡಿದ್ದೇವೆಂದು ಹೇಳಲಿಲ್ಲ. ಚುನಾವಣೆಯನ್ನು ರದ್ದು ಮಾಡಿದ್ದೇವೆಂದು ಹೇಳಿದಿರಿ, ಅದು ಪತ್ರಿಕೆಗಳಲ್ಲಿ ಕೂಡ ಬಂತು. ೧೬-೧೭-೧೮ ಅಥವಾ ೧೫-೧೬-೧೭ ಈ ಮೂರು ದಿವಸ ಅಷ್ಟೇ, ಮುಷ್ಕರ ಸಕ್ಸಸ್‌ಫುಲ್ ಆಗಿ ನಡೆದಿದ್ದು ೧೮ನೇ ತಾರೀಖು elections are cancelled ಎಂದು ಅನೌನ್ಸ್‌ಮೆಂಟ್ ಬಂತು. ನನಗೆ ಆಶ್ಚರ್ಯವೇನೆಂದರೆ, ಈ ಪ್ರಕ್ರಿಯೆಯೊಳಗೆ ಸರಕಾರಿ ನೌಕರರ ಮುಷ್ಕರ ೧೫ನೇ ತಾರೀಖು ಪ್ರಾರಂಭವಾದ ದಿವಸ ಚುನಾವಣೆ ರದ್ದು ಮಾಡಿದ್ದೇವೆ ಎಂದು ಹೇಳಿದಿರಲ್ಲ ಅದನ್ನು ಹೇಳುವುದಕ್ಕೆ ಯಾವ ಶಾಸನ ನಿಮಗೆ ಅಧಿಕಾರ ಕೊಟ್ಟಿತು. ನೀವು ಈಗ ಹೇಳುತ್ತಿದ್ದೀರಿ ವಿಧಾನ ಸಭೆ, ವಿಧಾನ ಪರಿಷತ್ತು ಸೆಷನ್‌ನಲ್ಲಿ ಇದ್ದವು ಎಂದು. Technically both the Houses were in session, till 16th. ಅದು ೧೫ನೇ ತಾರೀಖು ಗೊತ್ತಾದ ಮೇಲೆ ಎಷ್ಟು ಕ್ಯಾಜ್ಯುಯಲ್ ಆಗಿ ನೀವು ಕೆಲಸ ಮಾಡುತ್ತಿದ್ದೀರಿ. ೧೫ನೇ ತಾರೀಖು ಚುನಾವಣೆಯನ್ನು ರದ್ದು ಮಾಡಿದ್ದೇವೆಂದು ಹೇಳುವಾಗ ಶಾಸನಸಭೆಗಳು technically they were in session ಎನ್ನತಕ್ಕಂಥದ್ದೂ ಕೂಡ ಸರ್ಕಾರಕ್ಕೆ ಗೊತ್ತಿಲ್ಲ. This is the basic point. ೧೬ನೇ ತಾರೀಖು ಹೌಸ್ ಅನ್ನು ಪ್ರೊರೋಗ್ ಮಾಡುತ್ತಾರೆ. ಅಂದರೆ ೧೫ನೇ ತಾರೀಖಿಗೆ ತಿಳಿದುಕೊಳ್ಳುವಷ್ಟು ತಾಳ್ಮೆ ಈ ಸರ್ಕಾರಕ್ಕೆ, ಜವಾಬ್ದಾರಿ ಜಾಗದಲ್ಲಿರುವವರಿಗೆ ಇಲ್ಲ. The House is not prorogued ಎಂದು ೧೬ನೇ ತಾರೀಖು ಇವರಿಗೆ ಗೊತ್ತಾಗುತ್ತದೆ. ಹಾಗಾದರೆ ಏನು ಮಾಡಬೇಕು. Therefore, you prorogue the House. ನಿಮ್ಮ ಒತ್ತಾಯಕ್ಕಾಗಿ ಸದನವನ್ನು ಪ್ರೊರೋಗ್ ಮಾಡಿಸಿದ್ದೀರಿ. ಈ ಶಾಸನವನ್ನು ತರುವುದಕ್ಕಾಗಿ ಈ ಸದನವನ್ನು ಪ್ರೊರೋಗ್ ಮಾಡಿದ್ದೀರಿ. ನಿಮಗೆ ನಿಜವಾಗಿಯೂ ಜನತಂತ್ರದಲ್ಲಿ ಕಳಕಳಿಯಿದ್ದರೆ ಆ ತಕ್ಷಣವೇ ಅಧ್ಯಕ್ಷರಿಗೆ ಹೇಳಿದ್ದರೆ ಶಾಸನಸಭೆಯನ್ನು ಮೂರು ದಿವಸದಲ್ಲಿ, ಕರೆಯಬಹುದಾಗಿತ್ತು. ಇದಕ್ಕೊಂದು ಆರ್ಡಿನೆನ್ಸ್ ಬೇಕಾಗುತ್ತಿರಲಿಲ್ಲ. ಮೂರೇ ದಿವಸದಲ್ಲಿ ಈ ಸದನವನ್ನು ಕರೆಯಬಹುದಾಗಿತ್ತು. ವಿಶೇಷವಾದಂತಹ ಅಜೆಂಡಾವನ್ನು ಕೊಟ್ಟು ಶಾಸನಸಭೆಯ ಅಧ್ಯಕ್ಷರೇ ಸದನವನ್ನು ಕರೆಯಬಹುದಾಗಿತ್ತು. ರಾಜ್ಯಪಾಲರನ್ನು ಕೇಳಬೇಕಾದಂತಹ ಅವಶ್ಯಕತೆ ಇರಲಿಲ್ಲ. ಆ ಕೆಲಸವನ್ನು ನೀವು ಮಾಡುವುದಿಲ್ಲ.

೨-೩೦ ಪಿ.ಎಂ.

ಜನತಂತ್ರಕ್ಕೆ ಭಿನ್ನವಾದಂಥ ಸರ್ಕ್ಯುಟ್ ಮೆಥೆಡ್‌ನ್ನು ನೀವು ಹಾಕಿಕೊಂಡಿದ್ದೀರಿ. ಆ ಸರ್ಕ್ಯುಟಸ್ ಮೆಥೆಡ್ ಏನು ? ಈ ಸದನವನ್ನು ಪ್ರೊರೋಗ್ ಮಾಡಿ ರಾಜ್ಯಪಾಲರ ಹತ್ತಿರ ಹೋಗಿ ಆರ್ಡಿನೆನ್ಸ್ ಮಾಡಿಸಿದಿರಿ. ನಾನು ತಮ್ಮನ್ನು ಮುಖ್ಯವಾಗಿ ಪ್ರಶ್ನೆ ಮಾಡತಕ್ಕಂಥಾದ್ದು ಏನೆಂದರೆ, ನೀವು ಎಲ್ಲಿ ಜನತಂತ್ರದ ಕತ್ತನ್ನು ಹಿಸುಕಿದ್ದೀರಿ ಎಂದು. ಅದನ್ನು ದಯವಿಟ್ಟು ನೀವು ನಮಗೆ ಹೇಳಬೇಕು. ಆ ಮೇಲೆ the Government has no authority whatsoever and no powers to initiate the matter by issuing a Notification under section 24 except to give its consent. Under Section 24, it is

the Commissioner who has to issue the notification subject to the approval of the Government or the Government should accept the Notification. It is the Commissioner who has to fix the date of Elections. ಸೆಕ್ಷನ್ ೫೫ರಲ್ಲಿ ನೀವು ತಂದಿರತಕ್ಕ ವಿಧೇಯಕವನ್ನು ನಾವು ಒಪ್ಪಿಕೊಂಡರೆ ಸೆಕ್ಷನ್ ೨೪ರ ಗತಿ ಏನು ? what is the consequence of it ? Are you dispensing with the power of the Commissioner ? At the same time, are you dispensing the power investing with the Election Commissioner once and for all by issuing this draconian law ? These are the two basic issues confronting this Bill, I want an explanation from the Government on these two question. ಚುನಾವಣಾ ಪ್ರಕ್ರಿಯೆ ಎಂದರೆ ಏನು ? ಇದು ಬಹಳ ಗಂಭೀರವಾದ ವಿಚಾರ. ತಮಗೆಲ್ಲಾ ಗೊತ್ತಿದೆ ಮೆಹಂನಲ್ಲಿ ಚುನಾವಣೆ ಆದಾಗ ಅಲ್ಲಿ ನಡೆದಂಥ ಘಟನೆಗಳನ್ನು ಯಾರಿಗೂ ಕೂಡ ಸಮಾಧಾನ ತರಲಿಲ್ಲ. ಅದು ಜನತಾದಳದವರು ಇರಲಿ, ಭಾರತೀಯ ಜನತಾ ಪಕ್ಷದವರು ಇರಲಿ, ಕಮ್ಯುನಿಸ್ಟ್ ಪಾರ್ಟಿಯವರು ಇರಲಿ, ಕಾಂಗ್ರೆಸ್‌ನವರು ಇರಲಿ, ಇಡೀ ಸರ್ಕಾರ ಚುನಾವಣಾ ಕಮೀಷನರ್‌ರವರಿಗೆ ಹೇಳಿತು. ಇಲ್ಲಿ ಚುನಾವಣೆಯಲ್ಲಿ ಅನ್ಯಾಯ ನಡೆದಿದೆ. ಆದ್ದರಿಂದ ಇಲ್ಲಿ ಮರು ಚುನಾವಣೆಯನ್ನು ಮಾಡಿ ಎಂದು. The election Commissioner did not agree. He said the Government has no authority to say that. They further told the Government that if they are convinced that the repoll is necessary, they will order, Th y sent their representatives to Meham and after convincing themselves that there is a case for repoll, they ordered repoll, not on the pressure of the Government, not on the pressure of any political party, not on the here say evidence, not on the press report. But in the contrary, in our state, ನೀವು ಶಾಸನ ಸಭೆಯನ್ನು ಪ್ರೊರೋಗ್ ಮಾಡಿ ಯಾರನ್ನೂ ಕೇಳದೆ ಚುನಾವಣಾ ಕಮೀಷನರ್‌ರವರಿಗೂ ವಿಷಯ ತಿಳಿಸದೆ, ಅವರಿಗೆ ಕಾಗದ ಬರೆಯದೆ, ಅವರ ಅಭಿಪ್ರಾಯವನ್ನೂ ನೀವು ಪಡೆಯದೆ ಏಕಾಏಕಿ ಈ ತೀರ್ಮಾನ ತೆಗೆದುಕೊಂಡಿರಿ. ಇದಕ್ಕೆ ಕಾರಣ ಏನು ? ನಾನು ಚುನಾವಣಾ ಕಮೀಷನರ್‌ರವರಿಗೆ ಈ ಬಗ್ಗೆ ಒಂದು ಪತ್ರವನ್ನು ಬರೆದೆ. ಯಾವ ಶಾಸನದ ಆಧಾರದ ಮೇಲೆ ಈ ಚುನಾವಣೆಯನ್ನು ನೀವು ಮುಂದೂಡಿದಿರಿ ಎಂದು ಕಾಗದ ಬರೆದೆ. ಸರ್ಕಾರದಿಂದ ನನಗೆ ಏನೂ ಬಂದಿಲ್ಲ ಎಂದು ಚುನಾವಣಾ ಕಮೀಷನರ್ ಹೇಳಿದರು. ೨೦ನೇ ತಾರೀಖು ಶಿವಮೊಗ್ಗ ಜಿಲ್ಲೆಯಲ್ಲಿ ಚುನಾವಣಾ ಅಧಿಕಾರಿಯನ್ನು ನಿಮಗೆ ಸರ್ಕಾರದ ಆದೇಶ ಏನು ಬಂದಿದೆ ಎಂದು ಕೇಳಿದರೆ ಏನು ಬಂದಿಲ್ಲ ಎಂದು ಹೇಳಿದರು. ನೀವು ಏನು ಮಾಡುತ್ತಿದ್ದೀರಿ ಎಂದು ಕೇಳಿದರೆ, ನಾವು ಬ್ಯಾಲೆಟ್ ಪೇಪರ್ ಪ್ರಿಂಟ್ ಮಾಡಿಸುತ್ತಿದ್ದೇವೆ. ಇಂಡೆಲಿಬಲ್ ಇಂಕ್‌ನ್ನು ತರಿಸಿದ್ದೇವೆ. ಚುನಾವಣಾ ಪ್ರಕ್ರಿಯೆಗೆ ಬೇಕಾದಂಥ ಕಾಗದ, ಸೀಲು, ಪೆನ್ಸಿಲ್ ತರಿಸಿದ್ದೇವೆ. ಈ ಕೆಲಸವೆಲ್ಲಾ ಮಾಡುತ್ತಿದ್ದೇವೆಂದು ಹೇಳಿದರು. ನಾಮಿನೇಷನ್ ಮಾಡಿದ್ದಾಗಿದೆ, ಅಕ್ಸೆಪ್ಟನ್ಸ್ ಆಗಿದೆ ವಿತ್‌ಡ್ರಾಯಲ್ ಆಗಿದೆ ಸ್ಕ್ರೂಟಿನಿ ಆಗಿದೆ, ಚುನಾವಣಾ ಪ್ರಕ್ರಿಯೆ ಸಂಪೂರ್ಣವಾಗಿ ಮುಗಿದಿದೆ. ಇಂಥ ಸಂದರ್ಭದಲ್ಲಿ ನೀವು ಈ ಚುನಾವಣೆಯನ್ನು ಮುಂದೂಡಿದ್ದರಿಂದ ನಾನು ನಿಮಗೆ ಮೆಹಂನ ಉದಾಹರಣೆಯನ್ನು ಕೊಡಬೇಕಾಯಿತು. That is an extreme case in Indian Politics, where the Election Commission asserted by passing almost all the decisions of the Government. That is how you have to respect the law. ಹೀಗಾದರೆ ನಮ್ಮ ಈ ಶಾಸನಕ್ಕೆ ಗೌರವ ಎಲ್ಲಿ ಬರುತ್ತದೆ ? ಯಾವ ಚುನಾವಣಾ ಆಯೋಗವನ್ನು ನೀವು ನಿಮ್ಮ ವ್ಯಾಪ್ತಿಯೊಳಗೆ ಕೆಲಸ ಮಾಡುವಂತೆ ಹೇಳಿದ್ದೀರಿ. ಅಲ್ಲಿಗೆ ಗೌರವ, ಮನ್ನಣೆ, ಮಾನ್ಯತೆಯನ್ನು ಕೊಡತಕ್ಕಂಥ ಪ್ರತೀತಿಯನ್ನು ಜನತಂತ್ರದಲ್ಲಿ ಆಯ್ಕೆ ಮಾಡಿದಂಥ ನಾವು ಪಾಲನೆ ಮಾಡದೆ ತದ್ವಿರುದ್ಧವಾಗಿ ಮಾಡಿದರೆ ಈ ಶಾಸನಗಳನ್ನು ಒಪ್ಪುವುದಾದರೂ ಹೇಗೆ. This is the basic issue. ಏತಕ್ಕೆ ಹೀಗೆ ? The reason for this dichotomy is to initiate the Election Process to culminate this legal and logical conclusion unhampered By any Executive Agency's interference Executive Agency ಯinterference ಇಲ್ಲದೆ ಜನತಂತ್ರದಲ್ಲಿ ಚುನಾವಣೆ ಆಗಬೇಕು ಎನ್ನತಕ್ಕಂಥಾದ್ದು ಸದಿಚ್ಛೆ

otherwise the Government in power for any reason might mis-use the power and set at naught the election process and the whole democratic machinery envisaged under the Act.

ಈಪತ್ತು ಈ ಶಾಸನವನ್ನು ತಂದು, ಇದು ಬಹಳ ಬೇಕಾಗಿತ್ತು, ನಾವು ಜನತಂತ್ರವಾದಿಗಳು ನೀವು ಚುನಾವಣೆಗಳನ್ನು ಹಿಂದಕ್ಕೆ ಹಾಕಿದ್ದೀರಿ, ನಾವು ಮುಂದಕ್ಕೆ ಹಾಕಿದ್ದೇವೆ ಎಂದು ಹೇಳಿದ್ದೀರಿ. ಮಾನ್ಯ ನಂಜುಂಡಸ್ವಾಮಿಯವರು ಒಂದು ಮಾತನ್ನು ಹೇಳಿದರು. ಅದರ ಕಡೆ ಗಮನ ಕೊಡಿ. ನಿಮ್ಮ ಅಧಿಕಾರವೇನು ? ಜನತಂತ್ರಕ್ಕೆ ವಿರುದ್ಧವಾಗಿ ಕೆಲಸ ಮಾಡಿ ಬಚಾವ್ ಆಗಬಹುದು ಎಂದಿದ್ದರೆ ಅದು ಸಾಧ್ಯವಿಲ್ಲ. It goes against the very Constitution itself. I would therefore ask the Minister concerned to explain as to how it fits into the scheme of Constitutional thinking, the Legislators had in those days when they enacted the Karnataka Municipalities and Corporations Act 1976. ಈ ಶಾಸನವನ್ನು ಮಾಡುವಾಗ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಅಧಿಕಾರ ಕೊಡಬಹುದು ಎಂದು ಗೊತ್ತಿರಲಿಲ್ಲವೆ? ಎಷ್ಟರಮಟ್ಟಿಗೆ ಸೀಮಿತವಾದಅಧಿಕಾರವನ್ನು ನಿಮಗೆ ಕೊಟ್ಟರು ? Please see Section 55 here. "Suspension of Poll in the case of any interuption by riot, violence or any other sufficient cause." What is the sufficient cause here ? ರೈಯಟ್ ಅಂದರೆ ದಂಗೆ ಅಥವಾ ದೊಡ್ಡ ಸಂಘರ್ಷ ನಡೆದಿದ್ದರೆ ಅಂಥ ಕಾಲದಲ್ಲಿ ಚುನಾವಣೆಯನ್ನು ಮುಂದೂಡಬಹುದಿತ್ತು. ಅಥವಾ Any other sufficient cause ಈಗ ಸರ್ಕಾರಿ ನೌಕರರಮುಷ್ಕರ ಸಫಿಷಿಯೆಂಟ್ ಕಾಸ್ ಎಂದು ನೀವು ಭಾವನೆ ಮಾಡಿದ್ದರೆ ಅದನ್ನು ಇಲ್ಲಿ ಏಕೆ ಹೇಳುವುದಿಲ್ಲ. ಈ ನಿಮ್ಮ ಬಿಲ್‌ನಲ್ಲಿ ಸರ್ಕಾರಿ ಅಧಿಕಾರಿಗಳ ಮುಷ್ಕರದ ಕಾರಣ ನಾವು ಈ ಚುನಾವಣೆಗಳನ್ನು ಮುಂದೂಡಿದ್ದೇವೆ ಎಂದು ಹೇಳಿ. ಏಕೆ ಮುಚ್ಚಿಡುತ್ತೀರಿ. ಏಕೆ ಮುಚ್ಚಿಡುತ್ತೀರಿ ಅಂದರೆ ಸರ್ಕಾರಿ ನೌಕರರು ಎಂದೂ ಈ ಚುನಾವಣೆಯನ್ನು ಮಾಡುವುದಿಲ್ಲ ಎನ್ನುವ ಮಾತನ್ನು ಹೇಳಿಲ್ಲ. ನಾವು ರಾಜ್ಯಾಂಗಬದ್ಧವಾದಂಥ ಶಾಸನಬದ್ಧವಾದಂಥ ಜನಹಿತ ಚುನಾವಣೆಗೆ ಮಾಡತಕ್ಕಂಥ ಪ್ರಕ್ರಿಯೆಯನ್ನು ತಡೆಗಟ್ಟುತ್ತೇವೆ ಎಂಬ ಮಾತನ್ನು ಎಂದೂ ಅವರು ಹೇಳಲಿಲ್ಲ. ಆದ್ದರಿಂದ ನೀವು ಹೇಳುತ್ತಾ ಇಲ್ಲ. ಮುಷ್ಕರಕ್ಕೆ ಅದು ಕಾರಣ ಮೇಲಾಗಿ ಮಾನ್ಯ ಮುಖ್ಯಮಂತ್ರಿಗಳು ಚುನಾವಣಾ ಕಮಿಷನ್‌ನನ್ನು ಕೇಳಿದ್ದೇವೆ. ಅವರು ಬರೆದ ಕಾಗದದ ಕಾರಣಕ್ಕಾಗಿ ಚುನಾವಣೆಯನ್ನು ಮುಂದೂಡಿದ್ದೇವೆ ಎಂಬ ಮಾತನ್ನು ಹೇಳಿದ್ದಾರೆ. Please place all those records on the Table of the House. Let know what transpired between and the Election Commissioner. Let the House know about what transpired between the Chief Minister and the Commissioner. Please place those records on the Table of the House. ಈ ರೀತಿ ಸದನದ ಹೊರಗಡೆ ಒಂದು ಹೇಳುವುದು, ಸದನದಲ್ಲಿ ಮತ್ತೊಂದು ಹೇಳುವುದು ಏಸಿದೆ ಈ ಪ್ರವೃತ್ತಿ ಸಲ್ಲದು. Take the House into confidence before taking such extreme measures, You are seeking unlimited. unquestioned and sweeping powers. Section Amendment to Section 55 sub-clause (1) reads as under.

> Every election of the Councillors shall be subject to the control and supervision of the Government and it shall be lawful for the Government to issue directions regarding all matters connected with the elections including directions for postponement of the poll.

You cannot make postponement at your sweet will any time you choose, ಪ್ರಕ್ರಿಯೆಗಳೆಲ್ಲ ಮುಗಿದು ಅಭ್ಯರ್ಥಿಗಳು ದುಡ್ಡು ಕಳೆದುಕೊಂಡಿದ್ದಾರೆ. ಖರ್ಚು ಮಾಡಿದ್ದಾರೋ ಜನರ ಮನೆಬಾಗಿಲಿಗೆ ತಿರುಗಿದ್ದಾರೋ, ಆ ಮಾತು ಬೇರೆ. ಎಲ್ಲಾ ಮುಗಿದು ನಿಮಗೆ ಅನುಕೂಲವಾಯಿತು ಅಂದರೆ ಮೂರು ದಿವಸ ಇದ್ದಹಾಗೆ ಚುನಾವಣೆಯನ್ನು ಮುಂದಕ್ಕೆ ಹಾಕಿದಿರಿ. ನೀವು ಸೋಲುತ್ತೀರೆಂದು ಗೊತ್ತಾದರೆ ಸಾಕು ಚುನಾವಣೆಯನ್ನು ಮುಂದಕ್ಕೆ ಹಾಕು ಎಂದು ಹೇಳುತ್ತೀರಿ. Is this the way the democratic institutions should

function under this law? ಚುನಾವಣೆಯನ್ನು ಮುಂದಕ್ಕೆ ಹಾಕಿದರೆ ಕೊನೆಯ ಪಕ್ಷ ಅದಕ್ಕೆ ಕಾರಣವನ್ನಾದರೂ ಹೇಳಿ. ಅದರಲ್ಲಿ ಹೇಳಿರುವುದು ಎರಡು ಕಾರಣಗಳು ಮೂರನೆಯ ಕಾರಣವನ್ನು ಕೊಡಿ. ಚುನಾವಣೆಗಳನ್ನು ಮಾಡಲಿಕ್ಕೆ ಸಾಧ್ಯವಾಗಲಿಲ್ಲ ಆದ್ದರಿಂದ ಮುಂದಕ್ಕೆ ಹಾಕಿದ್ದೇವೆ ಅಂದರೆ ಎಷ್ಟು ದಿವಸ? ಇವತ್ತು ನಾನು ಕೇಳುತ್ತೇನೆ ಚುನಾವಣೆಗಳನ್ನು ನಡೆಸುವುದಕ್ಕೆ ಶಾಸನಬದ್ಧವಾಗಿ 21 ದಿನ ಸಾಕು ಎಷ್ಟು ದಿನ ಚುನಾವಣೆಯನ್ನು ಮುಂದಕ್ಕೆ ಹಾಕಬಹುದು ಒಂದು ವಾರ ಅಥವಾ ಹತ್ತು ದಿವಸ ಮುಂದಕ್ಕೆ ಹಾಕಬಹುದು. ೨೧ ದಿವಸಗಳಿಗಿಂತ ಹೆಚ್ಚು ಮುಂದಕ್ಕೆ ಹಾಕುವುದಾದರೆ ಹೊಸ ಕ್ಯಾಲೆಂಡರ್ ಆಫ್ ಈವೆಂಟ್ಸ್ ಹಾಕಬಹುದು. Why are you hesitating what is going on in this Government Is anybody serious about this? Are you trying to take the people of this State very casually? This is not the way, the Government is expected to function. I would like to know ಇಂತಹ ಸ್ವೀಪಿಂಗ್ ಪವರ್ಸ್ ನೀವು ಕೊಡುವುದಕ್ಕೆ ಮುಂಚೆ ಈ ಶಾಸನಸಭೆಯಲ್ಲಿ ಚುನಾವಣೆಯಲ್ಲಿ ಗೆದ್ದುಬಂದಿರತಕ್ಕ ಸದಸ್ಯರು ಯಾವ ಪಕ್ಷಕ್ಕಾದರೂ ಸೇರಿರಲಿ, ನಾನು ಕಾಂಗ್ರೆಸ್ ಸದಸ್ಯರನ್ನು ಕೇಳುತ್ತೇನೆ, ಅವರು ಎದೆ ಮುಟ್ಟಿಕೊಂಡು ನೋಡಲಿ ಈ ಅಧಿಕಾರವನ್ನು ಏನಾದರೂ ಕೊಟ್ಟರೆ ನಾಳೆ ದಿವಸ ಚುನಾವಣೆಯ ಪರಿಣಾಮ ಏನಾಗಬಹುದು? ಸಂವಿಧಾನವನ್ನು ಪ್ರಶ್ನೆ ಮಾಡುವುದು ಬೇರೆ ಮಾತು ಚುನಾವಣೆ ನಾಳೆ ಬೆಳಿಗ್ಗೆ ಅಂದರೆ ಇವತ್ತು ಸಂಜೆ ಪೋಸ್ಟ್‌ಪೋನ್ ಮಾಡುವುದಕ್ಕೆ ಅಧಿಕಾರ ಕೊಟ್ಟಾಯಿತು ಇದು ಜನತಂತ್ರಕ್ಕೆ ಸಂಪೂರ್ಣ ವಿರುದ್ಧವಾದುದು. ಆದ್ದರಿಂದ ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಿ ಇಂತಹ ಕರಾಳ ಮಸೂದೆಯನ್ನು ತಂದಿರುವುದಕ್ಕೆ ಕ್ಷಮೆ ಕೇಳಿ ಏನೂ ತಪ್ಪಾಗುವುದಿಲ್ಲ ಈ ರಾಜ್ಯದಲ್ಲಿ ಚುನಾವಣೆ ನಡೆಸಿ Not only as leader of the Opposition and also as a democrat, I respect the rights of the people.

SRI M. VEERAPPA MOILY.—Why a new sense of democracy came on the Leader of the Opposition now?

SRI D. B. CHANDRE GOWDA.—I have not by passed democratic institution at any time in my life, whether I belong to a political party or otherwise ನೀವು ಮಾಡಿ ಆದರೆ ಈ ಸ್ವೀಪಿಂಗ್ ಪವರ್ಸ್ ಅನ್ನು ಈ ಶಾಸನದಲ್ಲಿ ಕೊಡುವುದು ಅಸಾಧ್ಯ. ಚುನಾವಣೆಯಲ್ಲಿ ಗೆದ್ದು ಬಂದು ನಾವು ಇಲ್ಲಿ ಕುಳಿತು ಆ ಚುನಾವಣಾ ಪ್ರಕ್ರಿಯೆಯ ಕತ್ತು ಹಿಸುಕತಕ್ಕಂಥ ಕೆಲಸವನ್ನು ನೀವೂ ಮಾಡಬೇಡಿ. ನಾವೂ ಮಾಡುವುದಿಲ್ಲವೆಂದು ಹೇಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಉಪಾಧ್ಯಕ್ಷಿಣಿಯವರಿಗೆ, ಈ ದಿವಸ ಒಂದು ಸಂತೋಷದ ವಿಚಾರವೆಂದರೆ, ಚುನಾವಣೆಗಳ ಬಗ್ಗೆ ಒಂದು ವ್ಯಾಪಕವಾದ ಉತ್ತಮವಾದ ಚರ್ಚೆ ನಡೆದಿದೆ, ಅನು ಅಕಾಡೆಮಿಕ್ ಆಗಿರಬಹುದು ಅಥವಾ ಪ್ರಸ್ತುತ ಮಸೂದೆಯನ್ನು ಏನು ತಂದಿದ್ದೇವೆ ಅದಕ್ಕೆ ಅವರ ದೃಷ್ಟಿಯಲ್ಲಿ ಪ್ರಯೋಜನಕ್ಕೆ ಬರಬಹುದು, ನನ್ನ ದೃಷ್ಟಿಯಲ್ಲಿ I welcome it from the academic point of view. ಏಕೆಂದರೆ, ಮಾನ್ಯ ನಂಜುಂಡಸ್ವಾಮಿಯವರು ಅಥವಾ ತಾವು ಮಾನ್ಯ ಯಡಿಯೂರಪ್ಪನವರು ಭೌತಿಕ ನೆಲೆಯಲ್ಲಿ ಅಥವಾ ಪ್ರಜಾಪ್ರಭುತ್ವದ ಸಿದ್ಧಾಂತದ ನೆಲೆಯಲ್ಲಿ ಏನು ವಾದವನ್ನು ಮಾಡಿದ್ದೀರಿ ಅದನ್ನು ನಾನು ಒಪ್ಪುತ್ತೇನೆ. ಆ ಬಗ್ಗೆ ಎರಡನೆಯ ಮಾತಿಲ್ಲ. ಆದರೆ ಎಷ್ಟರಮಟ್ಟಿಗೆ ಈ ವಾದ ಈಗಿರತಕ್ಕ ಪ್ರಸ್ತುತ ವಿಚಾರಕ್ಕೆ ಅನ್ವಯವಾಗುತ್ತದೆ ಎಂಬ ಪ್ರಶ್ನೆಯನ್ನು ಪರಿಶೀಲನೆ ಮಾಡುವುದು ಒಳ್ಳೆಯದೆನಿಸುತ್ತದೆ. ತಮಗೆ ಗೊತ್ತಿರುವ ಹಾಗೆ, ಮುನಿಸಿಪಲ್ ಕಾರ್ಪೊರೇಷನ್ ಆ್ಯಕ್ಟ್ ಮತ್ತು ಮುನಿಸಿಪಲ್ ಆ್ಯಕ್ಟ್ ಎಂದು ಎರಡು ವಿಧವಾದ ಆ್ಯಕ್ಟುಗಳು ಇವೆ. ಮುನಿಸಿಪಲ್ ಆ್ಯಕ್ಟಿಗೆ ಅನಾಲಜಿಸ್ ಆಗಿ ಅಥವಾ ಅದಕ್ಕೆ ಸಮಾನವಾಗಿ ಈಗ ತಿದ್ದುಪಡಿಯನ್ನು ಏನು ತಂದಿದ್ದೇವೆ ಅದಕ್ಕೆ ಅನುಗುಣವಾಗಿ ಕರ್ನಾಟಕ ಮುನಿಸಿಪಲ್ ಆ್ಯಕ್ಟ್‌ನಲ್ಲಿ ಸೆಕ್ಷನ್ ೩೮ರಲ್ಲಿ ಕಂಟ್ರೋಲ್ ಆಫ್ ಎಲೆಕ್ಷನ್ಸ್ ಎಂದು ಇದೆ ಅದನ್ನು ನಾನು ಒಮ್ಮೆ ಓದಿ ಹೇಳುತ್ತೇನೆ. ಇದು ಕರಾಳವಾದರೆ ಅದು ಅತ್ಯಂತ ಉಗ್ರ ಕರಾಳವಾಗುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಅದನ್ನೂ ತೆಗೆದು ಹಾಕಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಅದನ್ನು ನಾನು ಒಪ್ಪುತ್ತೇನೆ. ಇದು ಪ್ರಾಮಾಣಿಕವಾದ ವಿಚಾರ. ಆಕಾಶದ ದಿಗಂತದಲ್ಲಿ ಎಲ್ಲೋ ಒಂದು ಹೊಸದಾಗಿ ಪ್ರಜಾಪ್ರಭುತ್ವದ ಹೊಸ ಕಿರಣ ಆ ಕಡೆಯಿಂದ ಇವತ್ತು ಒಡಮೂಡಿ ಬಂದಿದೆಯೆಂದರೆ ಅದನ್ನು ನಾನು ಒಪ್ಪುತ್ತೇನೆ. According to Section 38 of the Municipal Act, "every election of Councillors shall be subject to the control and supervision of the Government and it shall be lawful for the Government to issue directions regarding all matters connected with the elections including directions for cancellation of the calender of events, for postponement of the pool." ಈಗ ಸದನದ ಮುಂದೆ ಅಮೆಂಡ್‌ಮೆಂಟ್ ಏನಿದೆ ಅದನ್ನು ಓದಿ ಹೇಳುತ್ತೇನೆ.

I will now read from the present amendment of Section 55

> Every election of Councillors shall be subject to the control and supervision of the Government and it shall be lawful for the Government to issue directions regarding all matters connected with the elections including directions for postponement of the Poll."

ಒರಿಜಿನಲ್ ಪ್ರಾವಿಷನ್‌ನಿಂದ ಒಂದು ಶಬ್ದ ನಾವು ತೆಗೆದಿದ್ದೇವೆ. ಮುನಿಸಿಪಲ್ ಆಕ್ಟ್‌ನಲ್ಲಿ ಏನಿ ಕ್ಯಾನ್ಸಲೇಷನ್ ಎಂದು ಹೇಳಿದ್ದರು ಇದು ಕರಾಳ ಆದರೆ ಇದು ಉಗ್ರವಾದ ಕರಾಳ ಕ್ಯಾನ್ಸಲೇಷನ್ ಎಂಬ ಶಬ್ದ ಏನು ಇದೆ ಅದು ರದ್ದು ಮಾಡುವಂಥಾದ್ದು. ಆ ರದ್ದು ಮಾಡುವಂಥ ಶಬ್ದವನ್ನು ಈಗ ನಮೂದಿಸಿದಂಥ ತಿದ್ದುಪಡಿಯಿಂದ ನಾವು ತೆಗೆದಿದ್ದೇವೆ. ಪೋಸ್ಟ್‌ಪೋನ್‌ಮೆಂಟ್ ಮಾತ್ರ ಮಾಡಿದ್ದೇವೆ. ಕ್ಯಾಲೆಂಡರ್ ಆಫ್ ಇವೆಂಟ್ಸ್‌ನಲ್ಲಿ ಎಲ್ಲಿಯವರೆಗೆ ಕಾರ್ಯಾಚರಣೆ ಮಾಡತಕ್ಕ ಹಂತದವರೆಗೆ ಬಂದಿದೆ ಅಲ್ಲಿಂದ ಮುಂದೆ ಮಾತ್ರ ಅಮಾನತ್ತಾಗುತ್ತದೆಯೇ ಹೊರತು ಅದಕ್ಕಿಂತ ಹಿಂದೆ ಚುನಾವಣಾ ಪ್ರಕ್ರಿಯೆ ಏನು ನಡೆದಿದೆ ಅದು ಅಮಾನತ್ತಾಗುವುದಿಲ್ಲ. ಆದ್ದರಿಂದ ನೀವು ಬ್ಲಾಂಕೆಟ್ ಪವರ್ ಅಥವಾ ವೈಸ್ ಪವರ್ ಕರಾಳವಾಗಿ ತೆಗೆದುಕೊಂಡಿದ್ದೀರಿ ಎಂದರೆ, ದೇಶಪಾಂಡೆಯವರೆ, ಈ ಕರಾಳ ಶಾಸನದ ಹಿನ್ನೆಲೆಯಲ್ಲಿ ನೀವು ಚುನಾವಣೆ ಮಾಡಿದ್ದೀರಲ್ಲ ಆಗ ತಮ್ಮ ಜ್ಞಾನಜ್ಯೋತಿ ಎಲ್ಲಿ ಅಡಗಿತ್ತು ? ಭಸ್ಮೀಭೂತವಾಗಿತ್ತಾ ?

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಆಯಾ ಸಮಯಕ್ಕೆ ಸರಿಯಾಗಿ ನಮ್ಮಂಥ ರಾಜಕಾರಣಿಗಳೆ ಆಷಾಢಭೂತಿತನ ಬೆಳೆಸಿಕೊಳ್ಳುವುದನ್ನು ನಾವು ಜಾಸ್ತಿ ಮಾಡಿಕೊಳ್ಳುತ್ತಿದ್ದೇವೆ. ಆ ಪ್ರಮಾಣ ಜಾಸ್ತಿಯಾಗಿದೆ. ಇದಕ್ಕೆ ಡಾಕ್ಟರ್ ನಂಜುಂಡಸ್ವಾಮಿಯವರು ಪಾರ್ಟಿಯಲ್ಲ. ನನ್ನನ್ನೂ ಸೇರಿಸಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಕಾನೂನನ್ನು ಯಾವ ಸಂದರ್ಭದಲ್ಲೂ ಚಲಾಯಿಸಿಲ್ಲ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮಗೆ ನಿಜವಾಗಿ ಪ್ರಜಾಪ್ರಭುತ್ವದ ಈ ಸಿದ್ಧಾಂತಗಳಲ್ಲಿ ನಂಬಿಕೆ ಇದ್ದಿದ್ದರೆ, ಈ ಶಾಸನದ ಪ್ರಕ್ರಿಯೆ ಅದರಲ್ಲಿರುವಾಗ ತಾವು ಆರು ವರ್ಷಗಳ ಕಾಲ ಸರ್ಕಾರ ನಡೆಸಿದ್ದೀರಿ, ಇದನ್ನು ಬದಲಾವಣೆ ಮಾಡಲಿಲ್ಲ. ಇದರ ಎಲ್ಲ ಲಾಭವನ್ನು ಅನುಭವವನ್ನು ತಾವು ಪಡೆದಿದ್ದೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.—ಎಲ್ಲಿ ?

ಶ್ರೀ ವಾಟಾಳ್ ನಾಗರಾಜ್.—ಎಲ್ಲಿ ಪಡೆದಿದ್ದಾರೆ ನೀವು ತೋರಿಸಿ.

(ಗೊಂದಲ)

ಶ್ರೀ ಆರ್. ವಿ, ದೇಶಪಾಂಡೆ.—ನಾವು ಕಾರ್ಪೊರೇಷನ್ ಚುನಾವಣೆ ನಡೆಸಿದ್ದೇವೆ. ಮುನಿಸಿಪಾಲಿಟಿ ಚುನಾವಣೆ ನಡೆಸಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೇಗೆ ಚುನಾವಣೆ ಮಾಡಿದ್ದೀರಿ, ಏತಕ್ಕೆ ಮಾಡಿದ್ದೀರಿ ಎನ್ನುವ ವಿಷಯಕ್ಕೂ ಬರುತ್ತೇನೆ. ಇದರಲ್ಲಿ ಪ್ರಶ್ನೆ ಏನೆಂದರೆ ಈ ಶಾಸನ ಹಿಂದೆಯೂ ಇತ್ತು. ನೀವು ಅಧಿಕಾರ ನಡೆಸುವಾಗಲೂ ಇತ್ತು.

ಶ್ರೀ ಆರ್. ಎಲ್. ಜಾಲಪ್ಪ.—ಯಾರ ಕಾಲದಲ್ಲಿ ಆಗಿದ್ದು ?

ಶ್ರೀ ಎಂ. ವೀರಪ್ಪಮೊಯಿಲಿ.—೧೯೭೮ರಲ್ಲಿ ಆಗಿದ್ದು ಕಾಂಗ್ರೆಸ್‌ನಲ್ಲಿ ಸನ್ಮಾನ್ಯ ಜಾಲಪ್ಪನವರಿದ್ದಾಗಲೇ, ಸನ್ಮಾನ್ಯ ದೇಶಪಾಂಡೆಯವರಿದ್ದಾಗಲೇ, ಸನ್ಮಾನ್ಯ ಚಂದ್ರೇಗೌಡರಿದ್ದಾಗಲೇ ಆಗಿದ್ದು.

ಶ್ರೀ ವಾಟಾಳ್ ನಾಗರಾಜ್.—ಇದು ತೋಳ ಕುರಿಮರಿ ಕಥೆ ಆಗುವುದು ಬೇಡ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡಲಿ, ಆಮೇಲೆ ನೀವು ಬೇಕಾದರೆ ಮಾತನಾಡಿ

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಪಾಲಿಟಿಕ್ಸ್ ಮಾಡಲಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ವಿರೋಧಪಕ್ಷದ ನಾಯಕರು ಅಥವಾ ಸದಸ್ಯರು ಮಾತನಾಡುವಾಗ ನಾನು ಮಾತನಾಡಲಿಲ್ಲ. ಹಾಗೆಯೇ ಅವರೂ ಕೂಡ ನಾನು ಮಾತನಾಡುವಾಗ ಮಾತನಾಡಬಾರದು. ಸನ್ಮಾನ್ಯ ಯಡಿಯೂರಪ್ಪನವರಾಗಲೀ ಅಥವಾ ಸನ್ಮಾನ್ಯ ನಂಜುಂಡಸ್ವಾಮಿಯವರಾಗಲೀ ಮಾತನಾಡಿದರೆ, ಈ ಆಕ್ಷೇಪಣೆಯನ್ನು ಎತ್ತಿದ್ದರೆ ಸ್ವಲ್ಪ ಒಪ್ಪಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಪ್ರತಿ ದಿವಸ ಇದನ್ನು ಹೇಳುವ ಬದಲು ಒಂದೇ ಸಾರಿ ಹೇಳಿಬಿಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ನನ್ನ ತಾತ್ಪರ್ಯ ಇಷ್ಟೆ. ತಮ್ಮನ್ನು ಆಕ್ಷೇಪಣೆ ಮಾಡಬೇಕೆಂದು ಅಲ್ಲ. ಇಂಥ ಆಷಾಡಭೂತಿತನ, ಹಿಪೋಕ್ರಸಿ ಬೇಡ ಎಂದು ಹೇಳಿದೆ. ನನ್ನನ್ನೂ ಸೇರಿಸಿ ಹೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.—ತಾವು ಬೇಕಾದರೆ ಆಷಾಡಭೂತಿ ಅಂದುಕೊಳ್ಳಿ, ಆಷಾಡಭೂತಿ ಎಂದು ನಮ್ಮನ್ನು ಅನ್ನಬೇಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಹೇಳುವುದಿಷ್ಟೆ ನಾನು ತಮ್ಮ ಗಮನಕ್ಕೆ ತಂದೆ. ಒಂದು ನಿಮಿಷ ಕೇಳಿ...

ಶ್ರೀ ಆರ್.ಎಲ್. ಜಾಲಪ್ಪ.—ಕಾಂಗ್ರೆಸ್‌ನಲ್ಲಿ ಆಗ ನಾವು ಇದ್ದೆವು. ಆಗ ನಾವು ನಾಲ್ಕಾಣೆ ಮೆಂಬರೂ, ಎಂಟಾಣೆ ಮೆಂಬರೂ ಆಗಿದ್ದೆವು. ಆಗ ನಮ್ಮನ್ನೆಲ್ಲಾ ಕೇಳಿ ಈ ರೀತಿ ಕಾನೂನು ತರುತ್ತಿದ್ದರೇ? ಹೌಸ್‌ನಲ್ಲಿ ಕೇಳಿ ತರುತ್ತಿದ್ದರು. ಆದಾಗ್ಯೂ ಕಾಂಗ್ರೆಸ್‌ನಲ್ಲಿ ಇದ್ದಿರಿ, ನಾಲ್ಕಾಣೆ ಮೆಂಬರ್ ಆಗಿದ್ದಿರಿ ಎಂದರೆ ಇದು ಎಷ್ಟರಮಟ್ಟಿಗೆ ಲಾಜಿಕ್?

ಶ್ರೀ ಎಂ. ವೀರಪ್ಪ ಮೊಯ್ಲಿ.—ಇದು ಲಾಜಿಕ್ ಪ್ರಶ್ನೆ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಆಗ ನಾನು ಲೋಕಸಭೆಯಲ್ಲಿ ಇದ್ದೆ.

AN HON'BLE MEMBER.—The Chief Minister was in the Janata party.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷಿಣಿಯವರೇ, ಈಗ ಇಲ್ಲಿ ಯಾರು ಮಾತನಾಡಬೇಕು?

ಉಪಾಧ್ಯಕ್ಷಿಣಿಯವರು.— ನೀವು ಈಲ್ಡ್ ಆಗಬಾರದು.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ಕಡೆಯ ನಮ್ಮ ಗೆಳೆಯರು ಮಾತನಾಡಲು ಎದ್ದರೆ ನಾನು ಈಲ್ಡ್ ಆಗಬೇಕಾಗುತ್ತದೆ. ಇದು ಕಾನೂನು ೧೯೭೮ರಲ್ಲಿ ಆಯಿತು. ಈ ಕಾನೂನು ಯಾವಾಗ ಮಾಡಿದರು ಎಂದು ಪ್ರಶ್ನೆ ಕೇಳಿದರು ೧೯೭೮ರಲ್ಲಿ ಮಾಡಿದ್ದು ಎಂದು ಹೇಳಿದೆ. ೧೯೭೮ರಲ್ಲಿ ಯಾರಿದ್ದರು ಎಂದು ಕೇಳಿದ್ದಕ್ಕೆ ನೀವೆಲ್ಲಾ ಇದ್ದಿರಿ ಎಂದು ಹೇಳಿದೆ. ಇದರಲ್ಲಿ ಏನು ತಪ್ಪಾಗಿದೆ. ಈ ಕಾನೂನು ೧೯೭೮ರಲ್ಲಿ ಮಾಡುವಾಗ ನೀವು ಕಾಂಗ್ರೆಸ್ಸಿನಲ್ಲೇ ಇದ್ದಿರಿ ಎಂದು ನಾನು ಹೇಳಿದೆ. ೧೯೭೮ರಲ್ಲಿ ಕಾನೂನು ಮಾಡುವಾಗ ತಾವು ಸಕ್ರಿಯವಾಗಿ ಆ ಸರ್ಕಾರದಲ್ಲಿ ಇದ್ದಿರಿ; ಈ ಕಾನೂನನ್ನು ಮಾಡಿದಿರಿ ಎಂದ ನಾನು ಹೇಳಿದೆ. ಏನು ತಪ್ಪಿದೆ. ಮಾನ್ಯ ನಂಜುಂಡಸ್ವಾಮಿಯವರು ಬೇಕಾದರೆ ಇದಕ್ಕೆ ಸಾಕ್ಷಿ ಹೇಳಲಿ. ಮತ್ತೆ, ಮಾನ್ಯ ಸದಸ್ಯರು ಈ ಪ್ರೊವಿಜನ್ ಕಾನೂನು ಬಾಹಿರ ಆಗಿದೆ ಎಂದು ಹೇಳಿದ್ದಾರೆ. ಈ ವಿಚಾರ ಆಗ ಹೈಕೋರ್ಟಿಗೂ ಸಹಾ ಹೋಗಿದೆ. ಮುನಿಸಿಪಲ್ ಆಕ್ಟ್‌ನಲ್ಲಿ ಪೋಸ್ಟ್‌ಪೋನ್‌ಮೆಂಟ್ ಮಾಡುವುದಕ್ಕೆ ಅಥವಾ ಕ್ಯಾನ್ಸಲೇಷನ್ ಮಾಡುವುದಕ್ಕೆ ಮಸೂದೆಯ ಮುಖೇನ ಸರ್ಕಾರ ಯಾವ ಅಧಿಕಾರ ತೆಗೆದುಕೊಂಡಿತ್ತೋ ಈ ವಿಚಾರ ಕರ್ನಾಟಕದ

ಉಚ್ಚ ನ್ಯಾಯಾಲಯಕ್ಕೂ ಕೂಡಾ ಹೋಗಿದೆ. ಅದು ಕಾನೂನು ಬಾಹಿರ ಆಗಿದ್ದು ಆ ಬಗ್ಗೆ ಪರಿಶೀಲನೆ ಮಾಡಿಲ್ಲ. ಏನೂ ವಿಚಾರ ಮಾಡಿಲ್ಲ ಎಂಬ ವಿಚಾರ ಬಂದಿದ್ದರಿಂದ ನಾನು ಹೇಳಿದೆ. ನಾವು ಎಲ್ಲವನ್ನೂ ಪರಿಶೀಲನೆ ಮಾಡಿ ನೋಡಿದ್ದೇವೆ. ಈ ವಿಚಾರದಲ್ಲಿ ಚೀಫ್ ಜಸ್ಟೀಸ್ ಚಂದ್ರಶೇಖರ್ ಹಾಗೂ ನ್ಯಾಯಮೂರ್ತಿ ಪುಟ್ಟಸ್ವಾಮಿಯವರ ಡಿವಿಜನ್ ಬೆಂಚ್‌ನಲ್ಲಿ ೧೯೭೮ ರಲ್ಲಿ ಇತ್ಯರ್ಥವಾಗಿದೆ. ಆ ಪ್ರಕಾರ ಸೆಕ್ಷನ್ ೩೮ ಪೇಜ್ ೪೩ರಲ್ಲಿ, short notes 43, Division Bench:

> "Section 38 of the Act is not invalid as conferring uncontrolled and unguided power to the Government to interfere with the Election."

ಇದು ಕಾನೂನಿಗೆ ಸರಿಯಾಗಿದೆ, ಅನ್ ಕಂಟ್ರೋಲ್ಡ್ ಅಂಡ್ ಅನ್‌ಗೈಡೆಡ್ ಪವರ್ ಸರ್ಕಾರ ತೆಗೆದುಕೊಂಡಹಾಗೆ ಆಗುವುದಿಲ್ಲ ಎಂಬ ಒಂದು ತೀರ್ಪನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚ್ ಕೊಟ್ಟಿದೆ. ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ಈ ಮುನಿಸಿಪಲ್ ಆಕ್ಟನ್ನು ಅವರು ವಿಶ್ಲೇಷಣೆ ಮಾಡಿ, ಇದನ್ನು ಸ್ವಲ್ಪ ಅಭ್ಯಾಸ ಮಾಡಿ ಹೇಳಿದ್ದರೆ ನಾನು ಇದನ್ನೆಲ್ಲಿ ಹೇಳುತ್ತಿರಲಿಲ್ಲ. ತಾವು ಒಂದು ಮುಖವನ್ನು ಮಾತ್ರ ನೋಡುತ್ತೀರಿ. ಮುನಿಸಿಪಲ್ ಆಕ್ಟ್ ಅಭ್ಯಾಸ ಮಾಡಿ ಬಂದು ಸರ್ಕಾರ ಅಕ್ರಮ ಕೆಲಸ ಮಾಡಿದೆ ಎಂದು ಹೇಳಿದರೆ ನಾನು ಈಗಲೇ ಇದನ್ನು ವಿತ್‌ಡ್ರಾ ಮಾಡುತ್ತೇನೆ. ಇದರಲ್ಲಿ ನಮಗೆ ಪ್ರತಿಷ್ಠೆ ಏನೂ ಇಲ್ಲ. ಏಕೆಂದರೆ ಪೋಸ್ಟ್‌ಪೋನ್‌ಮೆಂಟ್ ಮಾಡತಕ್ಕ ಹಕ್ಕು ನಮಗೆ ಸಿಕ್ಕಿದೆ. ಈ ಕಾನೂನಿನಲ್ಲಿ ಅದು ಯಾವಾಗಲೂ ಇರಬೇಕಾದ ಪರಿಸ್ಥಿತಿ ಇದೆಯೋ ಇಲ್ಲವೇ ಎನ್ನುವ ಪ್ರಶ್ನೆ ಈಗ ಇದೆ. ಪೋಸ್ಟ್‌ಪೋನ್ ಮಾಡತಕ್ಕಂಥ ಅಧಿಕಾರ ಚಲಾಯಿಸಿದ್ದೇವೆ. we could have allowed it to lapse. ನಮಗೆ ಗೊತ್ತಿದೆ. ಆರ್ಡಿನೆನ್ಸ್‌ನ ಉದ್ದೇಶ ಸಫಲ ಆದ ಕೂಡಲೆ ವಿಧಾನಸಭೆಗೆ ಇದನ್ನು ತಂದು ಇಷ್ಟು ದೀರ್ಘವಾದ ಚರ್ಚೆಗೆ ಎಕ್ಸ್‌ಪೋಸ್ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. Government has been misunderstood on this Ordinance ಎಂದು ಗೊತ್ತಿದೆ. ಇದರ ಬಗ್ಗೆ ಹೊರಗಡೆ ಬೇಕಾದಷ್ಟು ಚರ್ಚೆ ಆಗಿದೆ. ಸರ್ಕಾರ ಈ ಚರ್ಚೆಗೆ ಹೆದರಿ ಆರ್ಡಿನೆನ್ಸ್ ಲ್ಯಾಪ್ಸ್ ಮಾಡುವ ಕಾರ್ಯಕ್ರಮ ಕೈಗೊಳ್ಳಬಹುದಿತ್ತು. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದಂಥ ಕಾರ್ಯಕ್ರಮ ಅಲ್ಲ. ಆದರೂ ಇವತ್ತು ಇದನ್ನು ಏತಕ್ಕೆ ತಂದಿದ್ದೇವೆಂದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಇಂತಹ ಒಂದು ಕಾನೂನಿನ ಪ್ರಕ್ರಿಯೆ ಹೇಗೆ ಮುನಿಸಿಪಲ್ ಆಕ್ಟ್‌ನಲ್ಲಿ ಇದೆ ಆವೊಂದು ಪ್ರೊವಿಜನ್ ಕಾರ್ಪೊರೇಷನ್ ಆಕ್ಟ್‌ನಲ್ಲಿ ಮತ್ತು ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಇರಬೇಕಾದಂಥ ಅವಶ್ಯಕತೆ ಸಾರ್ವಜನಿಕ ಹಿತದೃಷ್ಟಿಯಿಂದ ಇದೆ ಎಂಬ ಪರಿಜ್ಞಾನ ಮತ್ತು ಅಭಿಪ್ರಾಯದಿಂದ ಇವತ್ತು ಈ ಮಸೂದೆಯನ್ನು ಮಂಜೂರು ಮಾಡಿ ಕಾನೂನಿನ ಚೌಕಟ್ಟಿನಲ್ಲಿ ಸೇರಿಸಬೇಕೆನ್ನುವ ಒಂದು ಸದುದ್ದೇಶದಿಂದ ತಂದಿದ್ದೇವೆಯೇ ಹೊರತು ಏನೋ ಅಧಿಕಾರ ತೆಗೆದುಕೊಂಡು ಯಾವುದೋ ರೀತಿಯಲ್ಲಿ ಇದನ್ನು ಪ್ರಯೋಗ ಮಾಡಬೇಕೆಂಬ ದುರುದ್ದೇಶ ಬಹುಶಃ ಇವರಲ್ಲಿ ಇಲ್ಲವೇ ಇಲ್ಲ. ಇನ್ನೊಂದು ವಿಚಾರವನ್ನು ತಮಗೆ ಹೇಳಬೇಕಾದರೆ, ಚುನಾವಣೆಯನ್ನು ನೀವು ಏತಕ್ಕೆ ಮುಂದುವರಿಸಬೇಕಾದ ಪ್ರಸಂಗ ಬಂತು ಎನ್ನುವುದನ್ನು ಮಾನ್ಯ ವಿರೋಧಪಕ್ಷದ ನಾಯಕರು ವಿಶ್ಲೇಷಣೆ ಮಾಡಿ ಹೇಳಿದರು. ಮಾನ್ಯ ಸದಸ್ಯರಾದ ದೇಶಪಾಂಡೆಯವರು ಸಹ ಹೇಳಿದರು. ನೀವು ಅಧಿಕಾರವಿಲ್ಲದೆ ನಿರ್ಣಯ ಮಾಡಿದ್ದೀರಿ ಎಂದು ಹೇಳಿದ್ದಾರೆ. ಯಾವ ಅಧಿಕಾರ ನಮಗೆ ಕಾರ್ಪೊರೇಷನ್ ಆಕ್ಟ್‌ನಲ್ಲಿತ್ತು ಅಥವಾ ನಿಯಮಗಳಲ್ಲಿ ನಮಗೆ ಇತ್ತು ಅಥವಾ ಕಾನೂನಿನಲ್ಲಿ ಇತ್ತು ಎನ್ನುವುದನ್ನು ಸ್ವಲ್ಪ ಈ ಸಭೆಯ ಗಮನಕ್ಕೆ ತರುವುದು ಒಳ್ಳೆಯದೆಂದು ನನಗನಿಸುತ್ತದೆ. ಕಾರ್ಪೊರೇಷನ್ ಆಕ್ಟ್‌ನ ರೂಲ್ ೨೬ಎ ಅನ್ನು ತಾವು ವಿಶ್ಲೇಷಣೆ ಮಾಡುತ್ತಾ ಹೇಳಿದಿರಿ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ರೂಲ್ ೨೬ ರಲ್ಲಿ ಏನಿದೆ ಎಂಬುದನ್ನು ನಾನು ಹೇಳುತ್ತೇನೆ, ರೂಲ್ ೨೬ರಲ್ಲಿ ಅಧಿಕಾರ ಇದ್ದಿದ್ದರೆ ಹೊಸದಾಗಿ ತರುವ ಅಗತ್ಯವಿರಲಿಲ್ಲ. ಪೋಸ್ಟ್‌ಪೋನ್ ಮಾಡತಕ್ಕ ಅಧಿಕಾರ ಇರಬೇಕು ಎಂದು ಒಪ್ಪಿದ ಹಾಗೆ ಆಯಿತು. ವಿರೋಧಪಕ್ಷದವರು ಹೇಳಿದ ಪ್ರಕಾರ ನಿಯಮ ೨೬ರಲ್ಲಿ ಅಧಿಕಾರ ಇರುವಾಗ ಆರ್ಡಿನೆನ್ಸ್ ಏತಕ್ಕೆ? ಹಾಗಾದರೆ ನಿಯಮ ೨೬ರಲ್ಲಿ ಚುನಾವಣೆಯನ್ನು ಪೋಸ್ಟ್‌ಪೋನ್ ಮಾಡಲಿಕ್ಕೆ ಅಧಿಕಾರ ಇದ್ದಿದ್ದರೆ ತಮ್ಮದೇನೂ ಆಕ್ಷೇಪಣೆ ಇರಲಿಲ್ಲ, ಅಥವಾ ನಾವು ಉಪಯೋಗ ಮಾಡುತ್ತಾ ಇದ್ದಿದ್ದರೆ ತಮ್ಮ ಆಕ್ಷೇಪಣೆ ಇರಲಿಲ್ಲ. ಆರ್ಡಿನೆನ್ಸ್ ಹೊರಡಿಸಿರುವುದಕ್ಕೆ ತಮ್ಮದು ಆಕ್ಷೇಪಣೆ ಇದೆ. ತಮ್ಮ ಆರ್ಗ್ಯುಮೆಂಟ್‌ನಲ್ಲಿ ತಾತ್ಪರ್ಯ ಇಷ್ಟೇ ಇರುವುದು.

ಶ್ರೀ ಆರ್. ವಿ. ದೇಶಪಾಂಡೆ.—ರೂಲ್ ೨೬ರಲ್ಲಿ ಬ್ಲಾಂಕೆಟ್ ಪವರ್ ತೆಗೆದುಕೊಳ್ಳುತ್ತಾ ಇದ್ದೀರಿ

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಮಾತನಾಡಿದ ಧಾಟಿಯನ್ನು ನಾನು ಅರ್ಥ ಮಾಡಿಕೊಂಡಿದ್ದು ಸರಿಯಿಂದ್ದರೆ, ತಮಗೆ ರೂಲ್ ೨೬ರ ಸೆಕ್ಷನ್ ೫೫ರ ಪ್ರಕಾರ ಅಧಿಕಾರ ಇದೆ, ಆದ್ದರಿಂದ ತಾವು ಹೊಸದಾಗಿ ಕಾನೂನಿಗೆ ತಿದ್ದುಪಡಿ ಮಾಡತಕ್ಕ ಅವಶ್ಯಕತೆ ಏನಿದೆ ಎನ್ನುವುದು ನಿಮ್ಮ ವಾದ. ರೂಲ್ ೨೬ರಲ್ಲಿ ಏನು ಅಧಿಕಾರ ಕೊಟ್ಟಿದೆ? ಚುನಾವಣೆಯನ್ನು ಮುಂದೂಡಲಿಕ್ಕೆ ಅಥವಾ ಚುನಾವಣೆಯನ್ನು ರದ್ದು ಮಾಡಲಿಕ್ಕೆ ಅಧಿಕಾರ ಇದರಲ್ಲಿದೆಯೆ ಎಂದು ತಾವು ದಯಮಾಡಿ ನೋಡಿ. ಏಕೆಂದರೆ, ಏನು ಅಧಿಕಾರ ಕೊಟ್ಟಿದೆ, ಅದನ್ನು ಕೊಟ್ಟಿದೆ, ಏನು ಅಧಿಕಾರ ಇಲ್ಲ ಅದು ಇಲ್ಲ. ಈ ಶಾಸಕಾಂಗದ ಉದ್ದೇಶ ಏನಿದೆ ಅದನ್ನು ಇವತ್ತು ಅರ್ಥೈಸಬೇಕಾದ ಅವಶ್ಯಕತೆ ಇದೆ; ಅರ್ಥೈಸಿ ಅದನ್ನು ಅನುಷ್ಠಾನ ಮಾಡಬೇಕೇ ಹೊರತು ಒಂದು ವೇಳೆ ನಿಯಮ ೨೬ರ ಪ್ರಕಾರ ನಾವು ಅಧಿಕಾರ ಚಲಾಯಿಸಿ ಚುನಾವಣೆ ಪೋಸ್ಟ್‌ಪೋನ್ ಮಾಡುತ್ತಾ ಇದ್ದರೆ ಇವತ್ತು ಅದು ಅಕ್ರಮವಾಗುತ್ತಿತ್ತು. ಆಗ ಏನು ಆಗುತ್ತಿತ್ತು ಅಂದರೆ ಮುನಿಸಿಪಲ್ ಆಕ್ಟ್‌ನಲ್ಲಿ ಸಬ್‌ಸ್ಟ್ಯಾನ್‌ಟೀವ್ ಆಕ್ಟ್‌ನಲ್ಲಿ ಸ್ಪೆಸಿಫಿಕ್ ಪ್ರೊವಿಜನ್‌ನನ್ನು ಚುನಾವಣೆಯನ್ನು ಪೋಸ್ಟ್‌ಪೋನ್ ಮಾಡಲಿಕ್ಕೆ ಅಥವಾ ಕ್ಯಾನ್ಸ್‌ಲೇಷನ್‌ಮಾಡಲಿಕ್ಕೆ ತೆಗೆದು ಕೊಂಡಿರುವಾಗ, ಅಂತಹ ಅನಾಲಜೈಸ್ ಪ್ರೊವಿಜನ್ ಕಾರ್ಪೊರೇಷನ್ ಆಕ್ಟ್‌ನಲ್ಲಿ, ಜಿಲ್ಲಾಪರಿಷತ್ ಆಕ್ಟ್‌ನಲ್ಲಿ ಇಲ್ಲದೆ ಇರುವಾಗ ಅಧಿಕಾರವನ್ನು ನೀವು ಹೇಗೆ ಚಲಾಯಿಸಿದ್ದೀರಿ ಎಂದು ನಾಳೆ ಹೈಕೋರ್ಟ್‌ನಲ್ಲಿ ಚಾಲೆಂಜ್ ಆಗುತ್ತಿತ್ತು. ನಿಮಗೆ ಇಲ್ಲದೆ ಇರತಕ್ಕ ಅಧಿಕಾರವನ್ನು ನೀವು ಚಲಾಯಿಸುತ್ತಿದ್ದೀರಿ ಎಂದು ಕೆಂಪು ಕಟ್ಟಡದ ಟೀಕೆಗೆ ಒಳಗಾಗಬೇಕಾಗಿತ್ತು. ರೂಲ್ ೨೬ರ ಪ್ರಕಾರ ನೀವು ಅಧಿಕಾರ ಚಲಾಯಿಸಬೇಕಾಗಿತ್ತು ಎಂದು ನೀವು ಹೇಳುತ್ತೀರಿ. ರೂಲ್ ೨೬ ಈ ರೀತಿ ಇದೆ:

"If at an election...."

You can mark the words 'at an election'.

> "If at an election the proceedings at any polling station are interrupted or obstructed by any riot or open violence or if at an election it is not possible to take the poll at any polling station on account of any natural calamity or any other sufficient cause, the presiding officer for such polling station or the returning officer shall announce adjournment of the poll to a date to be notified later and as the poll is adjourned by a presiding officer, he shall forthwith inform the returning officer."

೩.೦೦ ಪಿ.ಎಂ.

ಇದರ ಅರ್ಥ ಏನೆಂದರೆ, ಎಲ್ಲಿಯಾದರೂ ಪೋಲಿಂಗ್ ಸ್ಟೇಷನ್‌ನಲ್ಲಿ rioting ಆದರೆ ಅಥವಾ polling obstruct ಆದರೆ ಈ ರೂಲ್ ೨೬ರಲ್ಲಿ ಅಧಿಕಾರ ಬರುತ್ತದೆ. ಈಗ ಪೋಲಿಂಗ್ ಸ್ಟೇಷನ್‌ನ ಪ್ರಶ್ನೆ ಬರುವುದಿಲ್ಲ. ಅದರಲ್ಲಿ "At an election." ಎಂದು ಇದೆ. ಕ್ಯಾಲೆಂಡರ್ ಆಫ್ ಇವೆಂಟ್ಸ್‌ನ್ನು ಇಶ್ಯು ಮಾಡಿದ್ದೇವೆ. It is not confined to a Polling Station or a group of Polling Station but any Polling Station.

ಶ್ರೀ ಆರ್.ವಿ. ದೇಶಪಾಂಡೆ.—ಮುಂದಕ್ಕೆ ಓದಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಓದಿದ್ದೇನೆ ತಾವು ದಯಮಾಡಿ ಅದನ್ನು ಸರಿಯಾಗಿ ಓದಿ. ನಾವು ಕಾನೂನು ತಜ್ಞರ ಅಭಿಪ್ರಾಯವನ್ನು ತರಿಸಿಕೊಂಡಿದ್ದೇವೆ. Even for a Layman's reading, it is clear that you cannot exercise. Why it is provided in the Municipal Act, which provides for a postponement of the election or cancellation of the election. ರೂಲ್‌ನಲ್ಲಿ "any polling station." ಎಂದು ಇದೆ. ಇಲ್ಲಿ ಪೋಲಿಂಗ್ ಸ್ಟೇಷನ್‌ನಲ್ಲಿ ಎಲೆಕ್ಷನ್ ಇಂಟರಪ್ಟ್ ಆಗಿದ್ದರೆ ಅಥವಾ ಒಂದು ಅಥವಾ ಹಲವಾರು ಪೋಲಿಂಗ್ ಸ್ಟೇಷನ್‌ಗಳಲ್ಲಿ ಅಬ್‌ಸ್ಟ್ರಕ್ಷನ್ ಆಗಿದೆ ಎಂದರೆ This is not the case here. ಇಲ್ಲಿ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಇದನ್ನು ನಾವು ಉಪಯೋಗ ಮಾಡುತ್ತಾ ಇದ್ದಿದ್ದರೆ ಅವರು ಏನು ತಿಳಿದುಕೊಳ್ಳುತ್ತಿದ್ದರು ಅಂದರೆ ಇಲ್ಲಿ ಕಾನೂನು ಜ್ಞಾನದ ಸಂಪೂರ್ಣ ಕೊರತೆವುಳ್ಳಂಥ ಒಂದು ಸರ್ಕಾರ ಇದೆಯೆಂದು ಹೈಕೋರ್ಟಿನಲ್ಲಿ ನಮ್ಮ ಹಣೆಗೆ ಸರ್ಟಿಫಿಕೇಟ್ ಹಾಕುತ್ತಿದ್ದರು. ಇದಕ್ಕೆ ಅವಕಾಶ ಕೊಡುವಂಥ ಒಂದು ಮೂರ್ಖತನ ಬಹುಶಃ ನಾವು ಮಾಡ

ಬಾರದೆಂದು ರೂಲ್ ೨೬ನ್ನು invoke ಮಾಡಿದ್ದೇವೆ. There is no such disturbance. Where is the case of disturbance in the Polling Station, Of course, ಸರ್ಕಾರಿ ನೌಕರರ ಮುಷ್ಕರ ಆಯಿತು. ಅದು ಯಾವ ಹಿನ್ನಲೆಯಲ್ಲಿ ನಡೆಯಿತು ಎಂಬುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಕೆಲವು ಘಟನೆಗಳು ಆದದ್ದನ್ನು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನಾವು ನೋಡಬೇಕು. ಇದನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಬೇಕು. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಯಾವುದೇ ಸಂದರ್ಭದಲ್ಲಿ ಸರ್ಕಾರಿ ನೌಕರರು ಅನಿರ್ದಿಷ್ಟ ಕಾಲಾವಧಿಯಲ್ಲಿ ನಾವು ಮುಷ್ಕರ ಮಾಡುತ್ತೇವೆ ಎಂದು ಕರೆ ಕೊಟ್ಟಿದ್ದು ಇಲ್ಲ. ಇದನ್ನು ಬಹಳ ಸರಳವಾಗಿ ನಾವು ತಿಳಿದುಕೊಳ್ಳಬೇಕು? ಹಿಂದೆ ಸ್ಟ್ರೈಕ್‌ಗೆ ಕಾಲ್ ಕೊಟ್ಟಿರಬಹುದು ಪೆನ್‌ಡೌನ್ ಸ್ಟ್ರೈಕ್‌ಗೆ ಕಾಲ್ ಕೊಟ್ಟಿರಬಹುದು. ಆದರೆ ಯಾವುದೇ ಸಂದರ್ಭದಲ್ಲಿ ಅನಿರ್ದಿಷ್ಟ ಕಾಲದವರೆಗೆ ಸ್ಟ್ರೈಕ್‌ಗೆ ಕಾಲ್ ಕೊಟ್ಟಿದ್ದು ಇಲ್ಲ, ತಮಗೆ ಗೊತ್ತಿರಬಹುದು, ಆಂಧ್ರದಲ್ಲಿ, ಉತ್ತರ ಪ್ರದೇಶದಲ್ಲಿ, ಇದು ಒಂದು ರಾಷ್ಟ್ರವ್ಯಾಪಿ ಸರ್ಕಾರಿ ನೌಕರರ ಮುಷ್ಕರದ ಧಾಟಿಯ ಬದಲಾವಣೆ ಏನಿದೆ ಅನಿರ್ದಿಷ್ಟ ಕಾಲದ ಮುಷ್ಕರದ ಕರೆಯನ್ನು ಕೊಡತಕ್ಕಂಥಾದ್ದು ಇದನ್ನು ರಾಷ್ಟ್ರವ್ಯಾಪಿ ಹಿನ್ನಲೆಯಲ್ಲಿ ನೋಡಬೇಕಾಗಿದೆ. ಉತ್ತರ ಪ್ರದೇಶದಲ್ಲಿ ಮತ್ತು ಆಂಧ್ರಪ್ರದೇಶದಲ್ಲಿ ಅನಿರ್ದಿಷ್ಟ ಕಾಲದ ಮುಷ್ಕರಕ್ಕೆ ಒಂದು ಕರೆ ಕೊಟ್ಟಿದ್ದು ಮಾತ್ರವಲ್ಲ, I think for more than 50 days, they went on strike. ಈ ಎರಡು ರಾಜ್ಯಗಳಲ್ಲಿ ಕೂಡ More than one month or sometimes 50 days they have gone on strike. ನಾವು ಸರ್ಕಾರದಲ್ಲಿ ಕುಳಿತುಕೊಳ್ಳುವಾಗ we cannot take incidents in isolation. ಅದನ್ನು ಮಾಡದೇ ಇದ್ದಿದ್ದರೆ ಬಹುಶಃ ಮುಂದಾಲೋಚನೆ ಇಲ್ಲದಂಥ ಒಂದು ಸರ್ಕಾರ ನಮ್ಮದಾಗುತ್ತಿತ್ತು. ನಾವು ಇದಕ್ಕೆ ಸಿದ್ಧರಿರಬೇಕಾಗುತ್ತದೆ. We are left with two options, either to concede all their demands or to face indefinite strike as happened in U.P. or Andhra Pradesh. ತಾವು ದಯವಿಟ್ಟು ಇದನ್ನು ಅರ್ಥ ಮಾಡಿಕೊಳ್ಳಬೇಕು. ನಾವು ಚುನಾವಣೆಯನ್ನು ೨೫ನೇ ತಾರೀಖಿಗೆ ಮಾಡುತ್ತೇವೆ ಎಂದು ಹೇಳಿದಮೇಲೆ strike call was given They have chosen the time. They may be wise enough, They are wise enough. ಏಕೆಂದರೆ, ನಾವು ಚುನಾವಣೆಯನ್ನು ಮಾಡುತ್ತೇವೆ ಎಂದು ಘೋಷಣೆ ಮಾಡುವುದಕ್ಕೂ, ಅವರು ಅನಿರ್ದಿಷ್ಟ ಕಾಲಾವಧಿಯ ಮುಷ್ಕರದ ಕರೆ ಕೊಡುವುದಕ್ಕೂ, ತಾವು ಆಲೋಚನೆ ಮಾಡಬೇಕು. This is all calculated deliberate to put the Government and drive the Government to the walls so that the Government is not left with any options but to concede their demands. ಸರ್ಕಾರಕ್ಕೆ ವಿಚಾರ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ.

SRI D. B. CHANRDRE GOWDA.—At that point of time why did you not take all of us into confidence ?

SRI M. VEERAPPA MOILY.—There I agree with you. That we should have done it. ಮುಷ್ಕರಕ್ಕೆ ಕರೆ ಕೊಟ್ಟಾಗ ತಮ್ಮನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ನನ್ನ ಆರ್ಗ್ಯುಮೆಂಟ್ ಇಲ್ಲ. ಈಗ ಒಂದು ವಿಚಾರ ಸರ್ಕಾರಿ ನೌಕರರು ಅನಿರ್ದಿಷ್ಟಕಾಲದ ಮುಷ್ಕರಕ್ಕೆ ಕರೆ ಕೊಟ್ಟಿದ್ದಾರೆ. You know it is unprecedented in the history of Karnataka. If the Opposition Leaders, you had some kind of control over the Goverment employees...

SRI D. B. CHANDRE GOWDA.—Dont, make us beggars.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸರ್ಕಾರದ ಧೋರಣೆ ಯಾವರೀತಿ ಇದೆ ಎಂದು ಹೇಳಿದರೆ, ಸರ್ಕಾರಿ ನೌಕರರು ಅನಿರ್ದಿಷ್ಟ ಕಾಲದವರೆಗೆ ಮುಷ್ಕರ ಮಾಡುತ್ತೇವೆಂದು ಹೇಳಿದಾಗ, ಎಲೆಕ್ಷನ್ ಪೋಸ್ಟ್ ಫೋನ್ ಮಾಡುವುದಕ್ಕೆ ನಮ್ಮನ್ನು ಯಾರನ್ನೂ ಕರೆಸಲಿಲ್ಲ ಇದಾದನಂತರ ಮತ್ತೆ ಎಲೆಕ್ಷನ್ ಡೇಟ್ ನಿಗದಿ ಮಾಡಬೇಕಾದರೆ ನಮ್ಮನ್ನು ಬನ್ನಿ ಎಂದು ಕರೆಯುತ್ತೀರಿ. ಏಕೆಂದರೆ, ಇದು ನಿಮಗೆ ಕನ್‌ವೀನಿಯಂಟ್ ಆಗಿದೆ. ಸೂಟ್ ಆಗಿದೆ. ಇಲ್ಲಿ ನಾವು ಏನಾದರೂ ಆಗುವುದಿಲ್ಲ ಎಂದು ಹೇಳಿದರೆ, that is not desirable ಎಂದು ಹೇಳುತ್ತೀರಿ.

ಶ್ರೀ ಕೆ. ಹೆಚ್. ಪಾಟೀಲ್.—ನಿಜ, ತುರ್ತು ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿಗಳು ತೀರ್ಮಾನ ತೆಗೆದುಕೊಂಡರು. ಆಮೇಲೆ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಕರೆದರು. ಆಗ ನೀವು ಚುನಾವಣೆಯನ್ನು ಮುಂದಕ್ಕೆ ಹಾಕಬೇಡಿ ಎಂದು ಹೇಳಬಹುದಿತ್ತು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಚುನಾವಣಾ ದಿನಾಂಕವನ್ನು ಗೊತ್ತು ಮಾಡಿದಾಗಲೇ, ಅವರು ಮುಷ್ಕರ ಮಾಡುತ್ತೇವೆಂದು ಹೇಳಿದ್ದಾರೆ...ಹಾಗಂತ ಹೇಳಿದ ಮೇಲೆಯೇ ನೌಕರರನ್ನು ಮಾತುಕತೆಗೆ ಕರೆಸಿದ್ದ....

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ಇವತ್ತೂ ಕೂಡ ಮಾನ್ಯ ಮೊಯ್ಲಿಯವರು ಆರ್ಗ್ಯುಮೆಂಟ ಮಾಡಿದರೂ ಸಹಿತ ನಿಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದಲೇ ಹೇಳಿದ್ದು. ಇವತ್ತು ಈ ಬಿಲ್ಲನ್ನು ಮಾಡೋಣ ಎಂದು ಹೇಳಿದರೆ ಮಾಡೋಣ, ಬಿಡೋಣ ಎಂದು ಹೇಳಿದರೆ ಬಿಡೋಣ. ಈ ಹೌಸನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಹೇಳುತ್ತಿದ್ದೇವೆ. ಯಾವರೀತಿಯಿಂದ ಮಾಡಬೇಕು, ಇದನ್ನು ಎಲೆಕ್ಷನ್ ಕ್ಯಾನ್ಸಲ್ ಮಾಡಬೇಕೆ ಅಥವಾ ಮುಂದಕ್ಕೆ ಹಾಕಬೇಕೇ ಎಂಬ ಸಮಸ್ಯೆ ನಮ್ಮ ಎದುರಿಗೆ ಇರುವಾಗ. ಕ್ಯಾನ್ಸಲ್ ಮಾಡುವುದಕ್ಕಿಂತ ಮುಂದಕ್ಕೆ ಹಾಕುವುದು ವಿಹಿತ ಎಂಬ ಅಭಿಪ್ರಾಯಕ್ಕೆ ಬಂದು ಹೇಳಿದ್ದಾರೆ. ಈ ಸಲ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಯಾವ ಕಾರಣಕ್ಕೂ 7ನೇ ತಾರೀಖಿನ ಚುನಾವಣೆಯನ್ನು ಮುಂದಕ್ಕೆ ಹಾಕುವುದಿಲ್ಲ ಎಂದು ಸ್ಪಷ್ಟವಾಗಿ ಆಶ್ವಾಸನೆ ಕೊಟ್ಟಿರುವಾಗ ಮತ್ತೆ ಏಕೆ ಇದರ ಬಗ್ಗೆ ವಿಶೇಷ ಚರ್ಚೆ...

(ಗೊಂದಲ)

ಉಪಾಧ್ಯಕ್ಷರು.—ದಯಮಾಡಿಟ್ಟು ಮಂತ್ರಿಗಳು ಅವರ ಉತ್ತರವನ್ನು ಮುಗಿಸಲಿ, ಅನಂತರ ತಾವು ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ.—ಎಲೆಕ್ಷನ್ ಕ್ಯಾನ್ಸಲ್ ಮಾಡಬೇಕೋ ಅಥವಾ ಮುಂದೆ ಹಾಕಬೇಕೋ ಎಂದು ಹೇಳುವುದಕ್ಕೆ ಆರ್ಡಿನೆನ್ಸ್ ತಂದಿದ್ದೀರಿ. ಕ್ಯಾನ್ಸಲ್ ಮಾಡಬೇಕೆಂದು ಅವರ ಪಕ್ಷದಲ್ಲೇ ಡಿಮ್ಯಾಂಡ್ ಇತ್ತು. ಏಕೆಂದರೆ ಚುನಾವಣೆ ಡಿಕ್ಲೇರ್ ಮಾಡಿದಾಗ ನಮ್ಮನ್ನು ಯಾರನ್ನೂ ಕೇಳಲಿಲ್ಲ ಎಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ಯಾರನ್ನೂ ಕೇಳದೇ ನೀವು ಚುನಾವಣೆಯನ್ನು ಡಿಕ್ಲೇರ್ ಮಾಡಿದ್ದೀರಿ ಎಂದು ನಿಮ್ಮ ಪಕ್ಷದಲ್ಲೇ ಡಿಮ್ಯಾಂಡ್ ಇತ್ತು. ಯಾರನ್ನೂ ಕೇಳದೇ ಹೇಳದೇ ದಿಢೀರನೆ ಚುನಾವಣೆಯನ್ನು ತಂದುಬಿಟ್ಟಿರಿ ಅಭ್ಯರ್ಥಿಗಳನ್ನು ಸೆಲೆಕ್ಟ್ ಮಾಡಿಬಿಟ್ಟಿರಿ, ಇದು ಒಂದು ರೀತಿಯ ದರ್ಬಾರು ಮಾಡುತ್ತಿದ್ದೀರಿ ಎಂದು ಪತ್ರಿಕೆಗಳಲ್ಲಿ ಬಂದಿದೆ. ಅವರು ಈಲ್ ಆಗಲೇಬೇಕಾಗುತ್ತದೆಂದು ಹೇಳಿ, ಕ್ಯಾನ್ಸಲ್ ಎಂಬುದನ್ನು ತೆಗೆದು ಪೋಸ್ಟ್ ಪೋನ್ ಮೆಂಟ್ ಇರಲಿ ಎಂದು ಆರ್ಡಿನೆನ್ಸ್ ತಂದಿದ್ದಾರೆ. There was no necessity. They will insist that it shall be cancelled and fresh proceedings have to be started. ಆಗ ಕೊಟ್ಟಿರುವ ಟಿಕೆಟ್‌ಗಳೆಲ್ಲ ಚೇಂಜ್ ಆಗುತ್ತವೆ. ಅದನ್ನು ಗಮನದಲ್ಲಿಟ್ಟು ಕೊಂಡು, ಈ ಆರ್ಡಿನೆನ್ಸ್ ತಂದಿದ್ದೀರಾ. ಅಷ್ಟು ಬಿಟ್ಟರೆ ನಮ್ಮನ್ನು ಉದ್ಧಾರ ಮಾಡುವುದಕ್ಕೇ ಆಗಲಿ ಅಥವಾ ಜನರನ್ನು ಉದ್ಧಾರ ಮಾಡುವುದಕ್ಕೇ ಆಗಲಿ ಆರ್ಡಿನೆನ್ಸ್ ತಂದಿಲ್ಲವೆಂದು ನನ್ನ ಭಾವನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಿಮ್ಮವರು ಹೊರಗೆ ಹೇಳಿದ್ದನ್ನೇ ನಾವು ಇಲ್ಲಿ ಒಳಗೆ ಹೇಳಿದ್ದೇವೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈಗ ಸನ್ಮಾನ್ಯ ಜಾಲಪ್ಪನವರ ವಿಚಾರಶಕ್ತಿಗೆ ನಾನು ಶರಣು. ನಿಮ್ಮ ಮನಸ್ಸಿನೊಳಗೆ ಏನಾಗುತ್ತದೆ ನಮ್ಮ ಮನಸ್ಸಿನೊಳಗೆ ಏನಾಗುತ್ತದೆ ಎಂಬ ಆಲೋಚನೆ ಬಹಳ ಇದೆ. ಏನಾದರೂ ವೈಯಕ್ತಿಕವಾಗಿ ನಮಗೆ ಸಮಸ್ಯೆ ಇದ್ದರೆ, ತಮ್ಮ ಹತ್ತಿರ ಬಂದು ಕೇಳುತ್ತೇವೆ. ಏಕೆಂದರೆ ಮಾನ್ಯ ಜಾಲಪ್ಪನವರ ಹತ್ತಿರ ಅತೀಂದ್ರಿಯ ಶಕ್ತಿ ಇರುವುದರಿಂದ ಆ ಶಕ್ತಿಯ ಪ್ರಭಾವದ ಅನುಭವವನ್ನು ನಾವು ಮಾಡಿಕೊಳ್ಳುತ್ತೇವೆ.

ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ನಾವೇನು 18ನೇ ತಾರೀಖಿನ ದಿವಸ ನಿರ್ಣಯ ತೆಗೆದುಕೊಂಡೆವು ಅದನ್ನು ತೆಗೆದುಕೊಳ್ಳದಿದ್ದರೆ ಯು. ಪಿ. ನಲ್ಲಿ ಏನು ಆಯಿತು ಆಂಧ್ರ ಪ್ರದೇಶದಲ್ಲಿ ಏನಾಯಿತು ಅದೇ

ಇಲ್ಲೂ ನಡೆಯುತ್ತಿತ್ತು. When the government servants came to know that the government is very firm, come what may to deal with their question, they also came for discussion. There is no doubt about that. Otherwise they would have taken us to task. Rather you should congratulate the government which was no infirm hands. There is no such infirmity in the government stand. ಅಧ್ಯಕ್ಷರೆ, ಇಲ್ಲಿ ಒಂದು ವಿಚಾರ ಬಹಳ ಸೂಕ್ಷ್ಮವಾಗಿ ಬಂತು. ಸನ್ಮಾನ್ಯ ಚಂದ್ರೇಗೌಡರು ಪ್ರಸ್ತಾಪ ಮಾಡಿದ ವಿಚಾರ ಸರಿ. ಆದರೆ ಈ ವಿಚಾರದ ಒಗ್ಗೆಯೂ ತಾವು ಯೋಚನೆ ಮಾಡಬೇಕು. ಪ್ರಾವಿಜನ್ಸ್‌ಗೆ ನಾನು ಆಮೇಲೆ ಬರುತ್ತೇನೆ. ೧೫ನೇ ತಾರೀಖು ಸರಕಾರ ಈ ಚುನಾವಣಾ ವಿಚಾರದ ಬಗ್ಗೆ ನಿರ್ಣಯ ಮಾಡುವ ಹಿನ್ನೆಲೆ ಏನೆಂದರೆ, ಸರ್ಕಾರಿ ನೌಕರರು ಅನಿರ್ದಿಷ್ಟ ಕಾಲಾವಧಿಯ ಸ್ಟ್ರೈಕ್ ಶುರು ಮಾಡಿಬಿಟ್ಟಿದ್ದರು. It was their choice. Even in the opinion of the Cheif Electoral Officer, he reported to us that the election process cannot go on with the Government servants' strike. ಅದರಲ್ಲಿ ಎರಡು ವಿಧ ಇದೆ. ಬ್ಯಾಲೆಟ್ ಪೇಪರ್ಸ್ ಅಲ್ಲಿ ಪ್ರಿಂಟ್ ಆಗಬೇಕಾಗಿತ್ತು, ಇದರೆ ಅವರು ಅಲ್ಲಿ ಪ್ರಿಂಟ್ ಮಾಡುವುದಿಲ್ಲ. ನಾಡಿದ್ದು ಚುನಾವಣೆಗೆ ಮೊಬಲೈಸ್ ಆಗಬೇಕು, ಟ್ರೈನಿಂಗ್ ಆಗಬೇಕು, ಅವರು ಟ್ರೈನಿಂಗ್‌ಗೆ ಬರುವುದಿಲ್ಲ. ೨೫ನೇ ತಾರೀಖು ಚುನಾವಣೆ ಇತ್ತು, ೧೫ನೇ ತಾರೀಖಿನ ದಿವಸ ಡಿಸಿಷನ್ ತೆಗೆದುಕೊಂಡಿದ್ದೇವೆ, ಚುನಾವಣೆಗೆ ೧೦ ದಿವಸ ಉಳಿದಿದೆ ೨೫ನೇ ತಾರೀಖಿನ ಚುನಾವಣೆಗೆ ಅವರು ಬರದೇ ಹೋದರೆ ಯಾರು ಚುನಾವಣೆ ನಡೆಸಬೇಕು. ಮಿಲಿಟರಿಯವರನ್ನು ಕರೆದುಕೊಂಡು ಬಂದು ಅಲ್ಲಿ ಪೋಲೀಂಗ್ ಆಫೀಸರ್. ಪ್ರಿಸೈಡಿಂಗ್ ಆಫೀಸರ್‌ನ್ನಾಗಿ ಮಾಡುವುದಕ್ಕೆ ಆಗುತ್ತದೆಯೋ ? ಅಥವಾ ಪೋಲೀಸರನ್ನು ಅಥವಾ ಸಿ. ಆರ್. ಪಿ. ಎಫ್‌ನವರನ್ನು ಕರೆದು ನೀವು ಪ್ರಿಸೈಡಿಂಗ್ ಆಫೀಸರ ಆಗಿ, ನೀವು ಪೋಲಿಂಗ್ ಆಫೀಸರ್ ಆಗಿ, ನೀವು ರಿಟರ್ನಿಂಗ್ ಆಫೀಸರ್ ಆಗಿ ಎಂದು ಮಾಡಲಿಕ್ಕೆ ಆಗುತ್ತದೆಯೋ ? ಯಾರನ್ನು ತೆಗೆದುಕೊಂಡು ನಾವು ಚುನಾವಣೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಚುನಾವಣೆ ವಿಚಾರಕ್ಕೆ ದಹನ ಸಂಸ್ಕಾರ ಮಾಡಬೇಕು. ಹೆಣ ಹೂಳುವುದು ಒಳ್ಳೆಯದು. ಚುನಾವಣೆಯು ಶಕ್ತಿ ನೆಗೆದು ಬಿದ್ದು ಹೋಗಿದೆ. ರಾಜ್ಯದಲ್ಲಿ ಎಲ್ಲೂ ಉಳಿದಿಲ್ಲ. ಚುನಾವಣೆ ಬಗ್ಗೆ ಒಂದು ರೀತಿಯಲ್ಲಿ ಮಂಕು ಕವಿದಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆದುದರಿಂದ ಚೀಫ್ ಎಲೆಕ್ಟೋರಲ್ ಆಫೀಸರ್ ಬಂದು if he gives a report saying that the election process cannot go on what should be done ? There is a report with the government. It is not necessary to lay all the reports. I am telling you on the floor of the House, as a Minister who has taken oath and there is authentic report which is given by the Cheif Electoral Officer saying that the election process cannot go on when the empoyees are on strike. If he says like that what we should do ? Can we say 'It is your headache. You go on with the election. It is the government's intention.' If we say so, then we are imposing a decision on the Cheif Electoral Officer. We are imposing a decision on the Chief Electoral Officer. What happens ? What are the consequences for him to face ? ಯಾವುದೇ ಜವಾಬ್ದಾರಿ ಸರಕಾರ ಈ ತರಹದ ಆದೇಶ ಕಳಿಸಲಿಕ್ಕೆ ಸಾಧ್ಯ ಇದೆಯೋ ? ದಯವಿಟ್ಟು ಹೇಳಿರಿ. ನಾವು ಒಂದು ವೇಳೆ ಅವರಿಗೆ ಅಧಿಕಾರಿಗಳು ಬಗಲಿ, ಬರದೇ ಇರಲಿ ಅಥವಾ ಚುನಾವಣೆ ಏನಾದರೂ ಆಗಿಬಿಡಲಿ ಎಲೆಕ್ಷನ್ ಪ್ರೋಸೆಸ್ ನಿಂತುಹೋಗಲಿ ಬಿಟ್ಟು ಹೋಗಲಿ ನೀವು ಚುನಾವಣೆ ನಡೆಸಲೇಬೇಕೆಂದು ಹೇಳಿದ್ದರೆ, ನಮ್ಮ ಸರಕಾರ ಅತ್ಯಂತ ಹೊಣೆಗೇಡಿತನದ ಸರಕಾರ ಆಗುತ್ತಿತ್ತು. ಯಾವ ಸ್ವಂತ ಬುದ್ಧಿ ಇದ್ದಂಥ ಸರಕಾರ ಇದನ್ನು ಮಾಡುತ್ತದೆ ? I want you to appreciate this kind of a problem. ನಿಮ್ಮ ಆರ್ಗ್ಯುಮೆಂಟಿಗೆ ಇದು ವಿರುದ್ಧ ಆಗುತ್ತಿತ್ತು. ಎಲೆಕ್ಷನ್ ಪ್ರೋಸೆಸ್‌ಗೆ ನೀವು ಕೈಹಾಕಬೇಡಿ, ಅಥವಾ ಎಲೆಕ್ಷನ್‌ನಲ್ಲಿ ಸರಕಾರ ಹಸ್ತಕ್ಷೇಪ ಮಾಡಬಾರದು, ಚೀಫ್ ಎಲೆಕ್ಟೋರಲ್ ಆಫೀಸರ್‌ಗೆ ಬಿಟ್ಟುಬಿಡಿರಿ, ಮೋಹಂ ವಿಚಾರದಲ್ಲಿ ಕೂಡ ಸರಕಾರ ಕೈಹಾಕಲಿಕ್ಕೆ

ಆಗಲಿಲ್ಲ ಎಂದು ಹೇಳಿದಿರಿ. Election Commission itself took decision. ಇಲ್ಲೂ ಕೂಡಾ Cheif Electoral Officer in his own wisdom has taken a decision. Whether the decision which he has arrived at is on a proper ground or proper jurisdiction or justified or not, sometimes even the government cannot question his wisdom. ಆ ಅಭಿಪ್ರಾಯಕ್ಕೆ ಅವರು ಬಂದು ಇವತ್ತು ಚುನಾವಣಾ ಪ್ರೋಸಸ್ ಮಾಡುವುಕ್ಕೆ ಆಗುವುದಿಲ್ಲ ಚುನಾವಣೆ ನಡೆಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. Suppose the government imposes a decision is it democratic Dr. Nanjunda Swamy? It is highly undemocratic to impose a decision of the kind on the Cheif Electoral Officer who says that 'I cannot conduct the election and the election process cannot go on,' ಅಂತಹ ಪರಿಸ್ಥಿತಿ ಬಂದಾಗ ಸರ್ಕಾರ ಏನು ಮಾಡಬೇಕು? ಆದ್ದರಿಂದ ಇದಕ್ಕೆ ಒಂದೇ ಮುಖ ಇಲ್ಲ. ಇದಕ್ಕೆ ನಾನಾ ಮುಖಗಳು ಇವೆ. ನಾನಾ ರೀತಿಯ ಪರಿಸ್ಥಿತಿಗಳು ಉದ್ಭವವಾಗಿ ಈ ಒಂದು ನಿರ್ಣಯಕ್ಕೆ ಸರ್ಕಾರ ಬರಲೇಬೇಕಾದಂತಹ ಪ್ರಸಂಗ ಬಂತು. Government was given to think. Government was happy about the decision.

ಶ್ರೀ ವಾಟಾಳ್ ನಾಗರಾಜ್.—ಇದು ನಿಮ್ಮ ಪಾಪದ ಕೆಲಸದಿಂದ ಆದದ್ದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರ ಪಾಪದ ಕೆಲಸ ಎನ್ನುವುದನ್ನು ಜನತೆ ನಿರ್ಣಯ ಮಾಡುತ್ತದೆ, ತಾವೇಕೆ ಮಾಡುತ್ತೀರಿ. But, I am telling you that there is a report from the Chief Electoral Officer. On the basis of that report also and on the situation which has been prevailing, government came to the conclusion that this election process cannot go on? then we took the decision to postpone the election, there was no option left altogother except to take a decision to postpone it. ಅಮೇಲೆ ಸರ್ಕಾರಿ ನೌಕರರು ಹಿಂದಕ್ಕೆ ವಾಪಸ್ ಬಂದಿರಬಹುದು But, as on 15th what was the position? ಅಲ್ಲಿಯವರೆಗೂ ಕಾಯಬಹುದಿತ್ತು ಅಂದರೆ, ಅದು ಕೊನೆಯಲ್ಲಿ ಬಂದರೆ ಏನಾಗುತ್ತದೆ? Things would have been still worse. Candidates would have suffered. Political parties would have suffered more. ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ನಾನು ಇವತ್ತು ಸದನದ ಗಮನಕ್ಕೆ ತರಬಯಸುತ್ತೇನೆ. ಏತಕ್ಕೆ ಚುನಾವಣೆ ಮಾಡದೆ ಪೋಸ್ಟ್‌ಪೋನ್ ಮಾಡಿದಿರಿ ಡಿಲಿಮಿಟೇಶನ್ ಮಾಡಬಹುದಿತ್ತಲ್ಲ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ನಾವು ಅಧಿಕಾರಕ್ಕೆ ಬಂದ ಮೇಲೆ ತಕ್ಷಣ ಲೋಕಲ್ ಬಾಡೀಸ್‌ಗೆ ಚುನಾವಣೆ ಮಾಡುವುದು ಪಾಪದ ಕೆಲಸವೇ? ಚುನಾವಣೆ ಮಾಡಲೇಬೇಕು. ತಮ್ಮ ಹಾಗೆ ಚುನಾವಣೆಗೆ ಹೆದರಿ ಪೋಸ್ಟ್‌ಪೋನ್ ಮಾಡಿ ಆಡಳಿತಾಧಿಕಾರಿಯನ್ನು ಹಾಕಲಿಲ್ಲ ಆ ಕೆಲಸ ನಾವು ಮಾಡಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ನಾವು ಚುನಾವಣೆಗೆ ಹೆದರಲಿಲ್ಲ.

(ಗೊಂದಲ)

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಈಲ್ಡ್ ಆಗಿಲ್ಲ, ತಾವೆಲ್ಲಾ ಕುಳಿತುಕೊಳ್ಳಿ.

ಶ್ರೀ ಆರ್. ವಿ. ದೇಶಪಾಂಡೆ.—ಪ್ರಜಾಪ್ರಭುತ್ವದಲ್ಲಿ ನಿಮಗೆಷ್ಟು ವಿಶ್ವಾಸ ಇತ್ತೆಂದು ಎಲ್ಲರಿಗೂ ಗೊತ್ತಿದೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ತಾವು ಕೋ-ಆಪರೇಟಿವ್ ಸೊಸೈಟಿಗಳಿಗೆ ಚುನಾವಣೆ ಮಾಡದೆ ಎಷ್ಟು ಸಾರಿ ಮುಂದಕ್ಕೆ ಹಾಕಿದಿರಿ. ಇದುವರೆಗೂ ಮಾಡಲಿಲ್ಲ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ.—ಆ ಬಗ್ಗೆ ಕಡತಗಳು ನಿಮ್ಮಲ್ಲಿ ಈಗ ಇವೆ, ತಾವೇ ನೋಡಿಕೊಳ್ಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಸದಸ್ಯರಾದ ಶ್ರೀಮಾನ್ ಕೆ.ಹೆಚ್. ಪಾಟೀಲ್‌ರವರು ಬಹಳ ಹಿರಿಯ ಸದಸ್ಯರು. ಅವರ ಬಗ್ಗೆ ನಮಗೆ ಗೌರವ ಇದೆ. ಈ ಪುರಸಭೆಗಳ ಟರ್ಮ್ ೫ ವರ್ಷ ಮಾಡಬೇಕೆನ್ನುವ ಬಿಲ್ ಇಂಟರ್‌ಡ್ಯೂಸ್ ಮಾಡಿದಾಗ ನಾವು ಒತ್ತಾಯ ಮಾಡಿದ್ದೇವೆ. ಮುನ್ಸಿಪಾಲಿಟಿಗಳ ಚುನಾವಣೆ ಮಾಡುತ್ತಿದ್ದೀರಿ. ಸಂತೋಷ, ಬೇಗ ಮಾಡಿ ಎಂದು ಹೇಳಿದ್ದೇವೆ. ಎ.ಪಿ.ಎಂ.ಸಿ ಚುನಾವಣೆ ಮಾಡಿ ಎಂದು ಹೇಳಿದ್ದೇವೆ. ಡೀ ಲಿಮಿಟೇಶನ್ ಮಾಡಿ ಎಂದು ಹೇಳಿದ್ದೇವೆ. ೧೯೭೨ ಜನಶಾಸಕರು ಗೆದ್ದು ಬಂದಿದ್ದೀರಿ, ಈ ಗಾಳಿ ಇದೆಯೆಂದು ಯಾರನ್ನೂ ಕೇಳದೆ ಚುನಾವಣೆ ಮಾಡಲು ಡಿಕ್ಲೇರ್ ಮಾಡಿದಿರಿ ಆದರೆ ಇವತ್ತು ಏನೋ ತೊಂದರೆಗೆ ಸಿಕ್ಕಿಬಿದ್ದಿರಿ, ಪಾರಾಗಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಅಷ್ಟೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಈಗ ವಾಸ್ತವಾಂಶವನ್ನು ಯಾರೂ ಮರೆಮಾಚುವುದಕ್ಕೆ ಆಗುವುದಿಲ್ಲ. ದಿನಾಂಕ ೧-೧-೮೯ರಿಂದ ತಾವು ಚುನಾವಣೆ ಮಾಡದೆ ಆಡಳಿತಾಧಿಕಾರಿಯ ನೇಮಕ ಮಾಡಿ ನಿಮ್ಮ ಪ್ರಜಾಪ್ರಭುತ್ವದ ಸಲ್ಲಕ್ಷಣಗಳನ್ನು ತೋರಿಸಿದ್ದು ಇಡೀ ಕರ್ನಾಟಕಕ್ಕೆ ಗೊತ್ತಿದೆ. ತಾವು ತಮ್ಮ ಪರಿಸ್ಥಿತಿ ಹೇಗಿತ್ತೋ ಅದನ್ನು ನೋಡಿಕೊಂಡು ಮಾಡಿದಿರಿ. ಆ ಮೇಲೆ ಡೀಲಿಮಿಟೇಶನ್ ವಿಚಾರ ಹೇಳಿದ್ದಾರೆ. ೧೯೮೫ರಲ್ಲಿ ಚುನಾವಣೆ ಮಾಡಿದಾಗ ಡೀಲಿಮಿಟೇಶನ್ ಮಾಡಬೇಕೆಂಬ ಆಲೋಚನೆ ಮಾನ್ಯ ದೇಶಪಾಂಡೆಯವರಿಗೆ ಬಂದಿತ್ತಾ,

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಮೊಯಿಲಿಯವರೆ ಒಂದು ನಿಮಿಷ. ನಾವು ಕೆಲವು ತಪ್ಪು ಮಾಡಿದ್ದೇವೆಂತಲೇ ಇಲ್ಲಿ ಬಂದು ಕುಳಿತಿದ್ದೇವೆ. ನೀವೂ ಆ ತಪ್ಪನ್ನು ಮಾಡುತ್ತೀರೇನೊ ?

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ದೇಶಪಾಂಡೆಯವರು–now you have come to the correct point. ಚುನಾವಣೆ ಪೋಸ್ಟ್ ಪೋನ್ ಮಾಡಿ ತಪ್ಪು ಮಾಡಿದ್ದೇವೆಂದು ಹೇಳಿದ್ದಾರೆ. ನಾವು ಅದಕ್ಕೆ ಹೇಳಿದ್ದು ಚುನಾವಣೆ ಆದಕೂಡಲೇ ಲೋಕಲ್ ಬೋರ್ಡ್‌ಗಳ ಚುನಾವಣೆಗಳನ್ನು ಯಾವ ಕಾರಣದಿಂದಲೂ ಮುಂದುವರಿಸುವುದು ಬೇಡ ಅವರು ಮಾಡಿದಂಥ ಘೋರ ಅಪರಾಧ ನಾವು ಮಾಡುವುದು ಬೇಡ ಎಂದು ಚುನಾವಣೆಯನ್ನು ಘೋಷಿಸಿದ್ದು ಇನ್ನು ಡೀಲಿಮಿಟೇಷನ್ ಕ್ವೆಶ್ಚನ್. ೧೯೮೫ರಲ್ಲಿ ನೀವು ಡೀಲಿಮಿಟೇಷನ್ ಇಲ್ಲದೆ ಚುನಾವಣೆ ಮಾಡಿದಿರಿ. ೧೯೮೮ರ ವರೆಗೆ ಡೀಲಿಮಿಟೇಷನ್ ಮಾಡುವಂಥ ಸೌಜನ್ಯ ಅಥವಾ ತಮ್ಮ ಕರ್ತವ್ಯವನ್ನು ತಾವು ನೆರವೇರಿಸಲಿಲ್ಲ. you have not done it till you lay down the office...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ.—೧೯೭೧ ರಿಂದ ಸೆನ್ಸಸ್ ಆಗಬೇಕಾಗಿತ್ತಲ್ಲ. It is same in 1981. Census had not taken place......

SRI M. VEERAPPA MOILY.—Madam, I am on my legs.

SRI D.B. CHANDRE GOWDA.—I am just making out a point......

MADAM DEPUTY SPEAKER:—I cannot force him to yield when the Minister is not yielding......

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಯೀಲ್ಡ್ ಆಗಿಲ್ಲ. ನೀವು ಈ ತರಹ ಮಾತನಾಡಿದರೆ ಹೇಗೆ ?

SRI R.V. DESHAPANDE—The most important was the Local Authorities, of Mysore. Bailahongal they become more unwieldy ಆಗಿದೆ. ಡೀಲಿಮಿಟೇಷನ್ ಮಾಡ್ರಿ ಎಂದು ಒತ್ತಾಯ ಮಾಡಿದ್ದೇವೆ. ಆ ಸಮಯದಲ್ಲಿ ರಿವಿಜನ್ ಆಫ್ ಓಟರ್ ಲಿಸ್ಟ್...... Please go through the files. Already a file has been built and it was referred to the Law Department when I was the Minister Please go through that file ...

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಾನು ಈ ಸಂಬಂಧದ ಎಲ್ಲಾ ರೆಕಾರ್ಡ್‌ಗಳನ್ನು ನೋಡಿದ್ದೇನೆ. ಈಗ ದಯಮಾಡಿ ಏನಿದ್ದರೂ ಸ್ವಲ್ಪ ಬರೆದುಕೊಳ್ಳಿ, ಆ ಮೇಲೆ ಬೇಕಾದರೆ ಸ್ಪಷ್ಟೀಕರಣ ಕೇಳಿ. ಈಗ ಪ್ರಶ್ನೆ ಏನು ಬಂದಿದೆ ಎಂದರೆ ೧೯೮೫ರಲ್ಲಿ ತಾವು ಡೀಲಿಮಿಟೇಷನ್ ಇಲ್ಲದೆ ಚುನಾವಣೆ

ನಡೆಸಿದ್ದೀರಿ. ಆಗ ತಮಗೆ ಸಾಕಷ್ಟು ಸಮಯ ಇತ್ತು. ೧೯೮೪ರಿಂದ ೮೫ರವರೆಗೆ ಡೀಲಿಮಿಟೇಷನ್ ಮಾಡಿ ಮುಗಿಸಬಹುದಾಗಿತ್ತು. ನಾವು ಚುನಾವಣೆ ಮಾಡಬೇಕೆಂದು ರಿಕಾರ್ಡ್ ನೋಡಿದಾಗ ನಮಗೆ ಪರಮಾಶ್ಚರ್ಯವಾಯಿತು. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಪ್ರಜಾಪ್ರಭುತ್ವದಲ್ಲಿ ಮೂಲಾಧಾರಿತ ಎಂದು ಹೇಳುತ್ತಿದ್ದಂಥ ತಮ್ಮ ಸರ್ಕಾರ ಡೀಲಿಮಿಟೇಷನ್ ಮಾಡತಕ್ಕಂಥ ಮೂಲಭೂತ ಪ್ರಾಥಮಿಕ ಕರ್ತವ್ಯವನ್ನು ಮಾಡಲಿಲ್ಲವೆಂದರೆ ಹೇಗೆ ? ತಾವು ತಮ್ಮ ಅರ್ಬನ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಇಟ್ಟುಕೊಂಡು ಏನು ಮಾಡುತ್ತಿದ್ದೀರಿ ಎಂದು ನನಗೆ ಆಶ್ಚರ್ಯವಾಯಿತು. Delimitation is basic duty on the part of the Government. ಇದನ್ನು ತಾವು ಮಾಡದಿದ್ದರೆ ನೀವು ಬೇರೆ ಏನೋ ಮಾಡುತ್ತಿದ್ದೀರೆಂದು ಅರ್ಥವಾಗುತ್ತದೆ. ಆದಕಾರಣ, ನಾವು ಬಂದ ತಕ್ಷಣ ಲೋಕಲ್ ಬಾಡಿಗಳ ಚುನಾವಣೆಗಳನ್ನು ಘೋಷಣೆ ಮಾಡಿದೆವು. ಡೀಲಿಮಿಟೇಷನ್ ವಿಚಾರ ಹೇಳಬೇಕಾದರೆ, ನಾವು ಡೀಲಿಮಿಟೇಷನ್ ಮಾಡುವುದಕ್ಕೆ ಹೋಗಿದ್ರೆ ಚುನಾವಣೆಗಳನ್ನು ಇನ್ನು ೬-೭ ತಿಂಗಳುಗಳಾದ ಮೇಲೆ ಮಾಡಬೇಕಾಗುತ್ತಿತ್ತು ಡೀಲಿಮಿಟೇಷನ್ ಮಾಡಿ ನಂತರ ಚುನಾವಣೆ ಮಾಡುವುದಕ್ಕೆ ಹೋಗಿಬಿದ್ದರೆ ಆಗ ಮಳೆಗಾಲ ಬಂದಿರುತ್ತಿತ್ತು. ಚುನಾವಣೆ ಅಕ್ಟೋಬರ್‌ನಲ್ಲಿ ಡೀಲಿಮಿಟೇಷನ್ ಆಗೇ ಆಗಬೇಕೆಂದು ತಾವೆಲ್ಲರೂ ಒಮ್ಮತದ ಅಭಿಪ್ರಾಯ ಆಗಲೇ ಕೊಟ್ಟಿದರೆ we could have definitely gone in for a delimitation. ಆ ಅಭಿಪ್ರಾಯ ತಮ್ಮದಲ್ಲ. Even to day if this is the consensus of the entire House to go for de-limitation then go for the election, Government will not hesitate to do it. ಇದರಲ್ಲಿ ಪಾಯಿಂಟ್ ಪ್ರಶ್ನೆ ಅಲ್ಲ. ತಮ್ಮ ಆರ್ಗ್ಯುಮೆಂಟ್ ಹೇಗಿದೆಯೆಂದು ಇದರಲ್ಲಿ ಗೊತ್ತಾಗುತ್ತದೆ. ಯಾವುದಾದರು ಒಂದು ಚರ್ಚೆಗೆ ಗುರಿ ಇರಬೇಕು, ನಿಮ್ಮ ಆರ್ಗ್ಯುಮೆಂಟ್‌ನಲ್ಲಿ ಜಸ್ಟಿಫಿಕೇಷನ್ ಇರಬೇಕಾಗುತ್ತದೆ. it must have goal to be reached or certain objective to be achieved. ಇಷ್ಟೆಲ್ಲಾ ಮಾತನಾಡುತ್ತೀರಿ, ನೀವು ಡೀಲಿಮಿಟೇಷನ್ ಮಾಡದೆ ಚುನಾವಣೆ ಮಾಡಿದ್ದೀರಿ ಈಗಲೂ ಡೀಲಿಮಿಟೇಷನ್ ಮಾಡಬೇಕೆಂದು ತಾವುಗಳೆಲ್ಲರೂ ಒಪ್ಪಿಕೊಳ್ಳುವುದಾದರೆ ಮಾಡೋಣ Yes we are ready for that......

ನಾವು ೧೫ನೇ ತಾರೀಖಿನಂದು ಚುನಾವಣೆಯನ್ನು ಮುಂದಕ್ಕೆ ಹಾಕಲಿಕ್ಕೆ ನಿರ್ಣಯವನ್ನು ತೆಗೆದುಕೊಂಡ ಮೇಲೆ ಮುಂದೆ ಯಾವಾಗ ಚುನಾವಣೆಯನ್ನು ಮಾಡಬೇಕೆಂದು ನಾನು ನಿರ್ಣಯ ಮಾಡುವಾಗ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಮಾಡಬೇಕೆಂದು ಆಗ ಮಾನ್ಯ ಮುಖ್ಯಮಂತ್ರಿಯವರು ಆಹ್ವಾನವನ್ನು ಕೊಟ್ಟಿದ್ದರು. ಒಂದು ವೇಳೆ ತಮ್ಮ ಮನಸ್ಸಿನಲ್ಲಿ ಡಿಲಿಮಿಟೇಷನ್ ಮಾಡಬೇಕೆಂಬ ಸದಿಚ್ಛೆ ಇದ್ದಿದ್ದರೆ ಅಥವಾ ಇಂಥ ತಾರೀಖು ಬೇಡ, ಇಂಥ ತಾರೀಖು ಬೇಕು ಎಂದು ನಾವು ನಿರ್ಧರಿಸುವಾಗ ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇರುತ್ತಿರಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ನೀವು ಡಿಲಿಮಿಟೇಶನ್ ಬಗ್ಗೆ ಆ ಸಂದರ್ಭದಲ್ಲಿ ಹೇಳಿರಲಿಲ್ಲ; ಚುನಾವಣೆ ಬೇಗ ನಡೆಸಿ ಎಂದು ಹೇಳಿದಿರಿ. ಈಗಲಾದರೂ ತಾವು ಗ್ಯಾರಂಟಿಯಾಗಿ ೨೯ನೇ ತಾರೀಖಿಗೆ ಚುನಾವಣೆಗಳನ್ನು ನಡೆಸುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.— ನಾವು ಮಾಡುವ ವಾದವು ಶುಷ್ಕವಾಗಬಾರದು. ಅದಕ್ಕೆ ಪುಷ್ಟಿ, ಶಕ್ತಿ ಬೇಕಾಗುತ್ತದೆ. ನಾವು ಆಹ್ವಾನ ಮಾಡಿದಾಗ ತಾವುಗಳು ಬರಲಿಲ್ಲ. ಈ ಬಗ್ಗೆ ಒಂದು ದಿನಾಂಕವನ್ನು ಫಿಕ್ಸ್ ಮಾಡಿದ ಮೇಲೆ ಅದಕ್ಕೆ ಆಕ್ಷೇಪಣೆ ಆಯಿತು. ನಾವು ಚುನಾವಣೆ ಮುಂದಕ್ಕೆ ಹಾಕಿದ ಕೂಡಲೆ ಚುನಾವಣೆ ಆಗಲೇಬೇಕು ಎಂದು ಸತ್ಯಾಗ್ರಹವನ್ನು ಮಾಡಿದ್ದೀರಿ. ಹಾಗಾದರೆ ಏನು ಮಾಡಬೇಕು ? ಈಗ ಚುನಾವಣೆಯನ್ನು ಮಾಡೋಣ ಎಂದು ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ೨೯ನೇ ತಾರೀಖಿಗೆ ಚುನಾವಣೆಯು ನಡೆದೇ ನಡೆಯುತ್ತದೆ. We are not going to postpone the date.

ಶ್ರೀ ವಾಟಾಳ್ ನಾಗರಾಜ್.— ಸೂರ್ಯ ಉದಯ ಆಗುತ್ತದೋ ಇಲ್ಲವೋ ಎಂದು ಸ್ವಲ್ಪ ಅನುಮಾನ ನಮಗೆ ಇದೆ...

SRI M. VEERAPPA MOILY.— We took a decision to have elections on 29th. We are not going to postpone it and this is not the ques of we are seeking your mercy and you are seeking our mercy. It the decision. ನಾವು ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಲಿಕ್ಕೆ ತಮ್ಮೆಲ್ಲರನ್ನು ಕರೆದಾಗ, ತಾವುಗಳು ವಿರೋಧ ಪಕ್ಷದ ನಾಯಕರು ಬೇರೆ ಏನನ್ನೂ ಹೇಳಲಿಲ್ಲ ಅಂದು ಸರಕಾರ ಯಾವ ತಾರೀಖನ್ನು, ನಿಗದಿಪಡಿಸುತ್ತದೆ ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ ಎಂದು ಹೇಳಿದ್ದಾರೆ. You said

it is for the Government to fix a date ಎಂದು ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. he said then Government took a decision and fixed the date. ೨೨ನೇ ತಾರೀಖು ಎಂದು ನಿರ್ಣಯ ಮಾಡಿದಾಗ ಅಂದು ರಮ್‌ಜಾನ್ ಹಬ್ಬ ಇದೆ ಎಂದು ಎಲ್ಲಾ ಕಡೆಯಿಂದಲೂ ಹೇಳಿಕೆ ಬಂತು. ೨೨ಕ್ಕೆ ರಮ್‌ಜಾನ್‌ದ ಸೀಸನ್ ಇರಬಹುದೇ ಹೊರತು ಆ ದಿವಸ there is no such specific festival.

SRI QUMURAL ISLAM.— I said it in view of Holi, Ugadi–Easter and Ramzan the Election should be postponed, and some other date should be fixed...

ಶ್ರೀ ಎಂ. ವೀರಪ್ಪ ಮೊಯಿಲಿ.— ೨೨ ರಂದು ರಮ್‌ಜಾನ್ ಏಕೆ ಮಾಡುತ್ತೀರಿ ಎಂಬ ಪ್ರಶ್ನೆ ಎತ್ತಿದ್ದಾರೆ ಎತ್ತಲಿಲ್ಲ ಎಂದು ದಯಮಾಡಿ ಹೇಳಬೇಡಿ. ಈಗ ದಿನ ನಿಗದಿ ಮಾಡುವುದರಲ್ಲಿ ಏನಾಗಿದೆ ಆದರೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಯಾವಾಗಲೂ ಒಂದಲ್ಲ ಒಂದು ಹಬ್ಬ ಇದ್ದೇ ಇರುತ್ತದೆ. ಹಿಂದೂಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹಬ್ಬಗಳು ಇದ್ದೇ ಇವೆ. There may be major festival or minor festival ಅಷ್ಟೇ ಇರಬಹುದು. ಇದಾದ ಮೇಲೆ, ಹೋಳಿಯ ದಿವಸ ಬೇಡ, ಯುಗಾದಿಯ ದಿವಸ ಬೇಡ ಎಂದೂ ಆಯಿತು. ಮತ್ತೆ ಈಸ್ಟರ್ ಬಂತು ಅಂದೂ ಕೂಡ ಬೇಡ ಎಂದು ಆಯಿತು. alright we have oblised to everyone. ಈಗ ಕ್ರಿಶ್ಚನ್‌ರಿಗೂ ಒಬ್ಲೈಜ್ ಮಾಡಿದ್ದೇವೆ. We wanted to over act on secularsium. ಹೀಗೆ ನೋಡಿದರೆ ಹಿಂದೂಗಳಿಗೆ ಎರಡು ಬಾರಿ ಒಬ್ಲೈಜ್ ಮಾಡಿದ ಹಾಗೆ ಆಯಿತು.

೩.೩೦ ಪಿ.ಎಂ.

Fortunately 22nd there is no festival specifically for Muslims even then we have respected certain sentiments...

ಶ್ರೀ ಬಿ. ಎಸ್. ಯಡಿಯೂರಪ್ಪ.— ಸರ್ಕಾರ ಯಾವುದೇ ಒಂದು ತೀರ್ಮಾನ ತೆಗೆದುಕೊಂಡ ಮೇಲೆ ಅದಕ್ಕೆ ಅನುಕೂಲಕರವಾಗಿ ತಿದ್ದುಪಡಿ ತರಬೇಕಾಗುತ್ತದೆ. ನಮ್ಮ ಅಭಿಪ್ರಾಯ ನಾವು ಹೇಳುತ್ತೇವೆ. ಹಿರಿಯ ಮಂತ್ರಿಗಳಾದ ಶ್ರೀ ಮೊಯ್ಲಿಯವರು ೨೨ನೇ ತಾರೀಖು ಯಾವುದೇ ಹಬ್ಬವಿಲ್ಲವೆಂದು ಹೇಳಿದರು. ತಮಗೆ ಮನವರಿಕೆಯಾಗಿದ್ದರೆ ಅದನ್ನು ಮುಂದೂಡುವಂಥ ಅಗತ್ಯ ಇರಲಿಲ್ಲ. ಒಂದು ಸಾರಿ ವಿಶೇಷವಾದ ಕಾರಣದಿಂದ ಮುಂದೂಡಿದ ಮೇಲೆ ೨೯ನೇ ತಾರೀಖು ಚುನಾವಣೆ ಮಾಡುವುದು ಬೇಡ ಎಂದು ಇಡೀ ದೊಡ್ಡ ಸಮಾಜ ಮತ್ತು ಇಡೀ ಸದನ ಹೇಳುತ್ತಿರಬೇಕಾದರೆ ನೀವು ಅದನ್ನು ಕಿವಿಗೆ ಹಾಕಿಕೊಳ್ಳದೆ ಏಕೆ ನಿಷ್ಠೂರ ಮಾಡಿಕೊಂಡು ಅದನ್ನು ಮೈಮೇಲೆ ಹಾಕಿಕೊಳ್ಳುವಂಥ ಪ್ರಯತ್ನ ಮಾಡುತ್ತೀರಿ. ಒಂದು ಸಾರಿ ೨೨ಕ್ಕೆ ಒಬ್ಲೈಜ್ ಮಾಡಿದಮೇಲೆ ಅಷ್ಟೇ ಧಾರಾಳವಾಗಿ ಇದರ ಬಗ್ಗೆ ಏಕೆ ತೀರ್ಮಾನ ತೆಗೆದುಕೊಳ್ಳುವುದಿಲ್ಲ. ಇದು ತಪ್ಪಾಗುವುದಿಲ್ಲವೇ ?

SRI M. VEERAPPA MOILY.— I am not arguing on that. ಆದರೆ ಪರಿಸ್ಥಿತಿ ಏನಾಯಿತೆಂದರೆ, I must take the House into confidence 28ಕ್ಕೆ ಚುನಾವಣೆ ಮಾಡಬೇಕು ಎಂದರೆ ಅವತ್ತು ಬಸವ ಜಯಂತಿ. ೨೯ಕ್ಕೆ ಚುನಾವಣೆ ದಿವಸವಂತೂ ಬಸವ ಜಯಂತಿ ಅಲ್ಲ. I have government calender. ಅದರ ಪ್ರಕಾರ ೨೮ಕ್ಕೆ ಬಸವಜಯಂತಿ. ೨೯ನೇ ತಾರೀಖು ಶಂಕರ ಜಯಂತಿ. Shankar Jayanthi to have celebrate some section of the Hindus who celebrates. ಸ್ವಲ್ಪ ಇನ್‌ಕನ್ವೀನಿಯನ್ಸ್ ಆಗುತ್ತದೆ.

SRI R. V. DESHPANDE.— Chief Minister will be the authority to decide the date.

SRI M. VEERAPPA MOILY.— ೨೨ಕ್ಕೆ ನಿರ್ಧಾರ ಮಾಡಿದೆವು. ಮತ್ತೆ ೨೯ ಆಯಿತು. It will become a subject for public criticism. So, it is not the intention of the Government to postpone the elections...
Hon'ble Chief Minister more than once has already announced. ಆದ್ದರಿಂದ ಅಧ್ಯಕ್ಷರೇ, ಇದರಲ್ಲಿ ಕಾನೂನಿನ ತೊಂದರೆ ಇಲ್ಲ. ಇದಕ್ಕೆ ಸಂವಿಧಾನದ ಬಾಧಕವೂ ಅಲ್ಲ. ನಾನು ಹೇಳಿದೆ. The Division Bench itself decided about the constitutionaty. ಇದೇನು ಹೊಸದಾದಂಥ ಒಂದು ಕಾನೂನಿನ ಪರಿಕ್ರಮವೂ ಅಲ್ಲ. ಮುಂನಿಸಿಪಾಲಿಟಿ

ಆಕ್ಟಿನಲ್ಲಿ ಈಗಾಗಲೇ ಇದೆ. ಮತ್ತೆ ರೂಲ್ ೨೬ರಲ್ಲಿ ಇದನ್ನು ಬದಲಾವಣೆ ಮಾಡಲಿಕ್ಕೆ ಅವಕಾಶವಿಲ್ಲ. ಇದು ಒಂದು ದಿವಸದ ಪ್ರಶ್ನೆಯಲ್ಲ ಇನ್ನು ಮುಂದೆ ಕೂಡ ಇಂಥ ಪರಿಸ್ಥಿತಿ ಬಂದರೆ ಮುನಿಸಿಪಾಲಿಟಿ ಆಕ್ಟಿನಲ್ಲಿ ಯಾವ ರೀತಿ ಪ್ರೊವಿಜನ್ ಮಾಡಿದ್ದೇವೆ, ಸದಾಕಾಲ ಇಂತಹ ಪರಿಸ್ಥಿತಿಯನ್ನು ನಾವು ಎದುರಿಸಲಿಕ್ಕೆ ಒಂದು ಅವಕಾಶ ಇರಬೇಕು. ಈಗಾಗಲೇ ನಾವು ಚುನಾವಣೆ ೨೯ನೇ ತಾರೀಖು ಎಂದು ನಿರ್ಣಯಿಸಿರುವುದರಿಂದ ಈ ಕಾನೂನಿನ ಬಲದಿಂದ ನಾವು ಬೇಕಾದ ಹಾಗೆ ಮುಂದುವರಿಸುತ್ತೇವೆಂಬ ಒಂದು ದೂರು, ಶಂಕೆ ಈ ಸದನಕ್ಕಾಗಲೀ ಸನ್ಮಾನ್ಯ ಸದಸ್ಯರಿಗಾಗಲೀ ಬರಬೇಕಾದಂಥ ಅವಶ್ಯಕತೆ ಇಲ್ಲ. ಆದ್ದರಿಂದ ಇಂಥ ಕಾನೂನಿನ ಪ್ರಕ್ರಿಯೆಗಳಿಗೆ ಸರ್ಕಾರ ಮೊರೆ ಹೋಗಿದೆಯೇ ಹೊರತು ಏನೋ ಹೊಸದಾಗಿ ಪ್ರಜಾಪ್ರಭುತ್ವದ ಸದ್‌ಭಾವನೆಗಳಿಗೆ ಒಂದು ಆತಂಕ, ಬಾಧಕ ತರತಕ್ಕಂಥ ವ್ಯವಸ್ಥೆಗೆ ಹೋಗಲಿಲ್ಲ. ಆದ್ದರಿಂದ ಪ್ರಾಮಾಣಿಕವಾಗಿ ಸದ್ಭಾವನೆಯಿಂದ ಮಾಡಿದಂಥ ಈ ನಿರ್ಣಯವನ್ನು ಮತ್ತು ಈ ಮಸೂದೆಯನ್ನು ಎಲ್ಲ ಸದಸ್ಯರೂ ಒಮ್ಮತದಿಂದ ಮಂಜೂರು ಮಾಡಿಕೊಡಲಿಕ್ಕೆ ಅವಕಾಶ ಕೊಡಬೇಕೆಂದು ತಮ್ಮ ಮುಖೇನ ನಾನು ಮಾನ್ಯ ಸದಸ್ಯರನ್ನು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಮಗೆ ಕಾನೂನು ಸಚಿವರ ವಿವರಣೆ ಸಮಾಧಾನವನ್ನಂತೂ ತಂದಿಲ್ಲ. ಸಮಾಧಾನ ತರುವಷ್ಟು ರೀತಿಯಲ್ಲಿ ಅವರು ಮಾಡಿಲ್ಲ ಎಂದಲ್ಲ, ವಸ್ತು ಸ್ಥಿತಿಯೇ ಹಾಗೆ ಇದೆ. ಈ ಶಾಸನವೇ ಒಂದು ರೀತಿಯಾದ ವಿಕೃತ ಹಾಗೂ ಕರಾಳವಾದ ಶಾಸನ. ಆದ್ದರಿಂದ ನಾವಂತೂ ಈ ಶಾಸನಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ನಮಗೆ ಇದಕ್ಕಿಂತ ಬೇರೆ ಮಾರ್ಗವಿಲ್ಲ. ಇಂತಹ ಶಾಸನಗಳನ್ನು ಇಲ್ಲಿ ಕುಳಿತು ವಿರೋಧ ಮಾಡುವುದಕ್ಕಿಂತಲೂ ಹೊರಗೆ ಹೋಗುವುದೇ ಶ್ರೇಷ್ಠವೆಂದು ತಿಳಿದು ನಾವು ಹೊರಗೆ ಹೋಗುತ್ತಿದ್ದೇವೆ.

(ಮಾನ್ಯ ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ''೧೯೯೦ರ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಉಪಾಧ್ಯಕ್ಷರು.—''ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ :—

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಎದ್ದು ನಿಂತು ಮಾತನಾಡುತ್ತಿದ್ದರು. ಗೊಂದಲಮಯ ವಾತಾವರಣ ಉಂಟಾಗಿತ್ತು.)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷರೇ, ನಾನು ಬೆಳಗಾವಿ ಮಹಾನಗರ ಪಾಲಿಕೆಯ ಬಗ್ಗೆ ಪ್ರಸ್ತಾಪ ಮಾಡಿದೆ. ಮತ್ತು ಮರಾಠಿ ಧ್ವಜದ ಬಗ್ಗೆ ಹಾಗೂ ಅಲ್ಲಿ ವಿಭಾಗ-ವಿಭಾಗಗಳನ್ನು ಬದಲಾವಣೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿಲ್ಲ. ಇದೊಂದು ಕೆಟ್ಟ ಮಸೂದೆ, ವಿಕೃತ ಮಸೂದೆ, ಆದ್ದರಿಂದ ಈ ಮಸೂದೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಪರವಾಗಿ).—೧೯೯೦ರ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, "೧೯೯೦ನೇ ಇಸವಿಯ ಕರ್ನಾಟಕ ಮಹಾನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

(ಮುಂದುವರಿದುದು)

† ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ, ಮಾಡಿದಂಥ ಭಾಷಣಕ್ಕೆ ವಂದನಾರ್ಪಣೆ ಮಾಡತಕ್ಕಂಥ ಸಂದರ್ಭದಲ್ಲಿ ನನ್ನ ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊನ್ನೆ ಮಾಡಿದಂಥ ನನ್ನ ಭಾಷಣವನ್ನು ಮುಂದುವರಿಸುತ್ತಾ, ಈಗಾಗಲೇ ರಾಜ್ಯಪಾಲರು ತಮ್ಮ ಭಾಷಣದಲ್ಲಿ "ಸರ್ಕಾರಿ ಜಮೀನುಗಳ ಅನಧಿಕೃತ ಸ್ವಾಧೀನಾನುಭವವನ್ನು ಸಕ್ರಮಗೊಳಿಸಲು ನನ್ನ ಸರ್ಕಾರವು ತತ್ವಶಃ ಒಂದು ಪ್ರಜ್ಞಾಪೂರ್ವಕ ನಿರ್ಣಯವನ್ನು ತೆಗೆದುಕೊಂಡಿದೆ" ಎಂದು ತಿಳಿಸಿದ್ದಾರೆ. ಈ ರಾಜ್ಯದ ರೈತನ ಬಹು ದಿನಗಳ ಬೇಡಿಕೆಗಳಲ್ಲಿ ಒಂದಾದ ಅಕ್ರಮಣ ಭೂಮಿಯನ್ನು ಒತ್ತುವರಿ ಭೂಮಿಯನ್ನು ಅಥವಾ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವಂಥದ್ದು. ಸುಮಾರು ೧೯೭೮ರ ಪೂರ್ವದಲ್ಲಿ ರಾಜ್ಯದಲ್ಲಿ ಯಾರು ಅಕ್ರಮಣ ಭೂಮಿಯನ್ನು, ಸರ್ಕಾರದ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಅದನ್ನು ಕೃಷಿಗೆ ಉಪಯೋಗಿಸುತ್ತಿದ್ದರು, ಆ ಭೂಮಿಯನ್ನು ಸಕ್ರಮಗೊಳಿಸುವಂಥ ವ್ಯವಸ್ಥೆ ಇತ್ತು. ಅದರ ನಂತರ ಅಧಿಕಾರಕ್ಕೆ ಬಂದಂಥ ಜನತಾ ಪಕ್ಷವಾಗಲಿ ಅಥವಾ ಜನತಾ ದಳದ ಸರ್ಕಾರವಾಗಲಿ ಈ ಒಂದು ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸತಕ್ಕಂಥ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಲಿಲ್ಲ. ಈ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೆ, ಸುಮಾರು ಆರು ವರ್ಷಗಳಿಂದ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಹಿಂದಿನ ಸರ್ಕಾರ ಕೊಟ್ಟಿತ್ತು.

ಆದರೆ ಈ ಅಕ್ರಮ ಭೂಮಿಯನ್ನು ಸಕ್ರಮಗೊಳಿಸುವಂತಹ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿಲ್ಲ. ಸರ್ಕಾರಕೊಟ್ಟಿರತಕ್ಕ ಅಂಕಿ ಅಂಶಗಳ ಪ್ರಕಾರ ಎಷ್ಟು ಜನ ರೈತರು ಭೂಮಿಯನ್ನು ಅಕ್ರಮಣ ಮಾಡಿಕೊಂಡಿದ್ದಾರೆ ಎಂಬ ವಿಚಾರಕ್ಕೆ ಹೋದಾಗ ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ ಅಕ್ರಮಣ ಮಾಡಿಕೊಂಡಿದ್ದಾರೆ ಎನ್ನುವಂಥ ವಿಚಾರ ನಾವು ಗ್ರಾಮ ಮಟ್ಟದಲ್ಲಿ ಹೋದಾಗ ಕಂಡುಬರುತ್ತದೆ. ಕಳೆದ ವಿಧಾನ ಸಭೆ ಅಧಿವೇಶನದ ಸಂದರ್ಭದಲ್ಲಿ ನಾನು ನನ್ನ ಕ್ಷೇತ್ರದ ಪ್ರತಿ ಗ್ರಾಮದಲ್ಲಿ ಎಷ್ಟು ಜನ ಅಕ್ರಮಣದಾರರು ಇದ್ದಾರೆ ಎಂದು ಹೆಸರು ಮತ್ತು ವಿಳಾಸ ಕೇಳಿದಾಗ ಕೇವಲ ಗ್ರಾಮದ ರಸ್ತೆ ಬದಿಯಲ್ಲಿ ರೈತರು ಯಾರು ಇದ್ದಾರೆ ಅವರ ಅಕ್ರಮಣವನ್ನು ಮಾತ್ರ ದಾಖಲು ಮಾಡಿಕೊಂಡಿದ್ದಾರೆಯೇ ಹೊರತು ನಿಜವಾಗಿ ಯಾರು ಗ್ರಾಮಾಂತರ ಪ್ರದೇಶದಲ್ಲಿದ್ದಾರೆ ಮತ್ತು ಯಾರು ಒಳನಾಡಿನಲ್ಲಿದ್ದಾರೆ ಅಂತಹವರ ಅಕ್ರಮಣವನ್ನು ದಾಖಲೆ ಮಾಡತಕ್ಕ ಕೆಲಸವನ್ನು ಮಾಡಿಲ್ಲ. ಅದೂ ಅಲ್ಲದೆ ರೈತರು ಮುಖ್ಯವಾಗಿ ಹೊಂದಿಕೊಂಡಿರತಕ್ಕ ಅವರ ಕುಂಕಿ ಹಕ್ಕು ಅಂದರೆ ಅವರ ಭೂಮಿಗೆ ಹೊಂದಿಕೊಂಡಿರತಕ್ಕ ಸ್ಥಳದಲ್ಲಿ ಕೃಷಿ ಕೆಲಸ ಮಾಡತಕ್ಕಂಥ ಕುಂಕಿ ಹಕ್ಕನ್ನು ಖಾಯಂ ಮಾಡಬೇಕೆಂಬ ವಿಚಾರ,